ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 16 ಭಾನುವಾರ 2022

ಸಂಪುಟ: 43 | ಸಂಚಿಕೆ: 180 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528, ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮೈಸೂರಿನ ಎಲೆ ತೋಟದ ಬಳಿ ದೈತ್ಯ ಮೊಸಳೆ ಪ್ರತ್ಯಕ್ಷ

● ಅಜುಬಾಜಿನ ನಿವಾಸಿಗಳಲ್ಲಿ ಆತಂಕ: ಮುನ್ನೆಚ್ಚರಿಕೆ ವಹಿಸಲು ಸೂಚನೆ ● ಸುರಕ್ಷಿತ ಸೆರೆಗೆ ಕಾರ್ಯಾಚರಣೆ ವಿಫಲ ● ಇಂದು ಮತ್ತೆ ಮೈಸೂರು ಮೃಗಾಲಯ, ಅರಣ್ಯ ಇಲಾಖೆ ತಂಡದಿಂದ ಕಾರ್ಯಾಚರಣೆ


ಮೈಸೂರು, ಅ.15(ಎಸ್‌ಬಿಡಿ)– ಮೈಸೂರಿನ ರಾಜ ಕಾಲುವೆಯಲ್ಲಿ ಶನಿವಾರ ಬೃಹತ್ ಗಾತ್ರದ ಮೊಸಳೆ ಪ್ರತ್ಯಕ್ಷವಾಗಿದ್ದು, ಅದನ್ನು ಸೆರೆ ಹಿಡಿಯುವ ಕಾರ್ಯಾಚರಣೆ ವಿಫಲವಾಗಿರುವುದರಿಂದ ಸುತ್ತಮುತ್ತಲ ನಿವಾಸಿಗಳು ಆತಂಕಗೊಂಡಿದ್ದಾರೆ. ನಗರದ ಎಲೆತೋಟದ ಸರ್ಕಲ್ ಬಳಿ ರಾಜಕಾಲುವೆಯಲ್ಲಿ ಮೊಸಳೆ ಇರುವುದನ್ನು ಅಕ್ಕಪಕ್ಕದ ಮಳಿಗೆಗಳಲ್ಲಿ ಕೆಲಸ ಮಾಡುವವರು ಗಮನಿಸಿದ್ದಾರೆ. ವಿಷಯ ತಿಳಿದು, ಅರಣ್ಯ ಇಲಾಖೆ ಅಧಿಕಾರಿಗಳು ಮಧ್ಯಾಹ್ನ ಸುಮಾರು 1 ಗಂಟೆಗೆ ಸ್ಥಳಕ್ಕಾಗಮಿಸಿದಾಗ ರಾಜಕಾಲುವೆ ಮೂಲೆಯ ಹಳ್ಳದಲ್ಲಿ ಮೊಸಳೆ ಕಾಣಿಸಿಕೊಂಡಿದೆ. ಆರ್‌ಎಫ್‌ಓ ಸುರೇಂದ್ರ, ಡಿಆರ್‌ಎಫ್‌ಓ ಎಂ.ವಿ. ವೆಂಕಟಾಚಲ ಹಾಗೂ ಸಿಬ್ಬಂದಿ ಸ್ಥಳದಲ್ಲೇ ಮೊಕ್ಕಾಂ ಹೂಡಿ, ಮೊಸಳೆ ಚಲನವಲನದ ಬಗ್ಗೆ ನಿಗಾ ಇಟ್ಟಿದ್ದರು.

ಇದೇ ವೇಳೆ ಅರಣ್ಯಾಧಿಕಾರಿಗಳು ಮೈಸೂರು ಮೃಗಾಲಯ ಅಧಿಕಾರಿಗಳನ್ನು ಸಂಪರ್ಕಿಸಿ ಮೊಸಳೆ ಸೆರೆಗೆ ತಂಡ ಕಳುಹಿಸಲು ಕೇಳಿದರು. ಸಂಜೆ ಸುಮಾರು 4 ಗಂಟೆಗೆ ಅಗತ್ಯ ಪರಿಕರಗಳೊಂದಿಗೆ ಆಗಮಿಸಿದ ಮೃಗಾಲಯ ಸಿಬ್ಬಂದಿ ತಂಡ, ಕೂಡಲೇ ಕಾರ್ಯಾಚರಣೆ ಆರಂಭಿಸಿತು. ಮೊಸಳೆಯಿದ್ದ ಸ್ಥಳದಲ್ಲಿ ಕಾರ್ಯಾಚರಣೆ ನಡೆಸುವುದು ಕ್ಲಿಷ್ಟಕರವಾಗಿತ್ತಾದರೂ ಸೆರೆ ಹಿಡಿಯಲು ಸಿಬ್ಬಂದಿ ಮುಂದಾದರು. ನೀರು ಹರಿಯುವ ಕಡೆಗೆ ರಾಜಕಾಲುವೆ ಅಡ್ಡಲಾಗಿ ಬೃಹತ್ ಬಲೆ ಹಾಕಿ, ತಳದಿಂದ ಹಾದು ಹೋಗದಂತೆ ▶ 8ನೇ ಪುಟಕ್ಕೆ



ನಿಗಾ ವಹಿಸಲಿದ್ದೇವೆ

ಈ ಬಗ್ಗೆ ಡಿಆರ್‌ಎಫ್‌ಓ ಎಂ.ವಿ.ವೆಂಕಟಾಚಲ ಪ್ರತಿಕ್ರಿಯಿಸಿ, ಮೂರು ಬಾರಿ ಹಗ್ಗಕ್ಕೆ ಸಿಲುಕಿಕೊಂಡಿದ್ದ ಮೊಸಳೆ ಜನರ ಗದ್ದಲದಿಂದ ಆತಂಕಗೊಂಡು ಒದ್ದಾಡಿತು. ಪರಿಣಾಮ ಹಗ್ಗ ಬಿಗಿಗೊಳಿಸುವಷ್ಟರಲ್ಲಿ ಅದು ನುಣುಚಿಕೊಂಡಿತು. ಕತ್ತಲಾಗಿದ್ದರಿಂದ ಕಾರ್ಯಾಚರಣೆ ಸ್ಥಗಿತಗೊಳಿಸಿದ್ದೇವೆ. ಸಮೀಪದ ಬಡಾವಣೆ ನಿವಾಸಿಗಳಿಗೆ ಮೊಬೈಲ್ ಸಂಖ್ಯೆ ನೀಡಿದ್ದು, ಏನಾದರೂ ಮೊಸಳೆ ಕಾಣಿಸಿಕೊಂಡರೆ ಮಾಹಿತಿ ನೀಡುವಂತೆ ತಿಳಿಸಿದ್ದೇವೆ. ನಾಳೆ(ಅ.16) ಬೆಳಗ್ಗೆಯಿಂದ ಮೊಸಳೆ ಸೆರೆ ಹಿಡಿಯಲು ಕಾರ್ಯಾಚರಣೆ ಮುಂದುವರೆಸುತ್ತೇವೆ. ಮೊಸಳೆ ಯಾವ ಕಡೆಯಿಂದ ಬಂದಿದೆ ಎನ್ನುವುದು ತಿಳಿಯಬೇಕಿದೆ ಎಂದು ತಿಳಿಸಿದ್ದಾರೆ.



ಕೆಬಿಜಿಯವರ ಭೂಮಂತ್ರ... ಭೂಮಂತ್ರ...



ಓಂ ನಮಃ ಶಿವಾಯ

ॐ नमः शिवाय

■ ಪುಟ–4

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ನೂರಕ್ಕೆ ನೂರು ಸತ್ಯ...

ವಿಪಕ್ಷ ನಾಯಕ ಸಿದ್ದರಾಮಯ್ಯ ಸುದೀರ್ಘವಾಗಿ ಮಾತನಾಡಿ, ತಮ್ಮ ಸರ್ಕಾರದ ಸಾಧನೆಗಳನ್ನು ಅನಾವರಣಗೊಳಿಸುವ ಜೊತೆಗೆ ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳ ವಿರುದ್ಧ



ಕಿಡಿಕಾರಿದರು. ಮುಂದಿನ ಚುನಾವಣೆಯಲ್ಲಿ ರಾಜ್ಯದ ಜನರು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುತ್ತಾರೆ ಎಂಬುದು ನೂರಕ್ಕೆ ನೂರು ಸತ್ಯ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸೋನಿಯಾ ಗಾಂಧಿ ಅವರನ್ನು ಟೀಕಿಸಿದ್ದ ಶ್ರೀರಾಮುಲು 'ಪೆದ್ದ' ಎಂದು ಕರೆದರು. ಕಾಂಗ್ರೆಸ್ ಪಕ್ಷ ಮತ್ತು ನೆಹರು, ಇಂದಿರಾಗಾಂಧಿ, ಸೋನಿಯಾಗಾಂಧಿ ಅವರು ಈ ದೇಶಕ್ಕೆ ಏನೂ ಮಾಡಿಲ್ಲ ಎಂದು ಹೇಳಿರುವ ಶ್ರೀರಾಮುಲು ಅವರಿಗೆ ಇತಿಹಾಸವನ್ನು ನೆನಪಿಸುತ್ತಿದ್ದೇನೆ. 1977ರಲ್ಲಿ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಿದ್ದು ಯಾರು ಎಂಬುದು ಗೊತ್ತೆ? ಇಂದು ಸಾವಿರಾರು ಜನರಿಗೆ ಉದ್ಯೋಗ, ಆ ಮೂಲಕ ಅನ್ನಕ್ಕೆ ದಾರಿಯಾಗಿದ್ದರೆ ಅದಕ್ಕೆ ಇಂದಿರಾ ಗಾಂಧಿಯವರು ▶ 8ನೇ ಪುಟಕ್ಕೆ

ಭಾರತ ಐಕ್ಯತಾ ಯಾತ್ರೆ; 1000 ಕಿಲೋ ಮೀಟರ್ ಕ್ರಮಿಸಿದ ರಾಹುಲ್ ಗಾಂಧಿ

● ಬಳ್ಳಾರಿಯಲ್ಲಿ ಬಹಿರಂಗ ಸಭೆ: ಬಿಜೆಪಿ ವಿರುದ್ಧ ರಾಹುಲ್ ಗಾಂಧಿ ವಾಗ್ದಾಳಿ ● ಬಡವರಿಗಿನ್ನು ಸರ್ಕಾರಿ ನೌಕರಿ ಕನಸು ● ಹಣ ಇದ್ದವರಿಗೆ ಮಾತ್ರ ಉದ್ಯೋಗ ● ರಾಜ್ಯದ ಪ್ರತಿ ಕಾಮಗಾರಿಯಲ್ಲಿ 40% ಕಮಿಷನ್ ● ಪರಿಶಿಷ್ಟರ ವಿಚಾರದಲ್ಲಿ ಬಿಜೆಪಿ ಸರ್ಕಾರ ನಿರ್ಲಕ್ಷ್ಯ

ಬಳ್ಳಾರಿ, ಅ. 15– ಬಳ್ಳಾರಿಯ ಹಲಗುಂದಿ ಮಠದಿಂದ ಶನಿವಾರ ಆರಂಭವಾದ ರಾಹುಲ್ ಗಾಂಧಿಯವರ ಭಾರತ ಐಕ್ಯತಾ ಯಾತ್ರೆಯು ಮಧ್ಯಾಹ್ನ ಬಳ್ಳಾರಿಯ ಪುರಸಭೆ ಮೈದಾನ ತಲುಪುವುದರೊಂದಿಗೆ ಸಾವಿರ ಕಿಲೋಮೀಟರ್ ಕ್ರಮಿಸಿದೆ.

ಈ ವೇಳೆ ಪುರಸಭೆ ಮೈದಾನದಲ್ಲಿ ಆಯೋಜಿಸಿದ್ದ ಬೃಹತ್ ಸಮಾವೇಶದಲ್ಲಿ ಮಾತನಾಡಿದ ರಾಹುಲ್ ಗಾಂಧಿಯವರು, ನಿಮ್ಮಲ್ಲಿ ದುಡ್ಡಿದ್ದರೆ ಸರ್ಕಾರಿ ನೌಕರಿ ಖರೀದಿಸಬಹುದು. ಇಲ್ಲದಿದ್ದರೆ ಜೀವನ ಪರ್ಯಂತ ನಿರುದ್ಯೋಗಿಗಳಾಗಿರುವಂತಹ ಪರಿಸ್ಥಿತಿ ಕರ್ನಾಟಕದಲ್ಲಿ ನಿರ್ಮಾಣವಾಗಿದೆ ಎಂದು ಕಿಡಿಕಾರಿದರು. ಅಲ್ಲದೇ, ಅವರು ಇಂದಿನ ಭಾಷಣದಲ್ಲಿ ಹೆಚ್ಚಿನ ಭಾಗವನ್ನು ಕರ್ನಾಟಕಕ್ಕೆ ಸಂಬಂಧಿಸಿದಂತೆ ಮಾತನಾಡಿದ್ದು, ವಿಶೇಷವಾಗಿತ್ತು.

ಕರ್ನಾಟಕದಲ್ಲಿ 2.5 ಲಕ್ಷ ಸರ್ಕಾರಿ ಉದ್ಯೋಗಗಳು ಖಾಲಿ ಇವೆ. ಸಬ್ ಇನ್ಸ್‌ಪೆಕ್ಟರ್ ಹುದ್ದೆ ಪಡೆಯಬೇಕಾದರೆ 80 ಲಕ್ಷ ರೂ. ಲಂಚ ಕೊಡಬೇಕಾದಂತಹ ಪರಿಸ್ಥಿತಿ ಇದೆ. ಎಲ್ಲಾ ನೇಮಕಾತಿಗಳಲ್ಲಿ




ಬ್ರಹ್ಮಾಂಡ ಭ್ರಷ್ಟಾಚಾರ ನಡೆಯುತ್ತಿದ್ದು, ಪ್ರತಿಭಾನ್ವಿತ ಬಡವರಿಗೆ ಉದ್ಯೋಗ ದೊರೆಯುವುದು ಕನಸಾಗೇ ಉಳಿದಿದೆ. ಇಂತಹ ಪರಿಸ್ಥಿತಿಯನ್ನು ಬದಲಾಯಿಸಬೇಕಾದ ಅನಿವಾರ್ಯತೆ ಇದೆ ಎಂದರು. ಕರ್ನಾಟಕದಲ್ಲಿ ನಡೆಯುವ ಎಲ್ಲಾ ಕಾಮಗಾರಿಗಳಿಗೂ ಕಮಿಷನ್ ಪಡೆಯಲಾಗುತ್ತಿದೆ. ಹೀಗಾಗಿ ಈ ಸರ್ಕಾರಕ್ಕೆ ಶೇ. 40ರಷ್ಟು ಕಮಿಷನ್ ಸರ್ಕಾರ ಎಂಬ ಬಿರುದು ದೊರೆತಿದೆ ಎಂದು ಹೇಳಿದರು.

ರಾಜ್ಯದ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ವಿರುದ್ಧವಾಗಿ ಕೆಲಸ ಮಾಡುತ್ತಿದೆ ಎಂದ ಅವರು, ಈ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲಿನ ದೌರ್ಜನ್ಯ ಶೇ. 50ರಷ್ಟು ಹೆಚ್ಚಾಗಿದೆ. ಕಾಂಗ್ರೆಸ್ ಸರ್ಕಾರವಿದ್ದಾಗ ಈ ಸಮುದಾಯಗಳಿಗೆ ಮೀಸಲಿಟ್ಟಿದ್ದ 8 ಸಾವಿರ ಕೋಟಿ ರೂ. ಅನುದಾನವನ್ನು ಇಂದಿನ ಸರ್ಕಾರ ಬೇರೆ ಉದ್ದೇಶಕ್ಕಾಗಿ ವರ್ಗಾವಣೆ ▶ 8ನೇ ಪುಟಕ್ಕೆ

ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 150 ಕ್ಷೇತ್ರಗಳಲ್ಲಿ ಗೆಲುವು

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ
● ನಮ್ಮದೇ ಆಡಳಿತ ಮುಂದುವರೆಯಲಿದೆ; ಸಿಎಂ
● ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆ ಬಗ್ಗೆ ವ್ಯಂಗ್ಯ

ಬೆಂಗಳೂರು, ಅ. 15 (ಕೆಎಂಶಿ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ 150 ಕ್ಷೇತ್ರಗಳಲ್ಲಿ ಗೆಲ್ಲುವ ವಿಶ್ವಾಸವಿದೆ ಎಂದು ಸಿಎಂ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ರಾಜ್ಯ ವಿಧಾನ ಸಭಾ ಚುನಾವಣೆಗೆ



ಇನ್ನು ಐದಾರು ತಿಂಗಳು ಬಾಕಿ ಇದೆ. ಮತದಾರರ ವಿಶ್ವಾಸ ಗಳಿಸುವುದು ನಮಗೆ ಗೊತ್ತು. ಅವರ ಅನೇಕ ಜ್ವಲಂತ ಸಮಸ್ಯೆ ಗಳನ್ನು ಚುನಾವಣೆ ವೇಳೆಗೆ ಬಗೆಹರಿಸುತ್ತೇವೆ.

ಸ್ವಾತಂತ್ರ್ಯ ಬಂದ ದಿನದಿಂದಲೂ ಕೆಲವು ಸಮು ದಾಯಗಳಿಗೆ ಸವಲತ್ತುಗಳೇ ದೊರೆತಿಲ್ಲ. ಅವರಿಗೆ ದೊರೆಯದ ಸವಲತ್ತುಗಳನ್ನು ನಾವು ವರ್ಷಾಂತ್ಯದೊಳಗೆ ಕಲ್ಪಿಸುತ್ತೇವೆ. ಅಷ್ಟೇ ಅಲ್ಲ ಕಾನೂನು ತೊಡಕಿನಿಂದ ನೆನೆಗುದಿಗೆ ಬಿದ್ದಿರುವ ಕೆಲವು ನೀರಾವರಿ ಯೋಜನೆಗಳಿಗೆ ಅನುಮತಿ ಪಡೆದು, ನಾವೇ ಕಾಮಗಾರಿಗೆ ಚಾಲನೆ ನೀಡುತ್ತೇವೆ. ಕಾಂಗ್ರೆಸ್‌ನವರು ಹಾದಿಬೀದಿಯಲ್ಲಿ ಏನೇ ಹೇಳಿಕೊಳ್ಳಲಿ, ಜನ ನಮ್ಮ ಪರ ಇದ್ದಾರೆ ಎಂದರು. ಸಂಕಲ್ಪ ಯಾತ್ರೆಯನ್ನು 3 ದಿನಗಳ ಕಾಲ 4 ಜಿಲ್ಲೆಯಲ್ಲಿ ಪ್ರಾರಂಭ ಮಾಡಿದ್ದು, ಅಭೂತಪೂರ್ವ ಬೆಂಬಲ ಇದೆ. ಇದರಿಂದ ನಮ್ಮ ಪಕ್ಷದ ಕಾರ್ಯಕರ್ತರಲ್ಲಿ ಉತ್ಸಾಹ ಬಂದಿದೆ. ಭಾಜಪದ ಬಗ್ಗೆ ಜನರಲ್ಲಿಯೂ ವಿಶ್ವಾಸ ಹೆಚ್ಚಿದೆ. ಸಂಕಲ್ಪಯಾತ್ರೆ ವಿಜಯ ಸಂಕಲ್ಪ ಯಾತ್ರೆ ಆಗುವುದರಲ್ಲಿ ಸಂಶಯವಿಲ್ಲ ಎಂದರು. ಭಾರತ ದೇಶ ಒಗ್ಗಟ್ಟಿನಿಂದ ಬಲಿಷ್ಠವಾಗಿ ಬೆಳೆಯುತ್ತಿರುವಾಗ ಕಾಂಗ್ರೆಸ್‌ನ ಭಾರತ್ ಜೋಡೋ ಯಾತ್ರೆಗೆ ಯಾವುದೇ ಅರ್ಥವಿಲ್ಲ ಎಂದು ಸುದ್ದಿಗಾರರಿಗೆ ತಿಳಿಸಿದರು. ಭಾರತ ಜೋಡೋ ಯಾತ್ರೆಯ ಅರ್ಥ ಏನು, ಭಾರತ ಈಗಾಗಲೇ ಒಕ್ಕೂಟವಾಗಿ, ಒಗ್ಗಟ್ಟಾಗಿ ಮುನ್ನಡೆಯುತ್ತಿದೆ. ಇದನ್ನು ಮತ್ತೆ ಜೋಡಿಸುವ ಪ್ರಮೇಯ ಇಲ್ಲ . ಇಡೀ ದೇಶ ಒಗ್ಗಟ್ಟಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಮುನ್ನಡೆಯನ್ನು ಸಾಧಿಸುತ್ತಿದೆ. ಪ್ರಸ್ತುತ ಇಡೀ ಜಗತ್ತಿನಲ್ಲಿ ಆರ್ಥಿಕ ಹಿಂಜರಿತ ಉಂಟಾಗುತ್ತಿದೆ. ಅಮೆರಿಕಾ ಸೇರಿದಂತೆ ಜಿ7 ದೇಶಗಳು ಆರ್ಥಿಕ ಹಿಂಜರಿತವನ್ನು ಅನುಭವಿಸುತ್ತಿರುವ ಸಂದರ್ಭದಲ್ಲಿ ಭಾರತ ದೇಶ ಕನಿಷ್ಠ ಶೇ. 7 ಅಭಿವೃದ್ಧಿಯನ್ನು ಕಾಯ್ದುಕೊಂಡು ಬಂದಿದೆ. ರಾಹುಲ್ ಗಾಂಧಿಯವರ ಮೊದಲ ಮಿಸ್ಸೈಲ್ ವಿಫಲಗೊಂಡಿದ್ದು, ಈಗ ▶ 8ನೇ ಪುಟಕ್ಕೆ

ಮತ್ತೆ ವರುಣಾರ್ಭಟ: ಸಕ್ಕರೆ ನಾಡು ತತ್ತರ

● ಸಾವಿರಾರು ಹೆಕ್ಟೇರ್ ಕೃಷಿ ಭೂಮಿ ಮಳೆ ನೀರಿಗೆ ಆಹುತಿ ● ಕೆರೆಯಂತಾದ ಬೆಂಗಳೂರು–ಮೈಸೂರು ಹೆದ್ದಾರಿ: ಮಾರ್ಗ ಬದಲು ● ಸೇತುವೆ ಕುಸಿದು ಮಂಡ್ಯ–ಕೆ.ಎಂ.ದೊಡ್ಡಿ ರಸ್ತೆ ಸಂಚಾರ ಬಂದ್ ● ಮಂಡ್ಯ–ಮೇಲುಕೋಟೆ ರಸ್ತೆ ಸಂಚಾರ ಬಂದ್, ಬದಲಿ ವ್ಯವಸ್ಥೆ ● ಕೆರೆಯಾದ ಬೀಡಿ ಕಾಲೋನಿ, ಹೊಳಲು ಜನವಸತಿ ಪ್ರದೇಶಗಳು



ಮಂಡ್ಯ, ಅ.15– ಕಳೆದ ಎರಡು ತಿಂಗಳಿನಿಂದ ಬಿಡುವು ಕೊಟ್ಟಿದ್ದ ಮಳೆರಾಯ, ಕಳೆದ ರಾತ್ರಿ ಅಕ್ಷರಶಃ ಭೋರ್ಗರೆದಿದೆ. ವರುಣನ ಆರ್ಭಟಕ್ಕೆ ಸಕ್ಕರೆ ನಾಡು ಮಂಡ್ಯ ತತ್ತರಿಸಿ ಹೋಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ. ಸಾವಿರಾರು ಹೆಕ್ಟೇರ್ ಕೃಷಿ ಭೂಮಿ ಮಳೆ ನೀರಿಗೆ ಆಹುತಿಯಾದರೆ, ಎಲ್ಲೆಡೆ ಜಲಾವೃತವಾಗಿ ಹಾಳಾಗಿವೆ. ಕಣ್ಣಾಯಿಸಿದೆಡೆ ತಗ್ಗು ಪ್ರದೇಶಗಳು ಕೆರೆಯಂತಾಗಿ, ಅಲ್ಲಿನ ಜನರು ಗೋಳಾಡುವಂತಾಗಿದೆ.

ಕಳೆದ ಜುಲೈ, ಆಗಸ್ಟ್‌ನಲ್ಲಿ ಭಾರೀ ಮಳೆಯಿಂದ ಮಂಡ್ಯ ಜಿಲ್ಲೆಯ ಜನ ಕಂಗೆಟ್ಟು ಹೋಗಿದ್ದರು. ಆದರೆ ಎರಡು ತಿಂಗಳು ಬಿಡುವು ನೀಡಿದ್ದ ವರುಣ ಮತ್ತೆ ತನ್ನ ಪ್ರತಾಪ ತೋರಿಸಿದ್ದು, ಕಳೆದ ಶುಕ್ರವಾರ ರಾತ್ರಿ ಭೋರ್ಗರೆದ ಮಳೆಗೆ ಮಂಡ್ಯ ತಾಲೂಕು ಸೇರಿದಂತೆ ಜಿಲ್ಲೆಯಲ್ಲಿ ಅನೇಕ ಅವಾಂತರಗಳು ಸೃಷ್ಟಿಯಾಗಿವೆ.

ಕೆರೆ ಕೋಡಿ ಒಡೆದು ಬೆಂಗಳೂರು–ಮೈಸೂರು ಹೆದ್ದಾರಿ ಜಲಾವೃತ: ಭಾರೀ ಮಳೆಗೆ ಮತ್ತೆ ಮಂಡ್ಯ ತಾಲೂಕಿನ ಬೂದನೂರು ಕೆರೆ ಏರಿ ಒಡೆದಿದ್ದು, ನೂರಾರು ಎಕರೆ ಜಮೀನು ಜಲಾವೃತವಾಗಿದೆ. ಜೊತೆಗೆ ಬೆಂಗಳೂರು– ಮೈಸೂರು ಹೆದ್ದಾರಿಯ ಸರ್ವೀಸ್ ರಸ್ತೆ ಬಂದ್ ಆಗಿದ್ದು, ಜಮೀನು, ಹೆದ್ದಾರಿಗೆ ನೀರು ನುಗ್ಗಿದೆ. ಕಟಾವಿಗೆ ಬಂದಿದ್ದ ಕಬ್ಬು, ಇತ್ತೀಚೆಗೆ ನಾಟಿ ಮಾಡಿದ್ದ ಭತ್ತದ ಬೆಳೆ ನಾಶವಾಗಿದೆ. ಮಳೆ ನೀರಿನಿಂದ ಬೆಳೆ, ಜಮೀನು







ಮತ್ತೆ ಒಡೆದ ಹಳೇ ಬೂದನೂರು ಕೆರೆ.

ಕೊಚ್ಚಿ ಹೋಗಿದೆ. ಕೆಲ ತಿಂಗಳ ಹಿಂದಷ್ಟೇ ಕೆರೆ ಒಡೆದು ಸಾಕಷ್ಟು ಅನಾಹುತ ಸೃಷ್ಟಿಸಿತ್ತು. ರಾತ್ರಿ ಸುರಿದ ಮಳೆಯಿಂದಾಗಿ ಮತ್ತೆ ಕೆರೆ ಕೋಡಿ ಒಡೆದಿದ್ದು, ಬೆಂಗಳೂರು– ಮೈಸೂರು ರಸ್ತೆ ಕೆರೆಯಂತಾಗಿದೆ.

ಬೀಡಿ ಕಾಲೋನಿ ಜಲಾವೃತ: ಮಳೆಯ ಆರ್ಭಟಕ್ಕೆ ಮಂಡ್ಯದ ಕೆರೆಯಂಗಳದಲ್ಲಿರುವ ವಿವೇಕಾನಂದ ಬಡಾವಣೆ, ಬೀಡಿ ಕಾಲೋನಿ, ಆಟೋ ಚಾಲಕರ ಕಾಲೋನಿ ಜಲಾವೃತವಾಗಿದೆ. ಬಡಾವಣೆಯಲ್ಲಿ ಮಂಡಿಯುದ್ದ ನೀರು ನಿಂತಿದ್ದು, ರಸ್ತೆಗಳಲ್ಲಿ ಪ್ರವಾಹದ ರೀತಿ ನೀರು ಹರಿಯುತ್ತಿದ್ದು, ಮಳೆ ಅವಾಂತರದಿಂದ ಬಡಾವಣೆಯನ್ನು ▶ 2ನೇ ಪುಟಕ್ಕೆ

ಭೀಕರ ಸರಣಿ ಅಪಘಾತ: ಮಕ್ಕಳು ಸೇರಿ 9 ಮಂದಿ ಸ್ಥಳದಲ್ಲೇ ಸಾವು

ಹಾಸನ: ಸಾರಿಗೆ ಬಸ್, ಟೆಂಪೊ ಟ್ರಾವೆಲರ್ ಹಾಗೂ ಟ್ಯಾಂಕರ್ ನಡುವೆ ಸಂಭವಿಸಿದ ಭೀಕರ ಅಪಘಾತವೊಂದರಲ್ಲಿ ನಾಲ್ವರು ಮಕ್ಕಳು ಸೇರಿ 9 ಮಂದಿ ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ ಬಾಣಾವರ ಹೋಬಳಿಯ ಗಾಂಧಿನಗರ ಗ್ರಾಮದ ಬಳಿ ಈ ಅಪಘಾತ ಸಂಭವಿಸಿದೆ. ಧರ್ಮಸ್ಥಳದಿಂದ ಬೆಂಗಳೂರಿಗೆ ತೆರಳುತ್ತಿದ್ದ ಟಿಟಿ ವಾಹನಕ್ಕೆ ಸಾರಿಗೆ ಬಸ್, ಟ್ಯಾಂಕರ್ ಅಪ್ಪಳಿಸಿವೆ. ಇದರಿಂದ ಸ್ಥಳದಲ್ಲೇ ನಾಲ್ಕು ಮಕ್ಕಳು ಸೇರಿ 9 ಮಂದಿ ಬಲಿಯಾಗಿದ್ದಾರೆ. ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದು, ಉಳಿದ ಗಾಯಾಳುಗಳನ್ನು ಹತ್ತಿರದ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಾಣಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಕ್ಷ ಕಾಲೇಜು ಸಂಸ್ಥಾಪಕ ಅಧ್ಯಕ್ಷ ಜಯಚಂದ್ರರಾಜುಗೆ ಮಹಾತ್ಮ ಪ್ರಶಸ್ತಿ ಪ್ರದಾನ



ಮೈಸೂರು, ಅ. 15– ನವದೆಹಲಿಯ ಇಂಡಿಯಾ ಇಂಟರ್‌ನ್ಯಾಷನಲ್ ಸೆಂಟರ್‌ನಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ಮೈಸೂರಿನ ಗ್ಲೋಬಲ್ ಎಜುಕೇಷನ್ ಟ್ರಸ್ಟ್–ದಕ್ಷ ಕಾಲೇಜಿನ ಅಧ್ಯಕ್ಷರು ಹಾಗೂ ಸ್ಥಾಪಕರಾದ ಜಯಚಂದ್ರ ರಾಜು ಅವರು ಪ್ರತಿಷ್ಠಿತ ಮಹಾತ್ಮ ಗಾಂಧಿ ಪ್ರಶಸ್ತಿಯನ್ನು ಸ್ವೀಕರಿಸಿದರು. ಜಯಚಂದ್ರ ರಾಜು ಅವರು ಯುನೈಟೆಡ್ ನೇಷನ್‌ನ ಪೀಸ್‌ಕೀಪಿಂಗ್ ಆಪರೇಷನ್ ವಿಭಾಗದಲ್ಲಿ ಪ್ರಪಂಚದ ವಿವಿಧ ವಲಯಗಳಲ್ಲಿ ಸುಮಾರು 25 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದಾರೆ.

ಮಹಾತ್ಮ ಗಾಂಧಿ ಪ್ರಶಸ್ತಿಯು ಆದಿತ್ಯಾ ಬಿರ್ಲಾ ಗ್ರೂಪ್ ಪ್ರಾಯೋಜಿತವಾಗಿದ್ದು, ಎಟೆರ್ನಲ್ ಗಾಂಧಿ ಇನಿಷಿಯೇಟಿವ್ ಆಗಿ ಗಾಂಧೀಜಿ ಅವರ ನಿಸ್ವಾರ್ಥ ಸೇವೆ ಮತ್ತು ಪ್ರೀತಿಯನ್ನು ಪ್ರಪಂಚದಾದ್ಯಂತ ಹರಡಿದ್ದರ ಅಂಗವಾಗಿ ನೀಡಲಾಗುತ್ತಿದೆ.

ಮಹಾತ್ಮ ಗಾಂಧಿ ಪ್ರಶಸ್ತಿಯನ್ನು ಜಾಗತಿಕ ಶಾಂತಿ, ಬಡತನ, ಹಸಿವು ರೋಗರುಜಿನ, ಶಿಕ್ಷಣ, ಹವಾಮಾನ ಬದಲಾವಣೆ, ವಿಪತ್ತು, ಹೊಣೆಗಾರಿಕೆ, ಆರೋಗ್ಯ ಸುರಕ್ಷ ಲಭ್ಯತೆ, ಪರಿಸರ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿ ಒಳಗೊಂಡಂತೆ ತೀವ್ರ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲುವಂತಹ ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳಿಗೆ ಈ ಪ್ರಶಸ್ತಿ ಮೂಲಕ ಗೌರವಿಸಲಾಗುತ್ತದೆ. ವೇದಿಕೆಯಲ್ಲಿ ಲೆಫ್ಟಿನೆಂಟ್ ಜನರಲ್ ರಾಜೇಂದರ್ ಸಿಂಗ್, ಮಾಜಿ ಯುಎನ್ ಫೋರ್ಸ್ ಕಮಾಂಡರ್, ಶಾಂತಿಪಾಲನೆ ಫೋರ್ಸಸ್ ಇಥಿಯೋಪಿಯಾ & ಎರಿಟ್ರಿಯಾ; ಡಾ. ಯೋಗೇಂದ್ರ ಸಕ್ಸೇನಾ, ಹಿರಿಯ ಉಪಾಧ್ಯಕ್ಷ, ಅಂಬುಜಾ ಸಿಮೆಂಟ್; ಅಮಿತ್ ಸಚ್‌ದೇವಾ, ಸಿಎಸ್‌ಆರ್ ಮ್ಯಾನ್ ಆಫ್ ಇಂಡಿಯಾ; ರಾಧಿಕಾ ಭಾರತ್ ರಾಮ್, ಕೇರ್ ಹೆಲ್ತ್‌ಜ್ ಇಂಡಿಯಾ ಮತ್ತು CII ರಾಷ್ಟ್ರೀಯ ಶಿಕ್ಷಣ ಪರಿಷತ್ತು ಮತ್ತು ಡಾ.ಶಂಕರ್ ಕುಮಾರ್ ಸನ್ಯಾಲ್, ಕಟ್ಟಾ ಗಾಂಧಿವಾದಿ ಮತ್ತು ಸದಸ್ಯರು ಗಾಂಧಿ ಸ್ಮೃತಿ ಹಾಗೂ ದರ್ಶನ ಸಮಿತಿ, ರಾಜ್‌ಘಾಟ್, ತೀರ್ಪುಗಾರರು ಹಾಗೂ ಇತರ ಗಣ್ಯರು ಹಾಜರಿದ್ದರು.

ನಿವೃತ್ತ ಪ್ರಾಧ್ಯಾಪಕ ಡಾ. ವಿಷ್ಣು ಹೆಬ್ಬಾರ್ ನಿಧನ

ಮೈಸೂರು, ಅ.15– ಮೈಸೂರು ವಿಶ್ವವಿದ್ಯಾನಿಲಯದ ಸಂಖ್ಯಾಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ವಿಷ್ಣು ಹೆಬ್ಬಾರ್ (76) ಅವರು ಅನಾರೋಗ್ಯದಿಂದ ಇಂದು ಮೈಸೂರಿನ ಟಿ.ಕೆ.ಲೇಔಟ್‌ನ ತಮ್ಮ ಮನೆಯಲ್ಲಿ ನಿಧನರಾದರು.



ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ನಗರದ ಚಿತ್ಪಾವನ ಬ್ರಾಹ್ಮಣರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಇವರ ಅಂತ್ಯಕ್ರಿಯೆ ಭಾನುವಾರ (ಅ.16) ಬೆಳಗ್ಗೆ 9 ಗಂಟೆಯ ನಂತರ ಚಾಮುಂಡಿಬೆಟ್ಟ ತಪ್ಪಲಿನ ಚಿತಾಗಾರದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪುಣ್ಯಕೋಟಿ ದತ್ತು ಯೋಜನೆಗೆ ಸರ್ಕಾರಿ ನೌಕರರಿಂದ 80 ಕೋಟಿ ರೂ. ದೇಣಿಗೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಮನವಿಗೆ ಸ್ಪಂದಿಸಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘವು 'ಪುಣ್ಯಕೋಟಿ ದತ್ತು ಯೋಜನೆ'ಗೆ ಒಟ್ಟು 80 ಕೋಟಿ ರೂ. ದೇಣಿಗೆ ನೀಡಲು ಮುಂದಾಗಿದೆ.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷರಿ ಅವರ ನೇತೃತ್ವದ ನಿಯೋಗವು ಶುಕ್ರವಾರ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿತು. ಈ ವೇಳೆ ರಾಜ್ಯ ಸರ್ಕಾರದ 'ಪುಣ್ಯಕೋಟಿ ದತ್ತು ಯೋಜನೆ'ಗೆ ರಾಜ್ಯ ಸರ್ಕಾರಿ ನೌಕರರು ಹಾಗೂ ಸರ್ಕಾರದ ಇತರ ಸಂಸ್ಥೆಗಳ ನೌಕರರು ದೇಣಿಗೆ ನೀಡಲು ಸಮ್ಮತಿಸಿರುವುದನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಯಿತು.

ಜತೆಗೆ ದೇಣಿಗೆ ನೀಡುವ ಕುರಿತು ಸಮ್ಮತಿ ಪತ್ರವನ್ನು ಮುಖ್ಯಮಂತ್ರಿಗಳಿಗೆ ಹಸ್ತಾಂತರಿಸಿದರು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇತ್ತೀಚೆಗೆ ಸಮಾರಂಭವೊಂದರಲ್ಲಿ ದೇಣಿಗೆ ಕುರಿತು ಮನವಿ ಮಾಡಿದ್ದರು. ಈ ಮನವಿಗೆ ಸದ್ಯ ಸ್ಪಂದಿಸಿದ ನೌಕರರ ಸಂಘವು ರಾಜ್ಯ ಸರ್ಕಾರಿ ನೌಕರರು ಮತ್ತು ಸರ್ಕಾರದ ಇತರ ಸಂಸ್ಥೆಗಳ ನೌಕರರು ಸ್ವ–ಇಚ್ಛೆಯಿಂದ ದೇಣಿಗೆ ನೀಡಲು ಮುಂದಾಗಿದ್ದಾರೆ.

ಗ್ರೂಪ್ ಎ ಅಧಿಕಾರಿಗಳು ತಲಾ 11,000 ರೂಪಾಯಿ ದೇಣಿಗೆ ನೀಡುತ್ತಿದ್ದರೆ, ಗ್ರೂಪ್ ಬಿ ಮತ್ತು ಗ್ರೂಪ್ ಸಿ ಅಧಿಕಾರಿಗಳು ಕ್ರಮವಾಗಿ 4,000 ಮತ್ತು 400 ರೂ. ದೇಣಿಗೆ ನೀಡುತ್ತಿದ್ದಾರೆ. ಈ ಮೊತ್ತವನ್ನು ತಮ್ಮ ಅಕ್ಟೋಬರ್ ಮತ್ತು ನವೆಂಬರ್ ತಿಂಗಳ ಸಂಬಳದಿಂದ ಕಡಿತಗೊಳಿಸುವಂತೆ ಅವರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಒಂದನೇ ಪುಟದಿಂದ

ಸಕ್ಕರೆ ನಾಡು ತತ್ತರ

ಜನ ಖಾಲಿ ಮಾಡುತ್ತಿದ್ದು, ಮನೆಯಲ್ಲಿದ್ದ ದಿನಬಳಕೆ ವಸ್ತುಗಳು ನೀರು ಪಾಲಾಗಿದೆ.

ಸೇತುವೆ ಕುಸಿತ, ಮಂಡ್ಯ–ಕೆ.ಎಂ.ದೊಡ್ಡಿ ರಸ್ತೆ ಬಂದ್: ಭಾರೀ ಮಳೆಯಿಂದ ಮಂಡ್ಯ ನಗರದ ಹೊರವಲಯದ ಹೆಬ್ಬಳ್ಳ ತುಂಬಿ ಹರಿಯುತ್ತಿದ್ದು, ಇಲ್ಲಿಗೆ ಸಂಪರ್ಕ ಕಲ್ಪಿಸುವ ಮಂಡ್ಯ ತಾಲೂಕಿನ ಚನ್ನಪ್ಪದೊಡ್ಡಿ ಕ್ರಾಸ್ ಹಾಗೂ ಭೂತನಹೊಸೂರು ಬಳಿ ಸೇತುವೆ ಕುಸಿದಿದೆ. ಇದರಿಂದ ಮಂಡ್ಯ–ಕೆ.ಎಂ.ದೊಡ್ಡಿ–ಮಳವಳ್ಳಿ ಸಂಪರ್ಕ ಕಡಿತವಾಗಿದ್ದು, ಸಂಚಾರ ಮಾರ್ಗವನ್ನು ಬಂದ್‌ಗೊಳಿಸಲಾಗಿದೆ.

ಮಂಡ್ಯ– ಎಡೆಯೂರು ರಸ್ತೆ ಸಹ ಜಲಾವೃತ: ಇದಲ್ಲದೇ ಭಾರೀ ಮಳೆಗೆ ಚಿಕ್ಕಮಂಡ್ಯ ಬಳಿ ರಸ್ತೆ ಸಂಚಾರ ಅಸ್ತವ್ಯಸ್ಥಗೊಂಡು ರಸ್ತೆಗೆ ನೀರು ತುಂಬಿಕೊಂಡಿತ್ತು. ಇದರಿಂದ ಮಂಡ್ಯ–ಯಡಿಯೂರು ರಸ್ತೆ ಸಹ ಸಂಪೂರ್ಣ ಜಲಾವೃತವಾಗಿತ್ತು. ಜೊತೆಗೆ ಚಿಕ್ಕಮಂಡ್ಯ ಬಳಿ ಕೃಷಿ ಭೂಮಿಗೆ ನೀರು ತುಂಬಿಕೊಂಡ ಪರಿಣಾಮ ನೂರಾರು ಹೆಕ್ಟೇರ್ ಜಮೀನು ನಾಶವಾಗಿದೆ. ಮಂಡ್ಯ–ಮೇಲುಕೋಟೆ ರಸ್ತೆ ಸಂಪೂರ್ಣ ಬಂದ್: ಇನ್ನು ಭಾರೀ ಮಳೆಗೆ ಹೊಳಲು ಬಳಿ ಕೆರೆಕೋಡಿ ಒಡೆದು ಭೂ ಕುಸಿತ ಉಂಟಾಗಿ ಮಂಡ್ಯ–ಮೇಲುಕೋಟೆ ರಸ್ತೆ ಹಾಳಾಗಿ ಸಂಚಾರವನ್ನು ಬ್ಯಾರಿಕೇಡ್ ಹಾಕಿ ಮಂಡ್ಯ–ಮೇಲುಕೋಟೆ ರಸ್ತೆ ಬಂದ್‌ಗೊಂಡಿದೆ. ಇದರಿಂದ ಮಂಡ್ಯ ನಗರದಿಂದ ಮೇಲುಕೋಟೆಗೆ ತೆರಳುವವರು ಹೊಳಲು ರಸ್ತೆಯ ಬದಲು ವಿ.ಸಿ.ಫಾರಂಗೇಟ್‌ನಿಂದ ಪಣಕನಹಳ್ಳಿ ಮಾರ್ಗವಾಗಿ ಮೇಲುಕೋಟೆ ಸಂಪರ್ಕಿಸಬೇಕಾಗಿದೆ.

ಕೆರೆ ಕೋಡಿ ಒಡೆದು ನಾಲ್ಕು ಮನೆಗಳು ಕುಸಿತ: ಧಾರಾಕಾರ ಮಳೆಗೆ ಗುತ್ತಲು ಕೆರೆ ಒಡೆದು ನಾಲ್ಕು ಮನೆಗಳು ಕುಸಿತ ಕಂಡಿವೆ. ಮಳೆ ನೀರಿನ ರಭಸಕ್ಕೆ ರಸ್ತೆಯನ್ನೆ ಕೊರೆದು ಮಳೆ ನೀರು ಹರಿಯುತ್ತಿದ್ದು, ಗುತ್ತಲು ಬಡಾವಣೆಯ ಅರಕೇಶ್ವರನಗರ ಮಳೆ ನೀರಿನಿಂದ ಜಲಾವೃತವಾಗಿದೆ. ಗೋಡೆ ಕುಸಿತದಿಂದ ಜನರು ಕಂಗಾಲಾಗಿದ್ದು, ಅಪಾರ ಬೆಳೆ ನಾಶವಾಗಿದೆ. ಪರಿಹಾರಕ್ಕಾಗಿ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದ್ದಾರೆ.

ಹಾಲಹಳ್ಳಿಯಲ್ಲೂ ಮನೆಗಳಿಗೆ ನುಗ್ಗಿದ ನೀರು: ಮಂಡ್ಯ ನಗರದ ಹಾಲಹಳ್ಳಿಕೆರೆಯಲ್ಲಿ ನಿನ್ನೆ ಸುರಿದ ಭಾರೀ ಮಳೆಗೆ ಮನೆಗಳಿಗೆ ನೀರು ತುಂಬಿಕೊಂಡು ಅವಾಂತರ ಸೃಷ್ಟಿಯಾಗಿದೆ. ರಾತ್ರಿ ಸುರಿದ ಮಳೆಗೆ ಹಾಲಹಳ್ಳಿ ಕೆರೆ, ಮುಸ್ಲಿಂ ಬ್ಲಾಕ್ ನಡುವೆ ಬರುವ ರಾಜ ಕಾಲುವೆ ತುಂಬಿ ಡ್ರೈನೇಜ್ ಪೈಪುಗಳ ಮುಖಾಂತರ ಮನೆಗಳಿಗೆ ನೀರು ನುಗ್ಗಿದೆ.

ಮತ್ತೆ ಒಡೆದ ಹಳೇಬೂದನೂರು ಕೆರೆ

ಭಾರೀ ಮಳೆಯಿಂದ ಒಂದೂವರೆ ತಿಂಗಳ ಹಿಂದಷ್ಟೇ ಒಡೆದಿದ್ದ ತಾಲೂಕಿನ ಹಳೇಬೂದನೂರು ಕೆರೆ ಮತ್ತೆ ಒಡೆದಿದೆ. ಶುಕ್ರವಾರ ರಾತ್ರಿ ಸುರಿದ ಮಳೆಗೆ ಕೆರೆ ಏರಿ ಮೊದಲು ಒಡೆದಿದ್ದ ಸ್ಥಳದಲ್ಲೇ ಒಡೆದಿದ್ದು ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಗೆ ನೀರು ನುಗ್ಗಿದೆ. ಮಂಡ್ಯದಿಂದ ಬೆಂಗಳೂರಿಗೆ ತೆರಳುವ ಮಾರ್ಗ ಸಂಪೂರ್ಣವಾಗಿ ಮುಳುಗಿದೆ. ನಿರ್ಮಾಣ ಹಂತದಲ್ಲಿರುವ ಸೇತುವೆಯೇ ಕೆರೆ ಏರಿಯಂತಾಗಿದೆ. ಇನ್ನೊಂದು ಮಾರ್ಗದಲ್ಲಿ ಎರಡೂ ಕಡೆಯ ವಾಹನಗಳು ಸಂಚರಿಸುತ್ತಿವೆ. ವಾಹನ ದಟ್ಟಣೆ ಹೆಚ್ಚಾಗಿದ್ದು ಟ್ರಾಫಿಕ್ ಜಾಮ್ ಉಂಟಾಗಿದೆ.

ಮಾಜಿ ಸಿಎಂ ಸಿದ್ದರಾಮಯ್ಯ ಕುರಿತು ಟೀಕೆ ವಿಚಾರ; ಬಿಜೆಪಿ ಎಂಎಲ್‌ಸಿ ಛಲವಾದಿ ನಾರಾಯಣಸ್ವಾಮಿ ವಿರುದ್ಧ

ಕಾಂಗ್ರೆಸ್‌ನ ದಲಿತ, ಹಿಂದುಳಿದ ವರ್ಗದ ಮುಖಂಡರ ವಾಗ್ದಾಳಿ



ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ಕಾಂಗ್ರೆಸ್‌ನ ದಲಿತ ಮತ್ತು ಹಿಂದುಳಿದ ವರ್ಗದ ಮುಖಂಡರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು,ಅ.15(ಪಿಎಂ)– ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುರಿತಂತೆ 'ನಮ್ಮ ದಲಿತರ ಕುತ್ತಿಗೆ ಹಿಸುಕಿ ನೀವು ಮುಖ್ಯಮಂತ್ರಿ ಆಗಿದ್ದು' ಎಂಬಿತ್ಯಾದಿಯಾಗಿ ಟೀಕಿಸಿರುವ ಬಿಜೆಪಿ ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಕಾಂಗ್ರೆಸ್‌ನ ದಲಿತ ಮತ್ತು ಹಿಂದುಳಿದ ಸಮುದಾಯದ ಮುಖಂಡರು ತೀವ್ರ ವಾಗ್ದಾಳಿ ನಡೆಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ದಲಿತ, ಹಿಂದುಳಿದ ವರ್ಗದ ಕಾಂಗ್ರೆಸ್ ಮುಖಂಡರು, ಛಲವಾದಿ ನಾರಾಯಣಸ್ವಾಮಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮಾತನಾಡಿ, ವಿಪಕ್ಷ ನಾಯಕ ಸಿದ್ದರಾಮಯ್ಯನವರು ಹಿರಿಯ ರಾಜಕೀಯ ಮುತ್ಸದ್ದಿ. ಭಾರತದ ರಾಜಕಾರಣದಲ್ಲಿ ಬದ್ಧತೆಯ ನಾಯಕರು. ಅವರ ಬಗ್ಗೆ ಕೀಳುಮಟ್ಟದ ಪದ ಬಳಸಿ ನಾರಾಯಣಸ್ವಾಮಿ ಟೀಕೆ ಮಾಡಿದ್ದಾರೆ. ಇದು ಖಂಡನೀಯ ಎಂದು ಕಿಡಿಕಾರಿದರು. ಡಾ.ಬಿ.ಆರ್.ಅಂಬೇಡ್ಕರ್ ಪ್ರಶಸ್ತಿಗೆ ಭಾಜನರಾದ ಸಿದ್ದರಾಮಯ್ಯನವರ ಬಗ್ಗೆ ಹೀಗೆ ಹಗುರವಾಗಿ ಮಾತನಾಡಿರುವುದು ಸರಿಯಲ್ಲ. ಸಿದ್ದರಾಮಯ್ಯನವರು 2017ರಲ್ಲಿ ಎಸ್‌ಸಿ–ಎಸ್‌ಟಿ ಸಮುದಾಯದ ಗುತ್ತಿಗೆದಾರರಿಗೆ ಶೇ.50ರಷ್ಟು ಮೀಸಲಾತಿ ಕಲ್ಪಿಸಿದರು. ಎಸ್‌ಸಿ–ಎಸ್‌ಟಿ ನೌಕರರಿಗೆ ಸುಗ್ರೀವಾಜ್ಞೆ ಮೂಲಕ ಬಡ್ತಿ ಮೀಸಲಾತಿ ಜಾರಿಗೊಳಿಸಿದರು. ಅವರ ಬಗ್ಗೆ ಇಷ್ಟು ಲಘುವಾಗಿ ಮಾತನಾಡುವುದು ಎಷ್ಟು ಸರಿ ಎಂಬ ಬಗ್ಗೆ ನಾರಾಯಣಸ್ವಾಮಿ ಉತ್ತರ ಕೊಡಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ಕಟ್ಟಿಕೊಂಡಿರುವ ನಾಯಿ ಮರಿ: ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಸೀತಾರಾಮ್ ಮಾತನಾಡಿ, ನಾರಾಯಣಸ್ವಾಮಿ ಪಂಕ್ಚರ್ ಗಿರಾಕಿ. ಪಂಕ್ಚರ್ ಹಾಕಿಕೊಂಡು ನಿಂತಿದ್ದ ಇವರು, ದೇವನಹಳ್ಳಿಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್‌ನಿಂದ ಟಿಕೆಟ್ ಕೊಟ್ಟಿಲ್ಲವೆಂದು ಪಕ್ಷ ಬಿಟ್ಟು ಹೋದರು. ಬಿಜೆಪಿ ಕಟ್ಟಿಕೊಂಡಿರುವ ನಾಯಿ ಮರಿ ನಾರಾಯಣಸ್ವಾಮಿ. ಬಿಜೆಪಿಯವರಿಗೆ ಸಿದ್ದರಾಮಯ್ಯನವರ ವರ್ಚಸ್ಸು ತಡೆದುಕೊಳ್ಳಲಾಗುತ್ತಿಲ್ಲ. ಹಾಗಾಗಿ ಇಂತಹವರಿಂದ ಸಿದ್ದರಾಮಯ್ಯರನ್ನು ಟೀಕೆ ಮಾಡಿಸುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿ ಇದ್ದುಕೊಂಡೇ 2013ರಲ್ಲಿ ವರುಣಾ ಕ್ಷೇತ್ರದಲ್ಲಿ ಸಿದ್ದರಾಮಯ್ಯರನ್ನು ಸೋಲಿಸಲು ನಾರಾಯಣಸ್ವಾಮಿ ಹಣ ಹಂಚಿದ್ದರು ಎಂದು ದೂರಿದರು.

ಮಾಜಿ ಮೇಯರ್ ನಾರಾಯಣ್ ಮಾತನಾಡಿ, ಸಿದ್ದರಾಮಯ್ಯನವರು ದಲಿತ, ಶೋಷಿತ ಸಮುದಾಯದ ಶ್ರೇಯೋಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ದಲಿತರೊಬ್ಬರು ಮುಖ್ಯಮಂತ್ರಿ ಆಗಿದ್ದರೂ ಅವರಷ್ಟು ದಲಿತ ಸಮುದಾಯಕ್ಕೆ ಕೊಡುಗೆ ನೀಡಲು ಸಾಧ್ಯವಾಗುತ್ತಿರಲಿಲ್ಲ. ನಾರಾಯಣಸ್ವಾಮಿಯವರು ಆರ್‌ಎಸ್‌ಎಸ್ ಕಪಿಮುಷ್ಠಿಯಲ್ಲಿ ಸಿಲುಕಿಕೊಂಡಿದ್ದಾರೆ ಎಂದು ಟೀಕಿಸಿದರು.

ಟೀಕೆ ಮಾಡುವುದು ತಪ್ಪಲ್ಲ. ಆದರೆ ಅದು ಆರೋಗ್ಯಕರವಾಗಿರಬೇಕು. ಎಂಎಲ್‌ಸಿ ಮಾಡಿದ್ದಕ್ಕೆ ಸಿದ್ದರಾಮಯ್ಯರನ್ನು ಬೈದು ಬಿಜೆಪಿ ಋಣ ತೀರಿಸುತ್ತಿದ್ದಾರೆ. ದಲಿತ ಸಮುದಾಯದ ಸಂಘಟನೆ, ಶ್ರೇಯೋಭಿವೃದ್ಧಿಗೆ ಶ್ರಮಿಸುವುದು ಬಿಟ್ಟು ಸಿದ್ದರಾಮಯ್ಯರನ್ನು ತೆಗಳುವುದಕ್ಕೆ ತಮ್ಮ ಅಧಿಕಾರ ಸೀಮಿತಗೊಳಿಸಿದ್ದಾರೆ ಎಂದು ಕಿಡಿಕಾರಿದರು.

ಜಿಪಂ ಮಾಜಿ ಸದಸ್ಯ ಕೆ.ಮಹದೇವ್ ಮಾತನಾಡಿ, ಬಿಜೆಪಿ ಇಂದು ದಲಿತರ ಮೇಲೆ ದಲಿತರನ್ನೇ ಎತ್ತಿಕಟ್ಟುತ್ತಿದೆ. ಕೇಂದ್ರ ಸರ್ಕಾರ ಸಾರ್ವಜನಿಕ ಉದ್ದಿಮೆಗಳನ್ನು ಖಾಸಗೀಕರಣ ಮಾಡುತ್ತಿದ್ದು, ದಲಿತ ಸಮುದಾಯದ ಬಗ್ಗೆ ನಿಜವಾದ ಕಾಳಜಿ ಇದ್ದರೆ, ಖಾಸಗಿ ವಲಯದಲ್ಲಿ ಮೀಸಲಾತಿ ನೀಡಲು ನಾರಾಯಣಸ್ವಾಮಿ, ಅವರದೇ ಸರ್ಕಾರದಲ್ಲಿ ಆಗ್ರಹಿಸಲಿ. ನಾರಾಯಣಸ್ವಾಮಿಯವರು ಇದೇ ರೀತಿ ಕೀಳು ಮಟ್ಟದಲ್ಲಿ ಮಾತನಾಡಿದರೆ ದಲಿತ ಸಮುದಾಯವೇ ಅವರಿಗೆ ತಕ್ಕ ಪಾಠ ಕಲಿಸಲಿದೆ ಎಂದು ಎಚ್ಚರಿಸಿದರು. ಮಾಜಿ ಮೇಯರ್ ಆರೀಫ್ ಹುಸೇನ್, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮುಖಂಡರಾದ ಸುನಂದಕುಮಾರ್, ರಾಚಯ್ಯ, ಶಿವಪ್ರಸಾದ್ ಹಾಜರಿದ್ದರು.

ದಸರಾ ಸ್ತಬ್ಧಚಿತ್ರಗಳಿಗೆ ಪ್ರಶಸ್ತಿ ನೀಡಿಕೆಯಲ್ಲೂ ಗೊಂದಲ

ನೀವು ಸುಮ್ಮನಿದ್ದರೆ ಮುಂದಿನ ಬಾರಿ ನಿಮಗೇ ಪ್ರಶಸ್ತಿ ನೀಡ್ತೇವೆ...

- ಅನ್ಯಾಯದ ಬಗ್ಗೆ ಪ್ರಶ್ನಿಸಿದರೆ ಅಧಿಕಾರಿಗಳ ಸಮಾಧಾನದ ಪರಿ
- ಆಕರ್ಷಕ, ಜನಮೆಚ್ಚುಗೆ ಪಡೆದ ಸ್ತಬ್ಧಚಿತ್ರಗಳಿಗಿಲ್ಲ ಪ್ರಶಸ್ತಿ
- ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ ಕಲಾವಿದರು

ಮೈಸೂರು, ಅ.15– ದಸರಾ ಜಂಬೂಸವಾರಿಯಲ್ಲಿ ಭಾಗವಹಿಸಿದ್ದ ಸ್ತಬ್ಧಚಿತ್ರಗಳಿಗೆ ಪ್ರಶಸ್ತಿ ನೀಡುವುದರಲ್ಲಿ ಅನ್ಯಾಯವೆಸಗಲಾಗಿದೆ ಎಂದು ಬಾಗಲಕೋಟೆ ಮತ್ತು ಚಾಮರಾಜನಗರ ಜಿಲ್ಲಾ ಪಂಚಾಯಿತಿಗಳ ಸ್ತಬ್ಧಚಿತ್ರಗಳನ್ನು ನಿರ್ಮಿಸಿದ್ದ ಕಲಾವಿದರಾದ ಡಿ.ಕೆ. ರಂಗನಾಥ್ ಮತ್ತು ಹೆಚ್. ಮಹದೇವ ಜಿಲ್ಲಾಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ. ತಾವು ನಿರ್ಮಿಸಿದ್ದ ಸ್ತಬ್ಧಚಿತ್ರಗಳು ಆಕರ್ಷಣೀಯವಾಗಿದ್ದು, ಅಪಾರ ಜನಮೆಚ್ಚುಗೆ ಪಡೆದಿವೆ ಎಂದಿರುವ ಅವರು, ಜಿಲ್ಲಾಧಿಕಾರಿಗಳಾದ ನೀವೇ ಸ್ತಬ್ಧಚಿತ್ರಗಳ ನೀಲನಕ್ಷೆಯನ್ನು ಆಯ್ಕೆ ಮಾಡುವಾಗ ಬಾಗಲಕೋಟೆ ಜಿಲ್ಲೆಯ ಸ್ತಬ್ಧಚಿತ್ರ ರೋಲ್ ಮಾಡೆಲ್ ಎಂದು ಹೇಳಿದ್ದೀರಿ. ಜಿಲ್ಲಾ ಉಸ್ತುವಾರಿ ಸಚಿವರೂ ಮೆಚ್ಚುಗೆ ವ್ಯಕ್ತಪಡಿಸಿದ್ದರು. ಚಾಮರಾಜನಗರ ಜಿಲ್ಲೆಯ ಸ್ತಬ್ಧಚಿತ್ರಕ್ಕೆ ಭಾರೀ ಜನಮನ್ನಣೆ ದೊರೆತಿತ್ತು. ಆದರೂ ಈ ಸ್ತಬ್ಧಚಿತ್ರಗಳಿಗೆ ಬಹುಮಾನ ನೀಡದೆ ತಿರಸ್ಕರಿಸಿ, ಅನ್ಯಾಯ ಮಾಡಲಾಗಿದೆ ಎಂದು ಅವರು ತಮ್ಮ ದೂರಿನಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ತೀರ್ಪುಗಾರರಿಗೆ ಕರೆ ಮಾಡಿ ಕೇಳಿದರೆ ಅವರು, ನಿಮ್ಮ ಸ್ತಬ್ಧಚಿತ್ರಗಳಿಗೆ ಅತೀ ಹೆಚ್ಚು ಅಂಕಗಳನ್ನು ಕೊಡಲಾಗಿದೆ. ಆದರೆ ಸ್ತಬ್ಧಚಿತ್ರ ಉಪಸಮಿತಿಯವರು ಬಹುಮಾನ ಪ್ರಕಟಿಸುವಲ್ಲಿ ಗೊಂದಲ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅದೇ ವೇಳೆ ಸ್ತಬ್ಧಚಿತ್ರ ಉಪಸಮಿತಿಯವರನ್ನು ಕೇಳಿದರೆ ತೀರ್ಪುಗಾರರು ಕೊಟ್ಟ ನಿರ್ಧಾರವನ್ನೇ ಪ್ರಕಟಿಸಿದ್ದೇವೆ ಎಂದು ಹೇಳುತ್ತಾರೆ. ಸ್ತಬ್ಧಚಿತ್ರ ಉಪಸಮಿತಿಯ ಕಾರ್ಯಾಧ್ಯಕ್ಷರೂ ಆದ ಜಿಪಂ ಮುಖ್ಯ ಯೋಜನಾಧಿಕಾರಿಗಳು ನಮ್ಮನ್ನು ಕಚೇರಿಗೆ ಕರೆಸಿದ್ದಾರೆ. ನಿಮ್ಮ ಸ್ತಬ್ಧಚಿತ್ರಗಳು ಅತ್ಯುತ್ತಮವಾಗಿದ್ದವು. ಪ್ರಶಸ್ತಿ ಪ್ರಕಟಣೆಯಲ್ಲಿ ಏನೋ ಗೊಂದಲವಾಗಿದೆ. ನಿಮ್ಮ ಸ್ತಬ್ಧಚಿತ್ರಗಳಿಗೆ 'ವಿಶೇಷ ಜನಮೆಚ್ಚುಗೆಯ ಸ್ತಬ್ಧಚಿತ್ರಗಳು ಎಂದು ಪ್ರಶಸ್ತಿ ನೀಡುವುದಾಗಿ ಹೇಳಿದ್ದರು. ಆದರೆ ಈಗ ಹಾಗೆಲ್ಲಾ ಪ್ರಶಸ್ತಿ ಕೊಡಲು ಸಾಧ್ಯವಿಲ್ಲ. ಬೇಕಾದರೆ ಮುಂದಿನ ಬಾರಿ ನಿಮಗೆ ಪ್ರಶಸ್ತಿ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಸರಿ ಎಂದು ಕಲಾವಿದರು ಪ್ರಶ್ನಿಸಿದ್ದಾರೆ.


ಸ್ತಬ್ಧಚಿತ್ರ ತೀರ್ಪುಗಾರರೆಲ್ಲರೂ ಮೈಸೂರಿನವರಾಗಿರುವುದರಿಂದ ಅವರು ತಮ್ಮ ವಿದ್ಯಾಲಯದಲ್ಲಿ ಕಲಿತಿರುವ ವಿದ್ಯಾರ್ಥಿಗಳು ಹಾಗೂ ತಮಗೆ ಪರಿಚಯವಿರುವವರಿಗೆ ಪ್ರಶಸ್ತಿಗಳನ್ನು ಹಂಚಿಕೆ ಮಾಡಿದ್ದಾರೆ. ಇದೇ ಕಾರಣಕ್ಕಾಗಿ ಸ್ತಬ್ಧಚಿತ್ರಗಳ ಸಭೆಯಲ್ಲಿ ನಾವು ಮೈಸೂರಿನವರು ತೀರ್ಪುಗಾರರಾಗಬಾರದು ಎಂದು ಹೇಳಿದ್ದೆವು. ನಾವು ಆಗ ಹೇಳಿದ್ದು ನಿಜವಾಗಿದೆ. ಅವರಿಗೆ ಉತ್ತರ ಕರ್ನಾಟಕ ಲೆಕ್ಕಕ್ಕಿರುವುದಿಲ್ಲ. ಯಾವಾಗಲೂ ಮೈಸೂರು ವಿಭಾಗಕ್ಕೆ ಆದ್ಯತೆ ನೀಡುತ್ತಾರೆ ಎಂದಿರುವ ಕಲಾವಿದರು, ಈಗ ನೀಡಿರುವ ತೀರ್ಪನ್ನು ಹಿಂಪಡೆದು ಮರುಪರಿಶೀಲನೆ ಮಾಡಬೇಕು. ಜನರಿಂದ ಓಟ್ ಮಾಡಿಸಿ, ಪ್ರಶಸ್ತಿಯನ್ನು ನೀಡಬೇಕು ಎಂದು ಆಗ್ರಹಿಸಿದ್ದಾರೆ.

ಜಿಲ್ಲಾ ಪ್ರವಾಸ

ಮೈಸೂರು, ಅ.15– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷರಾದ ಎಂ.ಶಿವಣ್ಣ ಕೋಟೆ, ಅ.16 ಮತ್ತು 17 ರಂದು ಮೈಸೂರು ಜಿಲ್ಲಾ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಅ.16 ರಂದು ಸಂಜೆ 6 ಗಂಟೆಗೆ ಜಲದರ್ಶಿನಿ ಅತಿಥಿ ಗೃಹದಲ್ಲಿ ವಾಸ್ತವ್ಯ ಹೂಡುವರು. ಅ–17ರಂದು ಸೋಮವಾರ ಬೆಳಗ್ಗೆ 10 ಗಂಟೆಗೆ ಬೇಗೂರು ಪಂಚಾಯಿತಿಯ ಹೊಸಹಳ್ಳಿ ಹಾಡಿಯಲ್ಲಿ ಮೃತಪಟ್ಟ ಗಿರಿಜನ ಕರಿಯಪ್ಪ ಮನೆಗೆ ಭೇಟಿ ನೀಡಿ, ಕುಟುಂಬಕ್ಕೆ ಸಾಂತ್ವನ ಹೇಳಲಿದ್ದಾರೆ. ಬೆಳಗ್ಗೆ 11 ಗಂಟೆಗೆ ಬೇಗೂರು ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಮತ್ತು ಗುರುತಿಸಲ್ಪಟ್ಟ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮಸ್ಯೆಗಳ ಬಗ್ಗೆ ಚರ್ಚೆಯಲ್ಲಿ ಭಾಗವಹಿಸುವರು. ಮಧ್ಯಾಹ್ನ 12.30ಕ್ಕೆ ಕಬಿನಿ ಜಲಾಶಯದ ಪ್ರವಾಸಿ ಮಂದಿರದಲ್ಲಿ ಪೌರಕಾರ್ಮಿಕರ ಮುಖಂಡರೊಂದಿಗೆ ಚರ್ಚೆ ಹಾಗೂ ಪೌರಕಾರ್ಮಿಕರ ಕುಂದು–ಕೊರತೆಗಳ ಕುರಿತು ಅಧಿಕಾರಿಗಳೊಂದಿಗೆ ಸಭೆ ನಡೆಸುವರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

16.10.2022 ಭಾನುವಾರ, ಮಳೆ ನಕ್ಷತ್ರ: ಚಿತ್ತ 11.10.2022 ರಿಂದ 23.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ : ಆರಿದ್ರಾ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** 'ಮಧುಮೇಹ ತೊಂದರೆ' ಇರುವ ರೋಗಿಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆಯಿಂದಲೂ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಗೊಂಬೆಗಳ ಪ್ರದರ್ಶನ :** ರಾಘವೇಂದ್ರ ಕೆ.ಎಸ್. ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ, ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ, ಬೆಳಗ್ಗೆ 10 ಗಂಟೆಯಿಂದ.

■ **ಪ್ರಕೃತಿ ಆಯುರ್ವೇದ ಪ್ರತಿಷ್ಠಾನ :** ಫಿಸ್ತುಲಾ ಮತ್ತು ಪೈಲ್ಸ್ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಡಾ. ಸವಿತಾ ಬಿ. ನಾಯಕ್ ಅಶ್ವಿನಿ ಕ್ಲಿನಿಕ್, ಡಿವಿಯೇಶನ್ ರಸ್ತೆ, ಚಾಮರಾಜನಗರ, ಬೆಳಗ್ಗೆ 10.30 ರಿಂದ.

■ **ಕಾರ್ಡಿಯಾಲಜಿ ಸೊಸೈಟಿ ಆಫ್ ಇಂಡಿಯಾ, ಮೈಸೂರು ಚಾಪ್ಟರ್ :** ವಿಶ್ವ ಹೃದಯ ದಿನದ ಅಂಗವಾಗಿ ವಾಕಥಾನ್, ಮುಖ್ಯ ಅತಿಥಿಗಳು : ಜಿಲ್ಲಾ ಆರೋಗ್ಯಾಧಿಕಾರಿ ಡಾ. ಕೆ.ಹೆಚ್. ಪ್ರಸಾದ್, ಎಂಎಂಸಿ ಮತ್ತು ಆರ್‌ಐ ಡೀನ್ ಡಾ. ಕೆ.ಆರ್. ದಾಕ್ಷಾಯಿಣಿ, ಸ್ಥಳ: ಜೆ.ಕೆ. ಮೈದಾನ, ರೈಲ್ವೆ ನಿಲ್ದಾಣದ ಹತ್ತಿರ, ಬೆಳಗ್ಗೆ 7.30 ರಿಂದ

■ **ನಟನ ರಂಗಶಾಲೆ :** ನಟನದ ರೆಪರ್ಟರಿ ಕಲಾವಿದರಿಂದ ಶಾಂತಕವಿ (ಸಕ್ಕರಿ ಬಾಳಾಚಾರ್ಯ) ಅವರು ರಚಿಸಿರುವ 'ಉಷಾಹರಣ' ನಾಟಕ ಪ್ರದರ್ಶನ, ನಿರ್ದೇಶನ : ಡಾ. ಶ್ರೀಪಾದ ಭಟ್, ಸ್ಥಳ: ನಟನ ರಂಗಶಾಲೆ, ರಾಮಕೃಷ್ಣನಗರ, ಸಂಜೆ 6.30ಕ್ಕೆ.

■ **ಪುಣ್ಯಕೋಟಿ ಸೇವಾ ಟ್ರಸ್ಟ್, ದಂತ ವೈದ್ಯರು ಮತ್ತು ತಂಡ :** ಉಚಿತ ದಂತ ಚಿಕಿತ್ಸಾ ಶಿಬಿರ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಗಂಗಾಧರ್, ನವೀನ್ ಬೋರೇಗೌಡ, ಚಂದ್ರು, ರವಿ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ಹನುಮಂತೇಶ್, ಸ್ಥಳ: ಪುಣ್ಯಕೋಟಿ ಸೇವಾ ಟ್ರಸ್ಟ್, ಯೋಗಾನರಸಿಂಹಸ್ವಾಮಿ ದೇವಸ್ಥಾನದ ಎದುರು, ವಿಜಯನಗರ 1ನೇ ಹಂತ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ :** ಐಇಇಇ ಮೈಸೂರು ಕಾನ್ ಐಇಇಇ ಮೈಸೂರು ಉಪವಿಭಾಗದ ಸಮ್ಮೇಳನ, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ. ಬೆಟಸೂರ ಮಠ, ಮುಖ್ಯ ಅತಿಥಿಗಳು : ಮಲೇಷಿಯಾದ ಏಷ್ಯಾ ಫೆಸಿಫಿಕ್ ಟೆಕ್ನಾಲಜಿ ಇನ್ನೋವೇಶನ್ ಯೂನಿವರ್ಸಿಟಿ ಕುಲಪತಿ ಡಾ. ಹೊ ಶಿನ್ ಕ್ವಾನ್, ಡಾ. ಹಮೀದ್ ರೇಜಾ ಕರೀಮಿ, ಜೆಎಸ್‌ಎಸ್ ಎಂವಿಪಿ ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ. ಬಿ. ಸುರೇಶ್, ಐಇಇಇ ಇಂಡಿಯಾ ಕೌನ್ಸಿಲ್‌ನ ಪುನೀತ್ ಕುಮಾರ್ ಮಿಶ್ರಾ, ಸ್ಥಳ: ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು ಆವರಣ, ಬೆಳಗ್ಗೆ 10ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಕೆ.ಆರ್.ಎಸ್. ಸೇವಾಕೇಂದ್ರದ ರಜತ ಮಹೋತ್ಸವ ಹಾಗೂ ಶಿವಸಾಗರ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ರಾಜಯೋಗಿ ಬಿ.ಕೆ. ಕರುಣಾಜಿ, ಸಾನ್ನಿಧ್ಯ : ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಆಶೀರ್ವಚನ : ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ, ಮುಖ್ಯ ಅತಿಥಿಗಳು : ಶಾಸಕ ರವೀಂದ್ರ ಶ್ರೀಕಂಠಯ್ಯ, ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಆರ್. ಮಂಜುನಾಥ್, ಸ್ಥಳ: ಬ್ರಹ್ಮಾಕುಮಾರೀಸ್, ಬಿಜಿಎಸ್ ಬಡಾವಣೆ, ಕೆ.ಆರ್.ಎಸ್. ರಸ್ತೆ, ಹುಲಿಕೆರೆ, ಬೆಳಗ್ಗೆ 11ಕ್ಕೆ.

■ **ಶ್ರೀ ಬನ್ನಿಮಹಾಕಾಳೇಶ್ವರಿ ಮತ್ತು ಆಯರಳ್ಳಿ ಮಾಕಮ್ಮನವರ ದೇವಸ್ಥಾನ ಟ್ರಸ್ಟ್:** ಶ್ರೀ ಬನ್ನಿಮಹಾಕಾಳೇಶ್ವರಿ, ಶ್ರೀ ಆಯರಳ್ಳಿ ಮಾಕಮ್ಮ ಮತ್ತು ಶ್ರೀಮಾಲಮ್ಮ ಜಾತ್ರಾ ಮಹೋತ್ಸವ, ವಾಹನೋತ್ಸವ ಪೂಜೆ, ಸ್ಥಳ: ಟ್ರಸ್ಟ್ ಆವರಣ, ಕುರುಬಾರಹಳ್ಳಿ, ಬೆಳಗ್ಗೆ 9ಕ್ಕೆ

■ **ವಿಶ್ವಜ್ಞಾನಿ ಸಾಂಸ್ಕೃತಿಕ ಕಲಾ ಟ್ರಸ್ಟ್, ಕೊಳ್ಳೇಗಾಲ :** ಸೇತು ಮಾಧವನ ಸಲ್ಲಾಪ ನಾಟಕ ಪ್ರದರ್ಶನ, ರಚನೆ : ಟಿ.ಎನ್. ನರಸಿಂಹನ್, ನಿರ್ದೇಶನ : ಅಂಕರಾಜು ಎನ್. ಕೊಳ್ಳೇಗಾಲ, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

■ **ನಾಗನವ ಕಲಾ ಸಾಹಿತ್ಯ ವೇದಿಕೆ :** ದಸರಾ ಮಹಿಳಾ ಕವಿಗೋಷ್ಠಿ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಹೊಮ್ಮ ಮಂಜುನಾಥ್, ಉದ್ಘಾಟನೆ : ಸಾಹಿತಿ ಬನ್ನೂರು ಕೆ. ರಾಜು, ಮುಖ್ಯ ಅತಿಥಿಗಳು : ಸಂಸ್ಕೃತಿ ಪೋಷಕ ರಘುರಾಂ ವಾಜಪೇಯಿ, ಕವಿಯತ್ರಿ ಎ. ಹೇಮಗಂಗಾ, ಸ್ಥಳ: ಅಕ್ಕನ ಬಳಗ, ತ್ಯಾಗರಾಜ ರಸ್ತೆ, ಬೆಳಗ್ಗೆ 10ಕ್ಕೆ.

■ **ಸುಧರ್ಮಾ ಸಂಸ್ಕೃತ ಪತ್ರಿಕೆ :** ಪತ್ರಿಕೆ ಸಂಸ್ಥಾಪಕರಾದ ಪಂಡಿತ್ ಕೆ.ಎನ್. ವರದರಾಜ ಅಯ್ಯಂಗಾರ್ ಅವರ ಜನ್ಮ ಶತಮಾನೋತ್ಸವ ಕಾರ್ಯಕ್ರಮ, ಸಾನ್ನಿಧ್ಯ : ವ್ಯಾಸರಾಜ ಮಠದ ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರು, ವರದವೈಭವಂ ವಿಶೇಷ ಸಂಚಿಕೆ ಲೋಕಾರ್ಪಣೆ : ಸಂಭಾಷಣಾ ಸಂದೇಶ ಮಾಸಪತ್ರಿಕೆ ಸಂಪಾದಕ ಡಾ. ಜನಾರ್ದನ ಹೆಗಡೆ, ಅಧ್ಯಕ್ಷತೆ : ಗೌರವ ಸಂಪಾದಕರಾದ ವಿದ್ವಾನ್ ಡಾ. ಎಚ್.ವಿ. ನಾಗರಾಜರಾವ್, ಉಪಸ್ಥಿತರು : ಶಾಸಕ ಎಸ್.ಎ. ರಾಮದಾಸ್, ಪ್ರಾಚ್ಯ ವಿದ್ಯಾ ಸಂಶೋಧನಾಲಯ ವಿಶ್ರಾಂತ ನಿರ್ದೇಶಕ ವಿದ್ವಾನ್ ಟಿ.ವಿ. ಸತ್ಯನಾರಾಯಣ, ಮಂಗಳೂರಿನ ಸಂಸ್ಕೃತ ಭಾರತಿಯ ಅಖಿಲ ಭಾರತ ಪ್ರಶಿಕ್ಷಣ ಪ್ರಮುಖರಾದ ಡಾ. ಎಚ್.ಆರ್. ವಿಶ್ವಾಸ್, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಬೆಳಗ್ಗೆ 10.30ಕ್ಕೆ.

■ **ಲಯನ್ಸ್ ಕ್ಲಬ್ ಜೆ.ಪಿ.ನಗರ :** ಹಿರಿಯ ನಾಗರಿಕರಿಗೆ ಸನ್ಮಾನ, ಕೆಎಎಸ್‌ನಲ್ಲಿ ಮೂರನೇ ರ್‍ಯಾಂಕ್ ಪಡೆದ ಕು. ಕಾವ್ಯ ಅವರಿಗೆ ಸನ್ಮಾನ, ಮುಖ್ಯ ಅತಿಥಿಗಳು : ಡಾ. ನಾಗರಾಜು ವಿ. ಬೈರಿ, ಅಧ್ಯಕ್ಷತೆ : ಲಯನ್ಸ್ ಕ್ಲಬ್ ಜೆ.ಪಿ.ನಗರ ಅಧ್ಯಕ್ಷ ಬಿ.ಎಂ. ಮಲ್ಲಿಕಾರ್ಜುನ, ವಿಶೇಷ ಆಹ್ವಾನಿತರು : ಲಯನ್ ರತ್ನಮ್ಮ, ಮಾಜಿ ವಿಧಾನಪರಿಷತ್ ಸದಸ್ಯ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಪಾಲಿಕೆ ಸದಸ್ಯೆ ಶಾರದಮ್ಮ ಈಶ್ವರ್, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

■ **ಪ್ರತಿಭೆ ವೇದಿಕೆ, ಸಂಜೆ ಸಮಯ :** ಉಪನ್ಯಾಸ, ಸನ್ಮಾನ, ಕೃತಿ ಬಿಡುಗಡೆ, ಬಹುಮಾನ ವಿತರಣೆ, ಅಧ್ಯಕ್ಷತೆ : ಪ್ರತಿಭೆ ವೇದಿಕೆ ಉಪಾಧ್ಯಕ್ಷ ಎಸ್. ನಾಗೇಂದ್ರರಾವ್, ಉದ್ಘಾಟನೆ : ನಟನ ರಂಗಶಾಲೆ ಅಧ್ಯಕ್ಷ ಎಸ್. ಆನಂದ, ಕೃತಿ ಬಿಡುಗಡೆ : ಶ್ರೀಮತಿ ಕೆ. ಇಂದುಮತಿ, ಸ್ಥಳ: ಶ್ರೀ ಸಂಕಷ್ಟಹರ ಗಣಪತಿ ದೇವಸ್ಥಾನ, ಶ್ರೀರಾಂಪುರ, ಸಂಜೆ 5ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಿಮಾಲಯ ಪ್ರತಿಷ್ಠಾನ :** ಕವಯತ್ರಿ ಶ್ರೀಮತಿ ಕೆ.ಟಿ. ಶ್ರೀಮತಿ ರಚಿಸಿರುವ 'ಸಮಸ್ಯಾಪೂರ್ಣ ಮುಕ್ತಕ' ಕೃತಿ ಬಿಡುಗಡೆ ಹಾಗೂ ಕವಿಗೋಷ್ಠಿ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕೃತಿ ಬಿಡುಗಡೆ : ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಗೌರವ ಅಧ್ಯಕ್ಷ ಎಸ್. ರಾಮಪ್ರಸಾದ್, ಕೃತಿ ಕುರಿತು ಮಾತನಾಡುವವರು : ಸಾಹಿತಿ ಡಾ. ಕಿರಣ್ ಎಸ್. ಸಿಡ್ಲೇಹಳ್ಳಿ, ಸ್ಥಳ: ಕನ್ನಡ ಭವನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ಉತ್ತರ ಭಾರತದಲ್ಲಿ ಸ್ವಾಮಿ ವಿವೇಕಾನಂದರು ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ನೃತ್ಯಗಿರಿ ಪ್ರದರ್ಶಕ ಕಲೆಗಳ ಸಂಶೋಧನಾ ಕೇಂದ್ರ :** ನೃತ್ಯ ಸಪ್ತಾಹ, ಬೆಳ್ಳಿ ಹಬ್ಬದ ಸಂಭ್ರಮ–ಗುರುವಂದನಾ ಕಾರ್ಯಕ್ರಮ, ಕುಮಾರಿ ಸುರಭಿ ಎ.ಎನ್. ಅವರಿಂದ ಗುರುವಂದನಾ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ವ್ಯಾಸರಾಜ ಮಠದ ಶ್ರೀ ಶ್ರೀ 1008 ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರು, ಅಧ್ಯಕ್ಷತೆ : ಡಾ. ಗೋಪಾಲ್ ಕೆ. ಮರಾಠೆ, ಮುಖ್ಯ ಅತಿಥಿಗಳು : ಪ್ರೊ. ಸಿ.ಹೆಚ್. ಶ್ರೀನಿವಾಸಮೂರ್ತಿ, ಸ್ಥಳ: ವೀಣೆ ಶೇಷಣ್ಣ ಭವನ, ಗಾನಭಾರತೀ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ರಂಗಾಯಣ :** ರಂಗಾಯಣ ರೆಪರ್ಟರಿ ಕಲಾವಿದರಿಂದ ಹಲಗಲಿ ಸಮರ ನಾಟಕ ಪ್ರದರ್ಶನ, ನಿರ್ದೇಶನ : ಅಡ್ಡಂಡ ಸಿ. ಕಾರ್ಯಪ್ಪ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಮಾ. ವೆಂಕಟರಾಂ, 6.20 ಗೀತಾರಾಧನ, 6.35 "ಬದುಕು ಮಣ್ಣಿನೊಂದಿಗೆ" ಲೇಖನ ಮತ್ತು ಪ್ರಸ್ತುತಿ–ಎ.ಪಿ. ಚಂದ್ರಶೇಖರ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ–ಎನ್. ಹೇಮಾ, ಬಿ. ಶ್ರೀರಾಂ ಭಟ್, ವ್ಯಾಖ್ಯಾನ– ಡಾ. ಹೆಚ್.ಎನ್. ಮಂಜುರಾಜ್, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.40 ನಮ್ಮ ಆರೋಗ್ಯ "ನವಜಾತ ಶಿಶುಗಳಲ್ಲಿ ಜಾಂಡೀಸ್–ಲಕ್ಷಣಗಳು ಮತ್ತು ಚಿಕಿತ್ಸೆ" ಕುರಿತು ಡಾ. ಶುಭಾ ಹೆಚ್.ವಿ.ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳೀಗಳೇ–ಶ್ರೀ ಗುರು ಕಲಾ ಶಾಲೆಯ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 ಮಕ್ಕಳ ಮಂಟಪ–ಮುಖಾಮುಖಿ, ವಿಷಯ– ಇಂಗ್ಲೀಷ್ ಭಾಷಾ ಕಲಿಕೆ ನಡೆಸಿಕೊಡುವವರು ಶಿಕ್ಷಕರಾದ ಸದಾನಂದ, ಭಾಗವಹಿಸುವ ಮಕ್ಕಳು ನೂರ್ ಉನ್ನಿಸಾ, ಭೂಮಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ಡಾ. ಆರ್.ಎನ್. ಶ್ರೀಲತಾ, ರೇಣುಕಾ ನಾಕೋಡ್, ದಿವ್ಯಾ ಸಂಪತ್, 12.45 ಜನಪದ ಸಂಗೀತ – ಸಿ.ಆರ್. ರುಕ್ಮಿಣಿ ಮತ್ತು ತಂಡ, 1.20 ಭಾವಗೀತೆ– ಶಾಂತಾ ಜಯತೀರ್ಥ, 3.00 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ಕಾರ್ಯಕ್ರಮ ಸ್ವರಾಜ್ ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ಗಾಥೆ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–"ಮಹಿರಾವಣ ಕಾಳಗ", ಪ್ರಸ್ತುತಿ– ಬೆಟ್ಟಂಪಾಡಿಯ ಕರ್ನಾಟಕ ಯಕ್ಷ ಭಾರತಿಯ ಕಲಾವಿದರು, 4.45 ಚಟ್‌ಪಟ್ ಚುರುಮುರಿ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ. ಮೀನಾ, 6.50 ಕೃಷಿರಂಗ–ಕೃಷಿಲೋಕ, 7.00 AIR Nxt ಭಾಗವಹಿಸುವವರು ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳು, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ–ಡಾ. ನರ್ಮದಾ– ವಯೋಲಿನ್

ಕಸ ಸುರಿಯುತ್ತಿದ್ದ ಜಾಗ ಈಗ ಎಲ್ಲರ ಅಚ್ಚುಮೆಚ್ಚಿನ ಆಕರ್ಷಕ ತಾಣ!

● ಮೈಸೂರು ನಗರ ಪಾಲಿಕೆಯ ಸ್ವಚ್ಛತಾ ಪರಿಕಲ್ಪನೆಯಡಿ ಮಾಡಿದ ಮತ್ತೊಂದು ಪರಿಹಾರ ● ಕಸದಿಂದ ಗಬ್ಬುವಾಸನೆ ಸೂಸುತ್ತಿದ್ದ ಈ ಜಾಗ ನೋಡಿ; ಎಷ್ಟೊಂದು ಚಂದ

ಮೈಸೂರು, ಅ.15(ಜಿಎ)– ಕಂಡ ಕಂಡವರು ಇಲ್ಲಿ ಕಸ ಸುರಿಯುತ್ತಿದ್ದರು. ಗಬ್ಬು ನಾರುತ್ತಿದ್ದ ಸ್ಥಳ ಈಗ ಹಿರಿಯ ನಾಗರಿಕರು, ಮಕ್ಕಳ ಅಚ್ಚುಮೆಚ್ಚಿನ ತಾಣವಾಗಿ ಮಾರ್ಪಾಡಾಗಿದೆ.

ನಗರದ ಒಂಟಿಕೊಪ್ಪಲಿನ ವಾರ್ಡ್ ನಂ 19ರ ರಾಮಕೃಷ್ಣ ಆಶ್ರಮದ ಒಂದು ಬದಿಯ ರಸ್ತೆ ಬದಿಯುದ್ದಕ್ಕೂ ಕಸ ತಂದು ಹಾಕುತ್ತಿದ್ದರು. ಆದರೆ, ಇಂದು ಕಸ ಹಾಕುತ್ತಿದ್ದವರೇ ಈ ಸ್ಥಳದಲ್ಲಿ ಕುಳಿತು ವಿಶ್ರಾಂತಿ ತೆಗೆದುಕೊಳ್ಳುವ ರೀತಿಯಲ್ಲಿ ಪ್ರಶಸ್ತ ಸ್ಥಳವಾಗಿ ಮಾರ್ಪಟ್ಟು ಎಲ್ಲರನ್ನೂ ಆಕರ್ಷಿಸುತ್ತಿದೆ.

ಮೈಸೂರು ಈಗಾಗಲೇ ಸ್ವಚ್ಛನಗರಿ ಪಟ್ಟವನ್ನು ಅಲಂಕರಿಸಿದೆ. ಅದಕ್ಕೆ ತಕ್ಕಂತೆ ಮಹಾನಗರ ಪಾಲಿಕೆಯೂ ಸಾರ್ವಜನಿಕರಲ್ಲಿ ಸ್ವಚ್ಛತೆಯ ಅರಿವು ಮೂಡಿಸಲು ನಿರಂತರ ಯೋಜನೆಗಳನ್ನು ರೂಪಿಸುತ್ತ ಬಂದಿದೆ. ಆದರೆ, ಕೆಲವರು ಇನ್ನೂ ಹೇಸಿಗೆ ಮಾಡುವುದನ್ನು ಬಿಟ್ಟಿಲ್ಲ. ಸ್ವಚ್ಛತೆಯ ಬಗ್ಗೆಯೂ ತಲೆ ಕೆಡಿಸಿಕೊಳ್ಳದೆ ಸಿಕ್ಕ ಸಿಕ್ಕ ಸ್ಥಳಗಳಲ್ಲಿ ಕಸ ಸುರಿಯುವುದು ಇಂದಿಗೂ ನಿಂತಿಲ್ಲ.

ಈ ಬಗ್ಗೆ ಪಾಲಿಕೆಯೂ ವಿಭಿನ್ನವಾಗಿ ಆಲೋಚಿಸಿ ವಾರ್ಡ್‌ನ ಯಾವ ಸ್ಥಳದಲ್ಲಿ ಜನ ಕಸ ಸುರಿಯುತ್ತಾರೆ ಎಂಬುದನ್ನು ಗುರುತಿಸಿ ಅಲ್ಲಿ ಇತ್ತೀಚೆಗೆ ಸ್ವಚ್ಛಗೊಳಿಸಿ, ರಂಗೋಲಿ ಬಿಡಿಸುವ ಕಾರ್ಯಕ್ಕೆ ಮುಂದಾದರು. ಅದರ ಜೊತೆಗೆ ಒಂದು ಹೆಜ್ಜೆ ಮುಂದೆ ಹೋಗಿ ಕಸ ಸುರಿಯುವ ಸ್ಥಳಗಳನ್ನು ಗುರುತಿಸಿ, ಆ ಸ್ಥಳವು ಜನರನ್ನು ಆಕರ್ಷಿಸುವಂತೆ ಮಾಡಲು ಮುಂದಾಗಿದ್ದು, ಅದರ ಪರಿಣಾಮವಾಗಿ ಇಂದು ವಾರ್ಡ್ ನಂ 19ರಲ್ಲಿ ನಿರ್ಮಿಸಿರುವ ವಿಭಿನ್ನವಾದ ಪ್ಲಾಟ್‌ಫಾರಂ ಕಿರಿಯರಿಂದ ಹಿರಿಯರವರೆಗೂ ಎಲ್ಲರನ್ನೂ ಸೆಳೆಯುತ್ತಿದೆ.

ಮೊದಲು ಈ ಸ್ಥಳದಲ್ಲಿ ಕಸ ಹಾಕಬಾರದು, ದಂಡ ಹಾಕುತ್ತೇವೆ ಎಂದು ಎಲ್ಲಾ ರೀತಿಯಲೂ ಕಸ ಹಾಕುವವರಿಗೆ ಎಚ್ಚರಿಸಲಾಗಿತ್ತು. ಆದರೂ ಕೆಲ ಬುದ್ಧಿಗೇಡಿ ಜೀವಿಗಳೇ ಬೆಳಗ್ಗೆ ಕೆಲಸಕ್ಕೆ ತೆರಳುವ ಸಮಯದಲ್ಲಿ ಪ್ಲಾಸ್ಟಿಕ್ ಕವರ್‌ನಲ್ಲಿ ಮನೆಯಿಂದ ಕಸ ತುಂಬಿಕೊಂಡು ಬಂದು ಬಿಸಾಕಿ ಹೋಗುತ್ತಿದ್ದರು. ನಂತರ ಇಲ್ಲಿನ ಬಿಡಾಡಿ ದನಗಳು ಆಹಾರಕ್ಕಾಗಿ ಈ ಪ್ಲಾಸ್ಟಿಕ್ ಕವರ್‌ನಲ್ಲಿರುವ ಕಸವನ್ನು ಹೊರಗೆಳೆದು ರಸ್ತೆಯಲ್ಲಿ ಹರಡುತ್ತಿದ್ದವು. ಇದರ ಪರಿಣಾಮ ಇಡೀ ರಸ್ತೆ ಕಸ ಆವರಿಸಿ ಗಬ್ಬು ನಾರುತ್ತಿತ್ತು.



ಆಕರ್ಷಕ ತಾಣದಲ್ಲಿ ಅದರ ರೂವಾರಿಯಾದ ಸ್ಥಳೀಯ ಕಾರ್ಪೋರೇಟರ್ ಭಾಗ್ಯ ಮಹದೇಶ್

> "ನಮ್ಮ ವಾರ್ಡ್‌ನಲ್ಲಿ ಹೆಚ್ಚು ಕಸ ಸುರಿಯುವ ಎರಡು ಸ್ಥಳಗಳಲ್ಲಿ ವಿಶಿಷ್ಟವಾದ ಪ್ಲಾಟ್‌ಫಾರಂ ನಿರ್ಮಾಣ ಉದ್ದೇಶ ಹೊಂದಲಾಗಿತ್ತು. ಈಗಾಗಲೇ ಒಂದು ಪ್ಲಾಟ್‌ಫಾರಂ ನಿರ್ಮಾಣ ಮಾಡಿದ್ದು, ಇದಕ್ಕೆ ಸ್ಥಳೀಯರಿಂದ ಭಾರೀ ಮೆಚ್ಚುಗೆ ವ್ಯಕ್ತವಾಗುತ್ತಿದೆ. ಮತ್ತೊಂದು ಭಾಗದಲ್ಲಿಯೂ ಕಾಮಗಾರಿ ಆರಂಭವಾಗಿದೆ. ಪಾಲಿಕೆ ಆಯುಕ್ತರ ಜೊತೆ ಚರ್ಚಿಸಿ ವಾರ್ಡ್‌ನ ಇಂತಹ ಇನ್ನಿತರ ಸ್ಥಳದಲ್ಲಿಯೂ ಇದೇ ರೀತಿ ಪ್ಲಾಟ್‌ಫಾರಂ ನಿರ್ಮಾಣ ಮಾಡುವ ಚಿಂತನೆ ಇದೆ.
> -ಭಾಗ್ಯ ಮಹದೇಶ್, ಪಾಲಿಕೆ ಸದಸ್ಯರು, ವಾರ್ಡ್ ನಂ.19

> "ಕಂಡ ಕಂಡ ಸ್ಥಳಗಳಲ್ಲಿ ಕಸ ಹಾಕುವ ನೂರಾರು ಸ್ಥಳಗಳನ್ನು ಪಾಲಿಕೆ ಗುರುತಿಸಿದೆ. ಅದರಲ್ಲಿ 10 ರಿಂದ 12 ಸ್ಥಳಗಳನ್ನು ಪ್ರತಿ ವಲಯ ಕಚೇರಿಗೆ ವಹಿಸಿದ್ದು, ಆ ಸ್ಥಳಗಳಲ್ಲಿ ಕಸ ಹಾಕುವುದನ್ನು ತಪ್ಪಿಸಲು ವಿನೂತನ ಕಾರ್ಯಯೋಜನೆ ರೂಪಿಸಲು ಪಾಲಿಕೆ ಮುಂದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ 30 ಲಕ್ಷ ರೂ. ಗಳನ್ನು ಕಾಯ್ದಿರಿಸಲಾಗಿದೆ. ವಾರ್ಡ್ ನಂ 19ರಲ್ಲಿ ನಿರ್ಮಾಣವಾಗಿರುವ ಈ ಪ್ಲಾಟ್‌ಫಾರಂ ಬಹಳ ಅದ್ಭುತವಾಗಿ ಮೂಡಿಬಂದಿದ್ದು, ಸಾರ್ವಜನಿಕ ವಲಯದಿಂದ ಮೆಚ್ಚುಗೆಯ ಮಾತುಗಳು ಕೇಳಿಬರುತ್ತಿವೆ.
> -ಲಕ್ಷ್ಮಿಕಾಂತ ರೆಡ್ಡಿ, ಆಯುಕ್ತ, ಮಹಾನಗರ ಪಾಲಿಕೆ



ವರ್ಣರಂಜಿತ ಆಕರ್ಷಕ ತಾಣ ನಿರ್ಮಾಣಕ್ಕೂ ಮುನ್ನ ಇದ್ದ ದುಸ್ಥಿತಿ...

ಈಗ ಸದರಿ ವಾರ್ಡ್‌ನ ಪಾಲಿಕೆ ಸದಸ್ಯರಾದ ಭಾಗ್ಯ ಮಹದೇಶ್, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ ರೆಡ್ಡಿ ಹಾಗೂ ವಲಯ ಕಚೇರಿ 4ರ ಅಭಿವೃದ್ಧಿ ಅಧಿಕಾರಿ ವೈ.ಟಿ. ಹೇಗಾನಂದ ಅವರ ವಿನೂತನ ಪಯತ್ನದಿಂದ ಅಂದಾಜು 4 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣಗೊಂಡಿರುವ ಈ ವಿಶೇಷ ಪ್ಲಾಟ್‌ಫಾರಂ ಅಂದದ ಅಂಗಳವಾಗಿದ್ದು, ಮಕ್ಕಳ ನೆಚ್ಚಿನ ತಾಣವಾಗುತ್ತಿದೆ. ಈ ಭಾಗದಲ್ಲಿರುವ ಹಿರಿಯ ನಾಗರಿಕರು ವಾಯುವಿಹಾರ ಮುಗಿಸಿ ಬಂದು ಕುಳಿತು ವಿಶ್ರಮಿಸಲು ಎರಡು ಬೆಂಚುಗಳನ್ನು ಹಾಕಿದ್ದು, ಪ್ರತಿನಿತ್ಯ ವಾಯುವಿಹಾರದ ಬಳಿಕ ಇಲ್ಲಿ ಕುಳಿತು ಕೆಲ ಸಮಯ ಕಳೆಯುತ್ತಿದ್ದಾರೆ. ಗೋಡೆಗಳ ಮೇಲೆ ಚಿತ್ರಿಸಿರುವ ಚಿಟ್ಟೆ, ಸ್ಕ್ರಾಪ್ ಟೈರ್ ಬಳಸಿ ಜಿರಾಫೆ, ಜೀಬ್ರಾ ಆಕೃತಿಯ ಆಟಿಕೆಗಳು ಮಕ್ಕಳಿಗೆ ಮುದ ನೀಡುತ್ತಿದ್ದು, ಇದರೊಟ್ಟಿಗೆ ಕಸ ವಿಲೇವಾರಿಯ ಬಗ್ಗೆ ಅರಿವು ಮೂಡಿಸುವ ಮಾಹಿತಿಯನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಏಷ್ಯಾ ಕಪ್: 7ನೇ ಬಾರಿ ಟೀಂ ಇಂಡಿಯಾ ಮಹಿಳಾ ತಂಡಕ್ಕೆ ಚಾಂಪಿಯನ್ ಪಟ್ಟ

ಬಾಂಗ್ಲಾ: ಏಷ್ಯಾ ಕಪ್ 2022ರ ಫೈನಲ್ ಪಂದ್ಯದಲ್ಲಿ ಲಂಕಾ ವಿರುದ್ಧ ಭರ್ಜರಿ ಜಯ ಗಳಿಸುವ ಮೂಲಕ ಟೀಂ ಇಂಡಿಯಾ ಮಹಿಳಾ ತಂಡ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಆರಂಭಿಸಿದ ಶ್ರೀಲಂಕಾ ಟೀಂ ಇಂಡಿಯಾ ಬೌಲರ್‌ಗಳ ಮಾರಕ ದಾಳಿಗೆ ತತ್ತರಿಸಿತು. ಲಂಕಾ ಪರ ಓಷದಿ ರಣಸಿಂಗ್(13) ಇನೋಕಾ ರಣವೀರ ಅಜೇಯ 18 ರನ್ ಬಿಟ್ಟರೆ ಮತ್ಯಾವ ಆಟಗಾರ್ತಿಯೂ ಎರಡಂಕಿ ದಾಟಲಿಲ್ಲ.

ಟೀಂ ಇಂಡಿಯಾ ಪರ ಮಾರಕ ಬೌಲಿಂಗ್ ದಾಳಿ ನಡೆಸಿದ ರೇಣುಕಾ ಸಿಂಗ್ 3, ರಾಜೇಶ್ವರಿ ಗಾಯಕ್ವಾಡ್ ಮತ್ತು ಸ್ನೇಹ್ ರಾಣಾ ತಲಾ 2 ವಿಕೆಟ್ ಪಡೆದು ಲಂಕಾ ತಂಡವನ್ನು 65 ರನ್‌ಗಳ ಅಲ್ಪ ಮೊತ್ತಕ್ಕೆ ಕಟ್ಟಿಹಾಕಿದರು.

ಲಂಕಾ ನೀಡಿದ 66 ರನ್‌ಗಳ ಗುರಿ ಬೆನ್ನಟ್ಟಿದ ಟೀಂ ಇಂಡಿಯಾ 2 ವಿಕೆಟ್ ನಷ್ಟಕ್ಕೆ 71 ರನ್ ಬಾರಿಸುವ ಮೂಲಕ ಗೆಲುವಿನ ನಗೆ ಬೀರಿತು. ಟೀಂ ಇಂಡಿಯಾ ಪರ ಸ್ಮೃತಿ ಮಂದಾನಾ ಅಜೇಯ 51 ಹಾಗೂ ಹರ್ಮನ್ ಪ್ರೀತ್ ಕೌರ್ ಅಜೇಯ 11 ರನ್ ಬಾರಿಸುವ ಮೂಲಕ ತಂಡಕ್ಕೆ ಗೆಲುವು ತಂದುಕೊಟ್ಟರು. ಇನ್ನುಳಿದಂತೆ ಶಫಾಲಿ ವರ್ಮಾ 5 ರನ್ ಹಾಗೂ ಜೆಮಿಮಾ ರಾಡ್ರಿಗಸ್ 2 ರನ್ ಬಾರಿಸಿದ್ದಾರೆ.

ಇಲ್ಲಿಯವರೆಗೂ ಏಷ್ಯಾಕಪ್ 8 ಆವೃತ್ತಿಗಳು ನಡೆದಿದ್ದು ಇದರಲ್ಲಿ ಭಾರತ ಬರೋಬ್ಬರಿ 7 ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿದೆ. ಇನ್ನುಳಿದಂತೆ 2018ರ ಟೂರ್ನಿಯಲ್ಲಿ ಬಾಂಗ್ಲಾದೇಶ ಚಾಂಪಿಯನ್ ಆಗಿದ್ದು ಭಾರತ ರನ್ನರ್ ಅಪ್ ಆಗಿತ್ತು.



ಕರ್ನಾಟಕದ ಎರಡು ಪ್ರಮುಖ ಹೆದ್ದಾರಿಗಳಲ್ಲಿ 2 ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಕಾರಿಡಾರ್ ಸ್ಥಾಪನೆ

ಬೆಂಗಳೂರು: ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ರಾಜ್ಯದ ಎರಡು ಪ್ರಮುಖ ಹೆದ್ದಾರಿಗಳಲ್ಲಿ ಎರಡು ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗಿದೆ ಎಂದು ಹೇಳಿದೆ.

ಎಲೆಕ್ಟ್ರಿಕ್ ವಾಹನಗಳ ಚಾರ್ಜಿಂಗ್ ಕಾರಿಡಾರ್‌ಗಳನ್ನು ಬೆಂಗಳೂರು–ಚೆನ್ನೈ ಹೆದ್ದಾರಿ ಮತ್ತು ಬೆಂಗಳೂರು–ಮೈಸೂರು–ಕೊಡಗು ಹೆದ್ದಾರಿಯಲ್ಲಿ ಸ್ಥಾಪಿಸಲಾಗಿದೆ. ಎರಡನೇ ಹಂತದ ಯೋಜನೆ ಇದಾಗಿದ್ದು, ಮೊದಲ ಹಂತದಲ್ಲಿ ಚೆನ್ನೈ, ತಿರುಚ್ಚಿ, ಮಧುರೆ ಹೆದ್ದಾರಿಯಲ್ಲಿ ಜಾರಿಯಾಗಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ಪಿ.ಎಸ್. ರವಿ, ದೂರದ ಪ್ರಯಾಣದ ಸಮಯದಲ್ಲಿ ಎಲೆಕ್ಟ್ರಿಕ್ ವಾಹನಗಳ ಮಾಲೀಕರು ತಮ್ಮ ವಾಹನಗಳನ್ನು ಚಾರ್ಜ್ ಮಾಡಲು ಈ ಕಾರಿಡಾರ್‌ಗಳು ಸಹಾಯ ಮಾಡುತ್ತವೆ ಮತ್ತು ಚಾರ್ಜಿಂಗ್‌ಗೆ ತಗಲುವ ಸಮಯವನ್ನು ಕಡಿತಗೊಳಿಸುತ್ತದೆ ಎಂದರು.

ಮುಂದುವರಿದು, ಇವಿ ಫಾಸ್ಟ್ ಚಾರ್ಜಿಂಗ್ ಕಾರಿಡಾರ್ ಕಲ್ಪನೆಯಲ್ಲಿ ಪ್ರಯಾಣಿಕರು ತಮ್ಮ ಪ್ರಯಾಣದ ಸಮಯದಲ್ಲಿ ಯಾವುದೇ ತೊಂದರೆಯಿಲ್ಲದೆ ತಮ್ಮ ವಾಹನಗಳನ್ನು ಚಾರ್ಜ್ ಮಾಡಬಹುದು. ಹೆದ್ದಾರಿಯ ಎರಡೂ ಕಡೆಗಳಲ್ಲಿ, 100 ಕಿಲೋ ಮೀಟರ್ ಅಂತರದಲ್ಲಿ ಬಿಪಿಸಿಎಲ್ ನಡೆಸುತ್ತಿರುವ ಒಟ್ಟು 9 ಪೆಟ್ರೋಲ್ ಪಂಪ್‌ಗಳಲ್ಲಿ 25 ಕಿಲೋವಾಟ್‌ನ ವೇಗದ ಚಾರ್ಜಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಹೇಳಿದರು.



ನ.15ರಂದು ಮೈಸೂರಲ್ಲಿ 'ನೀಲಾಂಬಿಕೆ' ನಾಟಕ ಪ್ರದರ್ಶನ

ರಾಜ್ಯದ 31 ಜಿಲ್ಲೆಗಳಲ್ಲೂ ಏಕಕಾಲದಲ್ಲಿ ಬಸವಾದಿ ಶರಣರ ದರ್ಶನ

ಮೈಸೂರು,ಅ.15(ಪಿಎಂ)– ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕಿನ ಸಾಣೇಹಳ್ಳಿ ಶ್ರೀ ಶಿವಕುಮಾರ ಕಲಾ ಸಂಘದ ವತಿಯಿಂದ ರಾಜ್ಯದ ಎಲ್ಲಾ 31 ಜಿಲ್ಲೆಗಳಲ್ಲಿ ನ.15ರಂದು ಏಕಕಾಲದಲ್ಲಿ 'ಬಸವಾದಿ ಶರಣರ ದರ್ಶನ' ಶೀರ್ಷಿಕೆಯಡಿ ಶರಣರ ಕುರಿತ ನಾಟಕಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.

ಅಂತೆಯೇ ಮೈಸೂರಿನಲ್ಲಿ 'ಶಿವಶರಣೆ ನೀಲಾಂಬಿಕೆ' ನಾಟಕ ಪ್ರದರ್ಶನಗೊಳ್ಳಲಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ನಾಟಕ ಪ್ರದರ್ಶನದ ಪೋಸ್ಟರ್ ಅನ್ನು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಬಿಡುಗಡೆ ಮಾಡಿದರು.

ಕದಂಬ ರಂಗವೇದಿಕೆ ಅಧ್ಯಕ್ಷ ರಾಜಶೇಖರ ಕದಂಬ ಮಾತನಾಡಿ, ಒಂದೊಂದು ಜಿಲ್ಲೆಯಲ್ಲಿ ಒಂದೊಂದು ಸ್ಥಳೀಯ ರಂಗ ತಂಡಕ್ಕೆ ಬಸವಾದಿ ಶರಣರ ಕುರಿತ ನಾಟಕ ಪ್ರದರ್ಶನ ಆಯೋಜಿಸಲು ಸಾಣೇಹಳ್ಳಿಯ ಕಲಾ ಸಂಘ ಅವಕಾಶ ಕಲ್ಪಿಸಿದೆ. ಅಂತೆಯೇ ಮೈಸೂರಿನಲ್ಲಿ ನಮ್ಮ ವೇದಿಕೆ ವತಿಯಿಂದ ನ.15ರ ಸಂಜೆ 7ಕ್ಕೆ ಕಲಾಮಂದಿರದ ಕಿರುರಂಗಮಂದಿರಲ್ಲಿ 'ನೀಲಾಂಬಿಕೆ' ನಾಟಕ ಪ್ರದರ್ಶನ ನಡೆಯಲಿದೆ ಎಂದರು.

ಒಂದೂ ಮುಕ್ಕಾಲು ಅವಧಿಯ ನಾಟಕ ಇದಾಗಿದ್ದು, ಪ್ರವೇಶ ಉಚಿತವಿದೆ. ಎಲ್ಲಾ ಜಿಲ್ಲೆಗಳಲ್ಲೂ ಶಿವಶರಣರ ಒಂದೊಂದು ವಿಷಯಗಳನ್ನು ನಾಟಕಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಆದರೆ ಎಲ್ಲಾ ನಾಟಕಗಳಲ್ಲೂ ಬಸವಣ್ಣ ಕೇಂದ್ರಬಿಂದುವಾಗಿ ಕಾಣಿಸಿಕೊಳ್ಳಲಿದ್ದಾರೆ ಎಂದು ತಿಳಿಸಿದರು.

ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಬಸವಾದಿ ಶರಣರ ತತ್ವ ಮತ್ತು ಆದರ್ಶ ಇಂದಿಗೂ ಪ್ರಸ್ತುತ. ಹೀಗಾಗಿ ಈ ನಾಟಕಗಳು ಬಸವಾದಿ ಶರಣರ ಆದರ್ಶ ಪ್ರಸಾರ ಮಾಡಲಿವೆ ಎಂದು ತಿಳಿಸಿದರು. ಚಲನಚಿತ್ರ ನಟ ಶಂಕರ್ ಅಶ್ವಥ್ ಮಾತನಾಡಿದರು. ಕದಂಬ ರಂಗವೇದಿಕೆ ಉಪಾಧ್ಯಕ್ಷ ಯು.ಎಸ್. ರಾಮಣ್ಣ, ಖಜಾಂಚಿ ಡಿ.ತಿಪ್ಪಣ್ಣ, ಕಾರ್ಯದರ್ಶಿ ಸುಬ್ಬುನರಸಿಂಹ ಹಾಜರಿದ್ದರು.



2023ಕ್ಕೆ ಜೆಡಿಎಸ್‌ಗೆ ಅಧಿಕಾರ; ಎಂಎಲ್‌ಸಿ ಮಂಜೇಗೌಡ ವಿಶ್ವಾಸ

ಜನತೆಗೆ ಬಿಜೆಪಿ ಭ್ರಷ್ಟಾಚಾರ, ಕಾಂಗ್ರೆಸ್ ವೈಫಲ್ಯ ತಿಳಿಸಲು ಕಾರ್ಯಕರ್ತರಿಗೆ ಸಲಹೆ

ಮೈಸೂರು,ಅ.15(ಪಿಎಂ)– ರಾಜ್ಯ ಬಿಜೆಪಿ ಸರ್ಕಾರದ ಭ್ರಷ್ಟಾಚಾರ ಮತ್ತು ಕಾಂಗ್ರೆಸ್ ಪಕ್ಷದ ವೈಫಲ್ಯಗಳನ್ನು ಜನತೆಗೆ ತಿಳಿಸುವ ಮೂಲಕ ರಾಜ್ಯದಲ್ಲಿ 2023ಕ್ಕೆ ಜೆಡಿಎಸ್ ಪಕ್ಷ ಅಧಿಕಾರದ ಚುಕ್ಕಾಣಿ ಹಿಡಿಯಲು ಪಕ್ಷದ ಮುಖಂಡರು, ಕಾರ್ಯಕರ್ತರು ಶ್ರಮಿಸಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಸಲಹೆ ನೀಡಿದರು.

ಮೈಸೂರಿನ ಜೆಡಿಎಸ್ ಕಚೇರಿಯಲ್ಲಿ ಶನಿವಾರ ನಡೆದ ಸಭೆಯಲ್ಲಿ ಪಕ್ಷದ ನೂತನ ಪದಾಧಿಕಾರಿಗಳಿಗೆ ನೇಮಕಾತಿ ಪತ್ರ ವಿತರಿಸಿ ಅವರು ಮಾತನಾಡಿದರು. ಜೆಡಿಎಸ್ ಪಕ್ಷದ ಕಾರ್ಯಕರ್ತರು ಹಣಕ್ಕೆ ಆಸೆ ಪಡದೇ ಪಕ್ಷಕ್ಕಾಗಿ ಪ್ರಾಣ ಬೇಕಾದರೂ ಕೊಡುವ ನಿಷ್ಠಾವಂತ ಕಾರ್ಯಕರ್ತರಾಗಿದ್ದಾರೆ ನಾವೆಲ್ಲರೂ ಸೇರಿ ಪಕ್ಷವನ್ನು ಬೂತ್ ಮಟ್ಟದಲ್ಲಿ ಸಂಘಟಿಸಬೇಕಿದೆ ಎಂದು ಹೇಳಿದರು.

ಜನತೆ ರಾಷ್ಟ್ರೀಯ ಪಕ್ಷಗಳಿಂದ ಬೇಸತ್ತಿದ್ದು, ಅವುಗಳಿಂದ ಮುಕ್ತಿ ಬಯಸಿದ್ದಾರೆ ಆ ಮೂಲಕ ಪ್ರಾದೇಶಿಕ ಪಕ್ಷದತ್ತ ಒಲವು ಹೊಂದಿದ್ದಾರೆ. ಆದ್ದರಿಂದ 2023ಕ್ಕೆ ಹೆಚ್.ಡಿ. ಕುಮಾರಸ್ವಾಮಿ ಮುಖ್ಯಮಂತ್ರಿ ಆಗುವುದು ಖಚಿತ. ಈಗ ವಿವಿಧ ಸ್ಥಾನಗಳಿಗೆ ನೇಮಕಗೊಂಡಿರುವ ಪದಾಧಿಕಾರಿಗಳು ಆಡಳಿತ ಪಕ್ಷದ ದುರಾಡಳಿತವನ್ನು ಜನತೆಗೆ ತಿಳಿಸುವ ಜೊತೆಗೆ ಜೆಡಿಎಸ್ ಪಕ್ಷ ಅಧಿಕಾರದಲ್ಲಿದ್ದ ಅವಧಿಯಲ್ಲಿ ಮುಖ್ಯಮಂತ್ರಿಯಾಗಿ ಹೆಚ್.ಡಿ.ಕುಮಾರಸ್ವಾಮಿಯವರು ಕೊಟ್ಟ ಜನಪರ ಯೋಜನೆಗಳನ್ನು ತಿಳಿಸಬೇಕು ಎಂದು ತಿಳಿಸಿದರು.

ಅ.18ಕ್ಕೆ ಹೆಚ್‌ಡಿಕೆ ಮೈಸೂರಿಗೆ: ಪ್ರತಿಯೊಬ್ಬ ಕಾರ್ಯಕರ್ತರು ಪಕ್ಷಕ್ಕೆ ನಿಷ್ಠರಾಗಿ ಶಿಸ್ತಿನಿಂದ ದುಡಿಯಬೇಕು. ನಗರದ ಮೂರು ಕ್ಷೇತ್ರಗಳಲ್ಲಿಯೂ ಗೆಲ್ಲುವ ಅವಕಾಶ ಪಕ್ಷಕ್ಕೆ ಇದ್ದು, ನಗರಾಧ್ಯಕ್ಷ ಚೆಲುವೇಗೌಡರ ನೇತೃತ್ವದಲ್ಲಿ ಸಂಘಟನೆಯಾಗಬೇಕು. ಇದೇ ತಿಂಗಳ 18ರಂದು ಕುಮಾರಸ್ವಾಮಿಯವರು ಪಕ್ಷದ ಸಂಘಟನೆ, ಚುನಾವಣೆ ವಿಚಾರದ ಬಗ್ಗೆ ಚರ್ಚಿಸಲು ಮೈಸೂರಿಗೆ ಬರುತ್ತಿದ್ದು, ಆಗ ಕಾರ್ಯಕರ್ತರು ತಮ್ಮ ಅಭಿಪ್ರಾಯ ತಿಳಿಸಬಹುದು ಎಂದು ಮಂಜೇಗೌಡ ಹೇಳಿದರು.

ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಆರ್. ಲಿಂಗಪ್ಪ, ಅಬ್ದುಲ್ಲಾ, ಶಾಹಿದ್, ಜೆಡಿಎಸ್ ನಗರಾಧ್ಯಕ್ಷ ಕೆ.ಟಿ.ಚೆಲುವೇಗೌಡ, ನಗರ ಪಾಲಿಕೆ ಮಾಜಿ ಸದಸ್ಯರಾದ ಕೆಂಪಣ್ಣ, ವಸಂತಕುಮಾರಿ, ಬಾಲು, ಜಯರಾಮು, ಮುಖಂಡರಾದ ಪ್ರಕಾಶ್ ಪ್ರಿಯದರ್ಶನ್, ಗಂಗಾಧರಗೌಡ, ಅಮ್ಮ ಸಂತೋಷ್, ಮಂಜುನಾಥ್ ಬಾಬು, ರಮೇಶ್, ಕೃಷ್ಣ, ಎನ್.ಜಿ. ನಾಗರಾಜ್, ಕುಮಾರ್, ಮಹೇಶ್ ಮತ್ತಿತರರು ಹಾಜರಿದ್ದರು.



'ಜಿಲ್ಲಾಧಿಕಾರಿ ನಡೆ– ಹಳ್ಳಿ ಕಡೆ' ಕಾರ್ಯಕ್ರಮ ಸದುಪಯೋಗಪಡಿಸಿಕೊಳ್ಳಿ: ಶಾಸಕ ಜಿ.ಟಿ.ಡಿ

ಸಭೆಯಲ್ಲಿ ನೀರು, ಬಸ್ ಸೌಲಭ್ಯ, ಸ್ಮಶಾನ, ಶಾಲಾ ಕೊಠಡಿ ನೀಡಲು ಗ್ರಾಮಸ್ಥರ ಮನವಿ



ಮೈಸೂರು, ಅ.15(ಆರ್‌ಕೆಬಿ)– ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆಗೆ ಈ ಕಾರ್ಯಕ್ರಮವು ಅತ್ಯಂತ ಯಶಸ್ವಿ ಕಾರ್ಯಕ್ರಮವಾಗಿದ್ದು, ಇದರ ಸದುಪಯೋಗಪಡಿಸಿಕೊಳ್ಳುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಇಂದಿಲ್ಲಿ ತಿಳಿಸಿದರು. ಮೈಸೂರು ತಾಲೂಕು ಜಯಪುರ ಹೋಬಳಿ ಮುರುಡಗಳ್ಳಿ ಗ್ರಾಮದ ಶಾಲಾ ಆವರಣದಲ್ಲಿ ಗಿಡ ನೆಡುವ ಮೂಲಕ 'ಜಿಲ್ಲಾಧಿಕಾರಿ ನಡೆ–ಹಳ್ಳಿ ಕಡೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ತಾಲೂಕಿನ ಎಲ್ಲಾ ಅಧಿಕಾರಿಗಳು ಇಂದು ಮುರುಡಗಳ್ಳಿ ಗ್ರಾಮಕ್ಕೆ ಆಗಮಿಸಿದ್ದು, ಜನತೆ ಇಲಾಖೆಗಳ ಸಮಸ್ಯೆಗಳಿದ್ದರೆ ಖುದ್ದಾಗಿ ಪರಿಹರಿಸಿಕೊಳ್ಳುವಂತೆ ತಿಳಿಸಿದರು.

ಕಂದಾಯ ಇಲಾಖೆ ವತಿಯಿಂದ ಸ್ಥಳದಲ್ಲಿಯೇ ಪಿಂಚಣಿ, ವಿಧವಾ ವೇತನ, ಅಂಗವಿಕಲರ ವೇತನ, ಪಹಣಿ ದೋಷಗಳ ತಿದ್ದುಪಡಿ, ಕೆರೆ ಒತ್ತುವರಿ ತೆರವು, ಪೌತಿ ಖಾತೆ ಮಾಡುವ ಸಲುವಾಗಿ ಜನತೆ ತಮ್ಮ ಸಮಸ್ಯೆಗಳನ್ನು ತಾಲೂಕು ಕಚೇರಿಗೆ ಹೋಗಿ ಹೇಳುವ ಬದಲು ಅಧಿಕಾರಿಗಳೇ ನಿಮ್ಮ ಮನೆ ಬಾಗಿಲಿಗೆ ಬಂದಿದ್ದು, ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ತಿಳಿಸಿದರು. ಮುರುಡಗಳ್ಳಿ ಗ್ರಾಮದಲ್ಲಿ ಕೆರೆ ಒತ್ತುವರಿ, ಶುದ್ಧ ಕುಡಿಯುವ ನೀರಿನ ಘಟಕ, ಗ್ರಾಮಕ್ಕೆ ಕಬಿನಿ ಕುಡಿಯುವ ನೀರು ಸಮರ್ಪಕವಾಗಿ ಒದಗಿಸುವಂತೆ, ಬಸ್ ಸೌಲಭ್ಯವನ್ನು ಕಲ್ಪಿಸುವಂತೆ, ಸ್ಮಶಾನಕ್ಕೆ ಜಮೀನು ನೀಡುವಂತೆ ಶಾಲೆಗೆ 2 ಕೊಠಡಿಗಳ ನಿರ್ಮಾಣ ಮಾಡಿಕೊಡುವಂತೆ ಗ್ರಾಮಸ್ಥರು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕರು, ಶೀಘ್ರದಲ್ಲಿ ಇವೆಲ್ಲವನ್ನು ಮಾಡಿಕೊಡುವಂತೆ ಸ್ಥಳದಲ್ಲಿಯೇ ಅಧಿಕಾರಿಗಳಿಗೆ ಸೂಚಿಸಿದರು. ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಗಿರೀಶ್, ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು, ತಾಲೂಕು ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ದೇಶದಲ್ಲಿ ಪ್ರಸ್ತುತ ವಾರ್ಷಿಕ 14.16 ಮಿಲಿಯನ್ ಮೆಟ್ರಿಕ್ ಟನ್ ಮೀನು ಉತ್ಪಾದನೆ ; ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ 5 ವರ್ಷದಲ್ಲಿ

21 ಮಿಲಿಯನ್ ಮೆಟ್ರಿಕ್ ಟನ್‌ಗೆ ಹೆಚ್ಚಿಸುವ ಗುರಿ

● ಮೀನುಗಾರಿಕೆ ತರಬೇತಿ ಕೇಂದ್ರದ ಉಪನಿರ್ದೇಶಕ ಮಹದೇವ ● ಜಿಲ್ಲೆಯ ಮೀನುಗಾರರ ಸಹಕಾರ ಸಂಘಗಳ ಪದಾಧಿಕಾರಿಗಳು, ಸಿಇಓಗಳಿಗೆ ತರಬೇತಿ ಕಾರ್ಯಕ್ರಮ

ಮೈಸೂರು,ಅ.15(ಪಿಎಂ)–ಪ್ರಸ್ತುತ ಭಾರತದಲ್ಲಿ ವಾರ್ಷಿಕ ಒಟ್ಟು 14.16 ಮಿಲಿಯನ್ ಮೆಟ್ರಿಕ್ ಟನ್ ಮೀನು ಉತ್ಪಾದನೆಯಾಗುತ್ತಿದ್ದು, ಇದನ್ನು ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆಯಡಿ 5 ವರ್ಷಗಳ ಅವಧಿಯಲ್ಲಿ 21 ಮಿಲಿಯನ್ ಮೆಟ್ರಿಕ್ ಟನ್‌ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಹೆಚ್‌ಡಿ ಕೋಟೆ ತಾಲೂಕು ಕಬಿನಿಯ ಮೀನುಗಾರಿಕೆ ತರಬೇತಿ ಕೇಂದ್ರದ ಉಪನಿರ್ದೇಶಕ ಮಹದೇವ ತಿಳಿಸಿದರು.

ಮೈಸೂರಿನ ಚಾಮರಾಜ ಜೋಡಿ ರಸ್ತೆಯ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಸಭಾಂಗಣದಲ್ಲಿ ರಾಜ್ಯ ಸಹಕಾರ ಮಹಾಮಂಡಳ, ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿ, ಜಿಲ್ಲಾ ಸಹಕಾರ ಒಕ್ಕೂಟ ಮತ್ತು ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಮೀನುಗಾರರ ಸಹಕಾರ ಸಂಘಗಳ ಪದಾಧಿಕಾರಿಗಳು ಹಾಗೂ ಸಿಇಓಗಳಿಗೆ ಶನಿವಾರ ಹಮ್ಮಿಕೊಂಡಿದ್ದ ಒಂದು ದಿನದ ವಿಶೇಷ ತರಬೇತಿ ಕಾರ್ಯಕ್ರಮದಲ್ಲಿ 'ಮೀನು ಕೃಷಿ ಮತ್ತು ಸರ್ಕಾರದ ಸೌಲಭ್ಯಗಳು' ಕುರಿತು ಮಾತನಾಡಿದರು.

14.16 ಮಿಲಿಯನ್ ಮೆಟ್ರಿಕ್ ಟನ್ ಮೀನು ಉತ್ಪಾದನೆ ಪೈಕಿ ನಮ್ಮ ಕರಾವಳಿ ಮತ್ತು ಒಳನಾಡು ಎರಡೂ ಸೇರಿದಂತೆ ರಾಜ್ಯದಲ್ಲಿ 1 ಮಿಲಿಯನ್ ಟನ್ ಉತ್ಪಾದನೆಯಾಗುತ್ತಿದೆ. 20,050 ಕೋಟಿ ರೂ. ಮೊತ್ತದ 'ಪ್ರಧಾನಮಂತ್ರಿ ಮತ್ಸ್ಯ ಸಂಪದ' ಯೋಜನೆಯನ್ನು ಕೇಂದ್ರ ಸರ್ಕಾರದ ಮೀನುಗಾರಿಕಾ ಇಲಾಖೆಯು 2021–25ರ ಸಾಲಿನಲ್ಲಿ ದೇಶಾದ್ಯಂತ ಅನುಷ್ಠಾನ ಮಾಡುತ್ತಿದೆ. ಈ ಯೋಜನೆಯಡಿ ಮೀನು ಉತ್ಪಾದನೆಯ ಪ್ರಮಾಣ ಹೆಚ್ಚಿಸುವ ಗುರಿ ತಲುವುದಕ್ಕೆ ಪೂರಕವಾಗಿ ನಾವು ಕಾರ್ಯಪ್ರವೃತ್ತರಾಗಬೇಕಿದೆ ಎಂದರು.

ಆರೋಗ್ಯ ದೃಷ್ಟಿಯಿಂದ ಮೀನು ಪೌಷ್ಟಿಕ ಆಹಾರ. ಮೀನು ಒಮೆಗಾ 3 ಮತ್ತು 6 ಅಂಶ ಒಳಗೊಂಡಿದೆ. ಇದು ಮನುಷ್ಯನಲ್ಲಿನ ಅನಗತ್ಯ ಕೊಬ್ಬಿನಾಂಶ ತೆಗೆಯುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಹಾಗಾಗಿ ಮೀನು ಸೇವನೆ ಹೆಚ್ಚಾಗುತ್ತಿದೆ. ಮೀನಿನ ಕೃಷಿ, ಸರಳ ಹಾಗೂ ಲಾಭದಾಯಕವಾಗಿದೆ. ಮೀನುಗಾರಿಕೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಹೆಚ್ಚಿ ಪ್ರಾಮುಖ್ಯ ಕೊಡುತ್ತಿವೆ ಎಂದು ತಿಳಿಸಿದರು.

ಕೆರೆ ನೀಡುವುದರ ಸಾಧಕ–ಬಾಧಕ ಚಿಂತನೆ: ಕಾಲಕ್ಕೆ ತಕ್ಕಂತೆ ತಂತ್ರಜ್ಞಾನ ಅಳವಡಿಸಿಕೊಳ್ಳದಿದ್ದರೆ ಮೀನುಗಾರಿಕೆ ಕ್ಷೇತ್ರ ಹಿನ್ನಡೆ ಅನುಭವಿಸಬೇಕಾಗುತ್ತದೆ. ರಿಯಾಯಿತಿ ದರದಲ್ಲಿ ಕೆರೆಗಳನ್ನು ಗುತ್ತಿಗೆ ಪಡೆಯುತ್ತಿರುವ ಮೀನುಗಾರಿಕೆ ಸಹಕಾರ ಸಂಘಗಳು, ಉತ್ತಮ ಕಾರ್ಯಚಟುವಟಿಕೆ ಮೂಲಕ ಮೀನು ಉತ್ಪಾದನೆಯ ಪ್ರಮಾಣ ಹೆಚ್ಚಿಸುವಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿಲ್ಲವೆಂಬ ಅಭಿಪ್ರಾಯ ಸರ್ಕಾರದಲ್ಲಿದೆ. ಹಾಗಾಗಿ ಸಹಕಾರ ಸಂಘಗಳಿಗೆ ರಿಯಾಯಿತಿ ದರದಲ್ಲಿ ಕೆರೆಗಳನ್ನು ನೀಡುವ ಸಾಧಕ–ಬಾಧಕಗಳ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಮೀನುಗಾರಿಕೆ ಸಹಕಾರ ಸಂಘಗಳು ಉತ್ತಮ ರೀತಿಯಲ್ಲಿ ತೊಡಗಿಸಿಕೊಳ್ಳಲು ಗಮನ ನೀಡಬೇಕಿದೆ ಎಂದರು.

ಮೀನುಗಾರಿಕೆ ಇಲಾಖೆಯಿಂದ ಈಗ ಕೆರೆಗಳನ್ನು ನೇರ ಗುತ್ತಿಗೆ ಮೂಲಕ ಮೀನುಗಾರರ ಸಹಕಾರ ಸಂಘಗಳಿಗೆ ನೀಡಲಾಗುತ್ತಿದೆ. ಉಳಿದಂತಹ ಕೆರೆಗಳನ್ನು ಇ–ಟೆಂಡರ್ ಮೂಲಕ ವಿಲೇವಾರಿ ಮಾಡಲಾಗುತ್ತಿದೆ. ತುಮಕೂರು ಜಿಲ್ಲೆಯ ಒಂದರಲ್ಲೇ ಇ–ಟೆಂಡರ್ ಮೂಲಕ ಕೆರೆಗಳನ್ನು ಗುತ್ತಿಗೆ ನೀಡಿದ್ದರಿಂದ 2 ಕೋಟಿ ರೂ. ಆದಾಯ ಇಲಾಖೆಗೆ ಲಭ್ಯವಾಗಿದೆ. ಒಳನಾಡು ವ್ಯಾಪ್ತಿಯ ಮೀನುಗಾರಿಕೆ ಸಹಕಾರ ಸಂಘಗಳಲ್ಲಿ ಸಂಘಟನೆ ಕಡಿಮೆ ಇದ್ದು, ಕರಾವಳಿ ವ್ಯಾಪ್ತಿಯಲ್ಲಿ ಸಂಘಗಳು ಸಂಘಟನಾತ್ಮಕವಾಗಿ ಮುನ್ನಡೆಯುತ್ತಿವೆ. ಅಲ್ಲಿ ಕೇವಲ ಒಂದು ಸಹಕಾರ ಸಂಘವೇ ವಾರ್ಷಿಕ 2ರಿಂದ 3 ಕೋಟಿ ರೂ. ವಹಿವಾಟು ನಡೆಸುತ್ತಿದೆ ಎಂದು ವಿವರಿಸಿದರು.

ರಾಜ್ಯ ಸಹಕಾರಿ ಮೀನುಗಾರಿಕೆ ಮಹಾಮಂಡಳಿಯ ಅಧ್ಯಕ್ಷ ಎಂ.ಎನ್. ಸಿದ್ದಲಿಂಗರಾಜು ಉದ್ಘಾಟಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ವ್ಯವಸ್ಥಾಪಕ ನಿರ್ದೇಶಕ ಅರಳಿ ಸೂರ್ಯಕಾಂತ್, ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಡಾ.ಹೆಚ್. ವಿ.ರಾಜೀವ್, ನಿರ್ದೇಶಕರಾದ ಡಾ.ಎಂ.ಬಿ. ಮಂಜೇಗೌಡ, ಸಿದ್ದೇಗೌಡ, ವೈ.ಭೈರಪ್ಪ, ಸಹಕಾರ ಸಂಘಗಳ ಉಪನಿಬಂಧಕ ಜಿ.ಆರ್. ವಿಜಯಕುಮಾರ್ ಮತ್ತಿತರರು ಹಾಜರಿದ್ದರು.



ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಸಭಾಂಗಣದಲ್ಲಿ ಮೀನುಗಾರರ ಸಹಕಾರ ಸಂಘಗಳ ಪದಾಧಿಕಾರಿಗಳು, ಸಿಇಓಗಳಿಗೆ ಶನಿವಾರ ಹಮ್ಮಿಕೊಂಡಿದ್ದ ತರಬೇತಿ ಕಾರ್ಯಕ್ರಮ ಉದ್ಘಾಟಿಸಲಾಯಿತು.

ಮೀನಿನ ಮರಿ ಕೊರತೆ

ರಾಜ್ಯಕ್ಕೆ ಪ್ರತಿನಿತ್ಯ ಹೊರರಾಜ್ಯದಿಂದ ಮೀನು ಆಮದು ಮಾಡಿಕೊಳ್ಳಲಾಗುತ್ತಿದೆ. ಉತ್ತಮ ಮೀನಿನ ಬೆಳೆ ಬೇಕೆಂದರೆ ಉತ್ತಮ ಮೀನಿನ ಮರಿ ಅಗತ್ಯವಿದೆ. ಆದರೆ ನಮ್ಮಲ್ಲಿ ಉತ್ತಮ ಗುಣಮಟ್ಟದ ಮೀನಿನ ಮರಿಗಳು ಸಿಗುತ್ತಿಲ್ಲ. ಪಶ್ಚಿಮ ಬಂಗಾಳ ಮತ್ತು ಆಂಧ್ರ ಪ್ರದೇಶದಿಂದ ರಾಜ್ಯಕ್ಕೆ ಮೀನಿನ ಮರಿಗಳ ಪೂರೈಕೆಯಾಗುತ್ತಿದೆ. ಹೀಗಾಗಿ ನಮ್ಮಲ್ಲಿಯೇ ಉತ್ತಮ ಗುಣಮಟ್ಟದ ಮೀನಿನ ಮರಿ ಉತ್ಪಾದನೆ ಸಾಧ್ಯ ಮಾಡುವತ್ತ ಹೆಜ್ಜೆ ಹಾಕಬೇಕಿದೆ ಎಂದು ಹೇಳಿದರು.

ನಕ್ಕರೆ ಅದೇ ಸ್ವರ್ಗ

ಪತ್ನಿ : ರೀ... ಹೋಗಿ ನನ್ನ ಮುಖ ಚೆನ್ನಾಗಿ ಕಾಣುವ ಒಳ್ಳೆಯ ಕನ್ನಡಿ ತನ್ನಿ ಎಂದರೆ ಬರಿಗೈಲಿ ಬಂದಿದ್ದೀರಲ್ಲಾ?

ಪತಿ : ಎಲ್ಲಾ ಅಂಗಡಿಯಲ್ಲಿ ಹುಡುಕಿದೆ. ಎಲ್ಲದರಲ್ಲೂ ನನ್ನ ಮುಖವೇ ಕಾಣುತ್ತಿತ್ತು. ನಿನ್ನ ಮುಖ ಕಾಣೋ ಕನ್ನಡಿ ಎಷ್ಟು ಹುಡುಕಿದರೂ ಸಿಗಲೇ ಇಲ್ಲ!

ಮೈಸೂರು ಮಿತ್ರ

ಭಾನುವಾರ, 16 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ನಿನ್ನ ಆಸೆ, ಇಚ್ಛೆಗಳನ್ನು ದಮನಗೊಳಿಸುವುದು ಪುಣ್ಯ. ನಿರಪರಾಧಿಗಳನ್ನು ಸತಾಯಿಸುವುದು ಮಹಾಪಾಪ. –ಭಗವಾನ್ ಮಹಾವೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮುಖ ನೋಡಿ ಮನಸ್ಸು ತಿಳಿದಂತೆ

ನಿಮ್ಮ ಪತ್ರಗಳು

ದುಸ್ಥಿತಿಯ ರಸ್ತೆಗೇ ಹೊಂದಿಕೊಂಡ ಜನತೆ



ಮಾನ್ಯರೆ,

ಕಳೆದ ಹಲವಾರು ವರುಷಗಳಿಂದಲೂ ಮೈಸೂರಿನ ವಿಜಯನಗರ ವಾಟರ್ ಟ್ಯಾಂಕ್‌ನಿಂದ ತ್ರಿನೇತ್ರ ವೃತ್ತದವರೆಗಿನ ರಸ್ತೆಯ ದುಸ್ಥಿತಿ ಮತ್ತು ಅಧೋಗತಿಯ ಬಗ್ಗೆ ಇಲ್ಲಿನ ಜನರು ಪುಂಖಾನುಪುಂಖವಾಗಿ ಪತ್ರಿಕೆಗಳಲ್ಲಿ ಬರೆದದ್ದೂ ಆಯಿತು, ಪಾಲಿಕೆ ಅದನ್ನು ನಿರ್ಲಕ್ಷಿಸಿದ್ದೂ ಆಯಿತಷ್ಟೆ. ಇದೂ ಸಾಲದು ಎನ್ನುವಂತೆ ಕೆಲ ದಿನಗಳ ಹಿಂದೆ ಇದೇ ರಸ್ತೆಯ ಮಧ್ಯಭಾಗವನ್ನು ನೇರವಾಗಿ, ಆಳವಾಗಿ ಸೀಳಿ, ಭಾರಿ ನೀರಿನ ಪೈಪುಗಳನ್ನು ಅಳವಡಿಸುವ ಕಾರ್ಯವೂ ನಡೆದು, ರಸ್ತೆ ಸಂಚಾರವನ್ನೂ ಬಂದ್ ಮಾಡಿಯಾಗಿತ್ತು. ಇಲ್ಲಿ ವಾಹನದಲ್ಲಿ ಸಂಚರಿಸಿದ ಜನತೆ ಅನುಭವಿಸದ ಕಷ್ಟಗಳಿಲ್ಲ. ಇದೀಗ ಪೈಪು ಅಳವಡಿಕೆಯ ನಂತರ ಈ ರಸ್ತೆ ಪುನಃ ಸಂಚಾರಕ್ಕೆ ತೆರೆದುಕೊಂಡಿದೆ. ಆದರೆ, ಈಗಾಗಲೇ ಇಲ್ಲಿ ವಾಹನಗಳಲ್ಲಿ ಸಂಚರಿಸಿ ಅಭ್ಯಾಸವಾಗಿ ಹೋಗಿ ಬೆನ್ನು ಸೊಂಟ ನೋವಿದ್ದ ಕೆಲವರಿಗೆ ಅದು ಸರಿಯಾಗಿ ಹೋಗಿದೆ. ಸರಿಯಾಗಿದ್ದವರಿಗೆ ಬೆನ್ನಿನ, ಸೊಂಟದ ಅನಾರೋಗ್ಯ ಕಾಡುತ್ತಿದೆ. ಜೊತೆಗೆ ಕೆಲವರ ಸುಸೂತ್ರ ಹೆರಿಗೆಯ ವಿಚಾರವೂ ಕೇಳಿ ಬಂದಿದೆ. ಅವೆಲ್ಲಕ್ಕೂ ಮಿಗಿಲಾಗಿ ಸ್ಥಳೀಯ ಶಾಸಕ, ಪಾಲಿಕೆ ಸದಸ್ಯ ಮತ್ತು ಪಾಲಿಕೆ ಅಧಿಕಾರಿಯವರ ದಾರ್ಷ್ಟ್ಯ ಮತ್ತು ಭಂಡತನದಿಂದ ಜನತೆ ಬೇಸತ್ತು ದುಸ್ಥಿತಿಯ ರಸ್ತೆಗೆ ಹೊಂದಿಕೊಂಡು ಬಿಟ್ಟಿದ್ದಾರೆ. ಇದೀಗ ರಸ್ತೆ ಮಳೆಯ ನಂತರ ತಾನೇ ಸರಿಯಾಗಿ ಹೋಗಿದೆ. ಜತೆಗೆ ಸಂಚಾರಿ ನಿಯಮ ಪಾಲಿಸಲನುವಾಗುವಂತೆ ಎರಡು ಭಾಗವಾಗಿಯೂ ಹೋಗಿದೆ. ಇಂತಹ ರಸ್ತೆಗಳಲ್ಲಿ ಸಂಚರಿಸುವ ಜನತೆಗೆ ಶಹಬ್ಬಾಸ್ ಎನ್ನೋಣವೋ ಅಥವಾ ಪಾಲಿಕೆಯವರ ಭಂಡತನಕ್ಕೆ ಛೀ ಎನ್ನಬೇಕೋ ತಿಳಿಯುತ್ತಿಲ್ಲ.

–ವಿಜಯ್ ಹೆಮ್ಮಿಗೆ, ಮೈಸೂರು

ಯಶಸ್ವಿನಿ ಯೋಜನೆ ಮರು ಜಾರಿ ಸ್ವಾಗತಾರ್ಹ

ಮಾನ್ಯರೆ,

ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಬಡ ಕುಟುಂಬಗಳಿಗೆ ಆರೋಗ್ಯಕ್ಕೆ ಸಂಬಂಧಿಸಿದಂತೆ ಉಚಿತ ಚಿಕಿತ್ಸೆಯನ್ನು ಪಡೆಯವ ಸಲುವಾಗಿ ಸಹಕಾರ ಇಲಾಖೆಯ ಮೂಲಕ ಆರಂಭಗೊಂಡಿದ್ದ ಯಶಸ್ವಿನಿ ಯೋಜನೆ ಹಲವು ಕಾರಣಗಳಿಂದ ಸ್ಥಗಿತಗೊಂಡಿತ್ತು.

ಪ್ರಸುತ್ತ ರಾಜ್ಯ ಸರ್ಕಾರ ಯಶಸ್ವಿನಿ ಯೋಜನೆಯನ್ನು ಕನ್ನಡ ರಾಜ್ಯೋತ್ಸವದ ದಿನವಾದ ನವೆಂಬರ್ 1 ರಂದು ಮತ್ತೊಮ್ಮೆ ಜಾರಿಗೊಳಿಸಲು ನಿರ್ಧರಿಸಿರುವುದು ಉತ್ತಮ ಬೆಳವಣಿಗೆಯಾಗಿದೆ. ಇದರಿಂದಾಗಿ ಲಕ್ಷಾಂತರ ಬಡ ಕುಟುಂಬಗಳಿಗೆ ಆರೋಗ್ಯ ಸಮಸ್ಯೆಗಳನ್ನು ಎದುರಿಸಲು ಆರ್ಥಿಕ ಸಹಾಯ ದೊರಕಿದಂತಾಗುತ್ತದೆ. ಯಶಸ್ವಿನಿ ಯೋಜನೆಯ ವ್ಯಾಪ್ತಿಯಲ್ಲಿ 1650 ಕಾಯಿಲೆಗಳಿಗೆ ಚಿಕಿತ್ಸೆ ದೊರೆಯುತ್ತದೆ ಮತ್ತು ಯಶಸ್ವಿನಿ ಯೋಜನೆಯ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳಲ್ಲಿ ಯಶಸ್ವಿನಿ ಕಾರ್ಡ್ ಹೊಂದಿದ ಪ್ರತಿ ಕುಟುಂಬಕ್ಕೆ 5 ಲಕ್ಷದವರೆಗಿನ ನಗದು ರಹಿತ ಚಿಕಿತ್ಸೆ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ಯಶಸ್ವಿನಿ ಯೋಜನೆ 2018ರಲ್ಲಿ ರದ್ದುಗೊಂಡಿತ್ತು ಮತ್ತು ಕೇಂದ್ರ ಸರ್ಕಾರದ "ಆಯುಷ್ಮಾನ್" ಯೋಜನೆಯೊಂದಿಗೆ ವಿಲೀನಗೊಳಿಸುವ ಬಗ್ಗೆ ಚಿಂತಿಸಲಾಗಿತ್ತು. ಆದರೆ ಪ್ರಸ್ತುತ ರಾಜ್ಯ ಸರ್ಕಾರ ಯಶಸ್ವಿನಿ ಯೋಜನೆಯನ್ನು ಜಾರಿಗೆ ತಂದಿದ್ದು, ಈ ಯೋಜನೆಗೆ 350 ಕೋಟಿ ಮೀಸಲಿಟ್ಟಿರುವುದು ಬಡ ಕುಟುಂಬಗಳಿಗೆ ಆಶಾದಾಯಕವಾಗಿದೆ.

ಯಶಸ್ವಿನಿ ಯೋಜನೆಯಿಂದಾಗಿ ರೈತರು, ಮೀನುಗಾರರು, ಸಹಕಾರ ಸಂಘಗಳ ಕುಟುಂಬಗಳಿಗೆ, ಬೀಡಿ ಉದ್ಯಮದಲ್ಲಿನ ಕುಟುಂಬಗಳಿಗೆ, ನೇಕಾರ ಕುಟುಂಬಗಳಿಗೆ ಮತ್ತು ಅಸಂಘಟಿತ ವಲಯದ ಕಾರ್ಮಿಕ ಕುಟುಂಬಗಳಿಗೆ ಆರೋಗ್ಯಕ್ಕೆ ತಗಲುವ ವೆಚ್ಚವನ್ನು ಭರಿಸಲಾಗುತ್ತದೆ.

ಮಧ್ಯಮ ವರ್ಗ ಮತ್ತು ವಿಶೇಷವಾಗಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಆರೋಗ್ಯಕ್ಕೆ ಹೆಚ್ಚಿನ ಹಣವನ್ನು ವ್ಯಯಮಾಡುತ್ತಿದ್ದು, ಒಮ್ಮೆ ಆಸ್ಪತ್ರೆಗಳಿಗೆ ಹೋದರೆ ಲಕ್ಷಾಂತರ ರೂಪಾಯಿ ವೆಚ್ಚವನ್ನು ಭರಿಸಬೇಕಾಗುತ್ತದೆ. ಇಂತಹ ಕುಟುಂಬಗಳಿಗೆ ಈ ಯೋಜನೆ ವರದಾನವಾಗಿ ಪರಿಣಮಿಸಲಿ ಎಂದೂ ಆಶಿಸುತ್ತಾ, ಈ ಯಶಸ್ವಿನಿ ಯೋಜನೆಯನ್ನು ಮರು ಜಾರಿಗೆ ತಂದ ರಾಜ್ಯ ಸರ್ಕಾರಕ್ಕೆ ರಾಜ್ಯದ ಜನತೆಯ ಪರವಾಗಿ ಅಭಿನಂದನೆಗಳು.

–ರಾಸುಮ ಭಟ್, ಚಿಕ್ಕಮಗಳೂರು.

ಶಿಕ್ಷಕರೇ ಭಕ್ಷಕರಾದರೆ ರಕ್ಷಿಸುವವರು ಯಾರು?

ಮಾನ್ಯರೆ,

ಭಾರತದ ನೆಲದಲ್ಲಿ ಗುರುವಿನ ಸ್ಥಾನ ಬಹು ಮುಖ್ಯವಾದುದು ಹಾಗೂ ಗುರುಬ್ರಹ್ಮ, ಗುರುವಿಷ್ಣು ಗುರುದೇವೋ ಮಹೇಶ್ವರ ಗುರು ಸಾಕ್ಷಾತ್ ಪರಬ್ರಹ್ಮ, ತಸ್ಮೈ ಶ್ರೀ ಗುರುವೇ ನಮಃ ಎಂದು ದೇವರ ಸ್ಥಾನದಲ್ಲಿ ಗುರುಗಳನ್ನು ಇಟ್ಟು ನೋಡುವುದು ಈ ನೆಲದ ಗುಣ.

ವಿದ್ಯಾರ್ಥಿಗಳ ಜೀವನದಲ್ಲಿ ಅವರ ಭವಿಷ್ಯ ರೂಪಿಸುವ ಕೆಲಸದಲ್ಲಿ ಗುರುಗಳ ಪಾತ್ರ ಬಹಳ ಪ್ರಮುಖವಾದುದು. ಇದರ ತದ್ವಿರುದ್ಧವಾಗಿ ಕೆಲ ಶಿಕ್ಷಕರು ಹೇಯ ಕೃತ್ಯವೆಸಗಿ ಶಿಕ್ಷಕರ ಸ್ಥಾನಕ್ಕೆ ಅಪಮಾನ ಮಾಡುತ್ತಿದ್ದಾರೆ.

ಮನೆ ಪಾಠದ ಶಿಕ್ಷಕ, ಮಳವಳ್ಳಿ ಪಟ್ಟಣದ ಖಾಸಗಿ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಹಾಲುಗಲ್ಲದ ಹತ್ತು ವರ್ಷದ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ವೆಸಗಿ, ಹತ್ಯೆ ಮಾಡಿರುವ ಹೇಯ ಕೃತ್ಯ ಮನುಷ್ಯತ್ವಕ್ಕೆ ಮಾರಕ. ಈ ನೀಚ ಕೃತ್ಯವೆಸಗಿದ ಪಾತಕಿಯನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕು.

ಹೆಣ್ಣನ್ನು ಪೂಜಿಸುವ ಗೌರವಿಸುವ ನೆಲದಲ್ಲಿ ವರದಕ್ಷಿಣೆಯ ಕಿರುಕುಳಗಳ ಹತ್ಯೆ, ವಿದ್ಯಾರ್ಥಿನಿಯರ ಮೇಲೆ ಅತ್ಯಾಚಾರದ ಹತ್ಯೆ, ಸಾಮೂಹಿಕ ಅತ್ಯಾಚಾರದ ಹತ್ಯೆಗಳು ಮಾನವ ಸಮುದಾಯಕ್ಕೆ ಕಳಂಕ ತರುವಂತದ್ದು. ಇಂತಹ ಘಟನಾವಳಿಗಳು ಮತ್ತೊಮ್ಮೆ ಮರುಕಳಿಸದಂತೆ ಮುನ್ನೆಚ್ಚರಿಕೆ ಕ್ರಮಗಳನ್ನು ಪೋಷಕರು ಹಾಗೂ ಸುವ್ಯವಸ್ಥೆ ಕಾಪಾಡುವವರು ತೆಗೆದುಕೊಳ್ಳಬೇಕು.

–[illegible]



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಓಂ ನಮಃ ಶಿವಾಯ

ॐ नमः शिवाय

ಹಿಂದೂ ಧರ್ಮದ ಅತ್ಯಂತ ಜನಪ್ರಿಯ ಮಂತ್ರಗಳ ಪೈಕಿ '**ಓಂ ನಮಃ ಶಿವಾಯ**' ಎಂಬುದೂ ಒಂದಾಗಿದೆ. ಇದರರ್ಥ, ಹಿಂದೂ ಧರ್ಮೀಯರ ಪರಮ ದೈವ ಮಹಾಶಿವನಿಗೆ ನಮಸ್ಕಾರ. ಶಿವ, ಹಿಂದೂ ಧರ್ಮದ ಪ್ರಾಥಮಿಕ ಮೂವರು ದೇವ ಪುರುಷರಲ್ಲಿ ಒಬ್ಬ. ಅಂದರೆ, ಬ್ರಹ್ಮ(ಸೃಷ್ಟಿಕರ್ತ), ವಿಷ್ಣು (ಸಂರಕ್ಷಕ), ಪರಮೇಶ್ವರ ಅರ್ಥಾತ್ ಶಿವ (ಲಯಕಾರಿ). ಇವರೇ ಹಿಂದೂ ತ್ರಿಮೂರ್ತಿ. ಪ್ರಚಲಿತ ನಂಬಿಕೆಯೆಂದರೆ ಯಾವೊಬ್ಬನು ಪ್ರತಿದಿನ ಈ ಮಂತ್ರವನ್ನು 108 ಬಾರಿ ಪಠಿಸುತ್ತಾನೋ ಆ ಮನುಷ್ಯನ ದೇಹ ಶುದ್ಧಿಯಾಗುತ್ತದೆ. ಅಂತಹವರಿಗೆ ಪರಶಿವನ ಕೃಪಾ ಕಟಾಕ್ಷ ಇರುತ್ತದೆ. ಸರಿ, ಅದು ಹಾಗಿರಲಿ.

ಕಳೆದ ಮಂಗಳವಾರ (11.10.2022) ನಮ್ಮ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಪರಶಿವನಿಗೆ ಸಮರ್ಪಿತವಾದ ಮಧ್ಯ ಪ್ರದೇಶದ ಉಜ್ಜಯಿನಿಯ ಮಹಾಕಾಳೇಶ್ವರ ಜ್ಯೋತಿರ್ಲಿಂಗದ ಮಹಾಕಾಲ ಕಾರಿಡಾರ್‌ನ ಮೊದಲ ಹಂತದ ಯೋಜನೆಯನ್ನು ಲೋಕಾರ್ಪಣೆ ಮಾಡಿದರು. ನಾನು ಈ ಸಮಾರಂಭವನ್ನು ಟಿವಿಯಲ್ಲಿ ವೀಕ್ಷಿಸಿದೆ. ಇದು ಪರಮ ಪವಿತ್ರವಾದ 12 ಜ್ಯೋತಿರ್ಲಿಂಗಗಳಲ್ಲಿ ಒಂದಾಗಿದೆ. ಕೈಲಾಸ ಪರ್ವತ ಕೂಡ ಪರಶಿವನ ಅತ್ಯಂತ ಪವಿತ್ರ ಕ್ಷೇತ್ರವಾಗಿದೆ ಎಂಬುದು ನನ್ನ ಊಹೆ. ಸದರಿ ದೇವಸ್ಥಾನವು ಪವಿತ್ರ ಶಿಪ್ರಾ ನದಿಯ ದಡದಲ್ಲಿ ನೆಲೆಗೊಂಡಿದೆ.

ಬಹುತೇಕ ಹಿಂದೂ ದೇವಸ್ಥಾನಗಳು ಬೆಟ್ಟದ ಮೇಲೆ ಅಥವಾ ನದಿಗಳ ದಡದಲ್ಲಿ ನೆಲೆಗೊಂಡಿವೆ. ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಮಾತ್ರವೇ ಶಿವನ ದೇವಸ್ಥಾನಗಳನ್ನು ಎಲ್ಲೆಂದರಲ್ಲಿ ಕಾಣಬಹುದು. ಪಟ್ಟಣ ಪ್ರದೇಶಗಳ ಶಿವಾಲಯಗಳು ನಗರದ ಜನರನ್ನು ನಗರ ನಕ್ಸಲೀಯರಿಂದ (Urban Naxals) ಜನರನ್ನು ರಕ್ಷಿಸುತ್ತವೆ ಎನ್ನಬಹುದೆ!

2014ರಲ್ಲಿ ನರೇಂದ್ರ ಮೋದಿಯವರು ಪ್ರಧಾನಮಂತ್ರಿಗಳಾದ ಬಳಿಕ ಹಾಗೂ 2024ರಲ್ಲಿ ನಡೆಯುವ ಲೋಕಸಭಾ ಚುನಾವಣೆಯವರೆಗೂ ನಾನಾ ಕಾರಣಗಳಿಂದ ಧ್ವಂಸಗೊಂಡಿರುವ ಇಲ್ಲವೆ ಭಗ್ನಾವಸ್ಥೆಯಲ್ಲಿರುವ (ವಿರೂಪ) ಹಿಂದೂ ದೇವಾಲಯಗಳು ಈ ನಮ್ಮ ಪ್ರಧಾನ ಮಂತ್ರಿಗಳ ಅಮೃತ ಹಸ್ತದಿಂದಲೇ ಶುದ್ಧೀಕರಣ ಹಾಗೂ ಪವಿತ್ರಗೊಂಡು, ಫಿನಿಕ್ಸ್‌ನಂತೆ ಮತ್ತೆ ಪ್ರವರ್ಧಿಸಬಹುದು. ಈಗ ಇವೆಲ್ಲವೂ ಉತ್ತರ ಭಾರತದಲ್ಲಿಯೇ ನೆರವೇರುತ್ತಿದೆ. ಏಕೆಂದರೆ, ಉತ್ತರ ಭಾರತದಲ್ಲಿ ಆಗಿಂದಾಗ್ಗೆ ವಿದೇಶಿಯರ ಆಕ್ರಮಣದಿಂದಾಗಿ ಹಿಂದೂ ದೇವಸ್ಥಾನಗಳ ಧ್ವಂಸ ನಡೆದಿತ್ತು. ಕರ್ನಾಟಕದಲ್ಲಿ ವಿಜಯನಗರ ಹಾಗೂ ಇತರ ಕೆಲವು ದೇವಸ್ಥಾನಗಳು ಮಾತ್ರ ಧ್ವಂಸ ಹಾಗೂ ಭಗ್ನಗೊಂಡವು. ದಕ್ಷಿಣ ಭಾಗದ ಬಹುತೇಕ ದೇವಸ್ಥಾನಗಳು ಮತ್ತು ಭವ್ಯ ಮಂದಿರಗಳು ಗಟ್ಟಿಮುಟ್ಟಾದ ಕಲ್ಲುಗಳಿಂದ ಕಟ್ಟಲ್ಪಟ್ಟಿದ್ದು, ಇವು ಹಲವಾರು ಶತಮಾನಗಳ ಕಾಲದಿಂದಲೂ ಭದ್ರವಾಗಿ ನೆಲೆಯೂರಿವೆ.

ನೀವು ರಾಮೇಶ್ವರಂ ದೇವಸ್ಥಾನ, ತಂಜಾವೂರಿನ ಬೃಹದೀಶ್ವರ ದೇವಸ್ಥಾನಗಳನ್ನು ನೋಡಿ. ಹಾಗೆಯೇ ತಮಿಳುನಾಡಿನ ಮಧುರೆಯ ಮೀನಾಕ್ಷಿ ದೇವಸ್ಥಾನ, ತಿರುಪತಿ ಬಳಿಯ ಕಾಳಹಸ್ತಿಯ ಶ್ರೀ ಕಾಲ ಭೈರವೇಶ್ವರ ದೇವಸ್ಥಾನ, ಅಷ್ಟೇ ಏಕೆ ತಿರುಪತಿ ವೆಂಕಟೇಶ್ವರ ದೇವಸ್ಥಾನ, ತಿರುವನಂತಪುರದ ಶ್ರೀ ಪದ್ಮನಾಭ ಸ್ವಾಮಿ ದೇವಸ್ಥಾನ, ಹಾಗೂ ಇನ್ನೂ ಅನೇಕ ದೇವಸ್ಥಾನಗಳು ಭದ್ರವಾಗಿ ನೆಲೆಯೂರಿವೆ. ಸಮಸ್ಯೆ ಇರುವುದು ಉತ್ತರ ಭಾರತದಲ್ಲಿ.

ಇದೇ ವೇಳೆ, ಉತ್ತರ ಭಾರತದ ಬಹಳಷ್ಟು ದೇವಾಲಯಗಳು ಹಾನಿಗೀಡಾಗಿವೆ. ಈಗ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಅಶ್ವಮೇಧ ಯಾಗಕ್ಕೆ ಸನ್ನದ್ಧರಾಗಿದ್ದಾರೆ. ಹಿಂದಿನ ಕಾಲದಲ್ಲಿ ರಾಜ ಮಹಾರಾಜರು ತಮ್ಮ ಸಾರ್ವಭೌಮತ್ವವನ್ನು ರುಜುವಾತುಪಡಿಸಲು "ಅಶ್ವಮೇಧ ಯಾಗ" ಎಂಬ ಧಾರ್ಮಿಕ ಯಾನ ಮಾಡುತ್ತಿದ್ದರು. ಪ್ರಸ್ತುತ ಸಂದರ್ಭದಲ್ಲಿ, ಲೂಟಿಕೋರರು, ಆಕ್ರಮಣಕಾರರಿಂದ ಹಾನಿಗೀಡಾಗಿರುವ ಹಿಂದೂ ಪಾರಂಪರಿಕತೆಯನ್ನು ಪುನಃ ಪ್ರತಿಷ್ಠಾಪಿಸುವ ಕಾರ್ಯಕ್ಕೆ ನಮ್ಮ ಮಾನ್ಯ ಪ್ರಧಾನ ಮಂತ್ರಿಗಳು ಕೈ ಹಾಕಿದ್ದಾರೆ.

ಆದರೆ, ಕೆಲವರು ಪ್ರಧಾನಿ ನರೇಂದ್ರ ಮೋದಿಯವರು ಚರಿತ್ರೆಯ ಕರಾಳ ಪುಟಗಳನ್ನು ಪುನಃ ತೆರೆಯುತ್ತಿದ್ದಾರೆ. ಇದು 21ನೇ ಶತಮಾನ ಹಾಗೂ ದೇಶದ ಮುಂದಿನ ಭವಿಷ್ಯಕ್ಕೆ ಒಳ್ಳೆಯದಲ್ಲ ಎಂದು ಹೇಳುತ್ತಾರೆ. ಆದಾಗ್ಯೂ ಹಿಂದೂ ದೇವಸ್ಥಾನಗಳ ಭೌತಿಕ ನಿರ್ಮಾಣಗಳ ಮೇಲಿನ ದಾಳಿಗಳಿಗಿಂತ ಮಿಗಿಲಾಗಿ ಹಿಂದೂ ಜನರ ಆತ್ಮಗಳ ಮೇಲೆ, ಭಾವನೆಗಳ ಮೇಲೆ ಹೆಚ್ಚಿನ ಗಾಯ ಉಂಟಾಗಿರುವುದನ್ನು ನಾವು ನೆನಪಿಸಿಕೊಳ್ಳಬೇಕು. ಆದ್ದರಿಂದ, ನರೇಂದ್ರ ಮೋದಿಯವರು ಭಾರತ ದೇಶದ ಹಿಂದೂ ಜನರ '**ನವೋದಯ ಮನುಷ್ಯ**' (renaissance man) ಎಂದು ಹೇಳಬಹುದು. ದೇಹಕ್ಕೆ ಭೌತಿಕವಾಗಿ ಉಂಟಾದ ಯಾವುದೇ ಗಾಯ ಗುಣವಾಗಬಹುದು. ಆದರೆ, ಭೌತಿಕ ಗಾಯದ ಗುರುತು ಮಾಸುವವರೆಗೂ, ಆತ್ಮಕ್ಕೆ ಉಂಟಾದ ಗಾಯ ಮಾಸಲಾರದು. ಈ **ಗಾಯದ ಗುರುತು** ಹಳೆಯ ನೋವನ್ನು, ಅವಮಾನವನ್ನು ನೆನಪಿಗೆ ತರುತ್ತಲೇ ಇರುತ್ತದೆ.

1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿದ ನಂತರ, ನಾನಾ ರಾಜಕೀಯ ಪಕ್ಷಗಳಿಗೆ ಸೇರಿದ, ವಿವಿಧ ರಾಜಕೀಯ ಸಿದ್ಧಾಂತಕ್ಕೆ ಬದ್ಧರಾದ 14 ಜನ ಪ್ರಧಾನ ಮಂತ್ರಿಗಳನ್ನು ನಾವು ನೋಡಿದ್ದೇವೆ. ಆದರೆ, ಅಟಲ್ ಬಿಹಾರಿ ವಾಜಪೇಯಿ ಸೇರಿದಂತೆ ಯಾವೊಬ್ಬ ಪ್ರಧಾನ ಮಂತ್ರಿ ಕೂಡ ಊನವಾಗಿದ್ದ ಹಿಂದೂ ನಾಗರಿಕತೆ ನೋವನ್ನು ಶಮನಗೊಳಿಸುವ ಕಾರ್ಯ ಮಾಡಲಿಲ್ಲ. ವಾಜಪೇಯಿ ಸಮ್ಮಿಶ್ರ ಸರ್ಕಾರದ ಇತಿಮಿತಿ ನೆಪದಲ್ಲೇ ಆಡಳಿತ ನಡೆಸಿದರು. ಹಾಗಾಗಿ, ಈ ಹಿಂದೆ ನಾವು ಹಿಂದೂಗಳೇ ಆದ ಜಾತ್ಯಾತೀತ ಪ್ರಧಾನಮಂತ್ರಿಗಳನ್ನು ಹೊಂದಿದ್ದೆವು. ಆದರೆ, ನರೇಂದ್ರ ಮೋದಿ ಓರ್ವ ಜಾತ್ಯಾತೀತವಾದಿ ಹಿಂದೂ ಪ್ರಧಾನಮಂತ್ರಿಯಾಗಿ, ಚರಿತ್ರೆಯ ತಪ್ಪುಗಳನ್ನು ತಿದ್ದುತ್ತಿರುವುದನ್ನು ನೋಡಬಹುದು. **ಏಷ್ಟೇ ಆದರೂ ನೋವನ್ನು ಅನುಭವಿಸಿದವರು ಹಿಂದೂಗಳೇ, ಬೇರೆ ಧರ್ಮದವರಲ್ಲ.** ಈ ಸತ್ಯದ ಹೊರತಾಗಿಯೂ, ಸಂವಿಧಾನದ ಅಡಿಯಲ್ಲಿ ಲಭ್ಯವಿರುವ ಜಾತ್ಯಾತೀತತೆ ಎಂಬ ರಕ್ಷಾ ಕವಚದ ನೆರಳಿನಲ್ಲಿ, ಹಿಂದೂಗಳು ತಮ್ಮ ಭಾವನೆಗಳಿಗೆ, ಆತ್ಮಗಳಿಗೆ ಉಂಟಾದ ನೋವಿಗೆ ಪರಿಹಾರ ಪಡೆಯಲಾಗಲಿಲ್ಲ. ಆದರೆ, ಈಗ ಸ್ಪಷ್ಟವಾಗಿ, **ನರೇಂದ್ರ ಮೋದಿಯವರು, ಯಾರನ್ನೂ ಕೈಬಿಡದೆ ಎಲ್ಲರನ್ನೂ ಒಳಗೊಂಡಿರುವಂತಹ "ಸಬ್ ಕಾ ಸಾಥ್ ಸಬ್ ಕಾ ವಿಕಾಸ್, ಸಬ್ ಕಾ ವಿಶ್ವಾಸ್" ಧ್ಯೇಯದೊಂದಿಗೆ ತಮ್ಮ ಮಹತ್ತರವಾದ ನಾನಾ ಯೋಜನೆಗಳ ಜೊತೆಗೆ ಹಿಂದೂ ಜನಾಂಗದ ಇಂತಹ ಸಮಸ್ಯೆಯನ್ನು ಸಹ ಬಗೆಹರಿಸಲು ಕಾರ್ಯಪ್ರವೃತ್ತರಾಗಿದ್ದಾರೆ.**

ಅದು ಹಾಗಿರಲಿ. ಉಜ್ಜಯಿನಿಯ (ಪುರಾತನ ಹೆಸರು ಅವಂತಿ) ಶಕ್ತಿ ಪೀಠದಲ್ಲಿ ಪುನಶ್ಚೇತನಗೊಂಡಿದ್ದು ಬರೀ ದೇವಾಲಯವಲ್ಲ, ಅದರ ಜೊತೆಗೆ ಕಲಿಕೆ ಮತ್ತು ಸಂಸ್ಕೃತಿಯ ಸ್ಥಳ. ಉಜ್ಜಯಿನಿಯು ಗುಪ್ತ ಸಾಮ್ರಾಜ್ಯದ (ಕ್ರಿ.ಶ. 4ನೇ ಶತಮಾನದಿಂದ ಕ್ರಿ.ಶ. 6ನೇ ಶತಮಾನದವರೆಗೆ) ರಾಜಧಾನಿಯಾಗಿತ್ತು.

ಟಿವಿಯಲ್ಲಿ ನೋಡಿ ತಿಳಿಯುವ ತನಕವೂ, ನನಗೆ ಶ್ರೀ ಕೃಷ್ಣ ಪರಮಾತ್ಮ ಅವಂತಿ ಪೀಠದಲ್ಲಿ ತನ್ನ ವಿದ್ಯಾರ್ಜನೆ ಮಾಡಿದ್ದ ಎಂಬ ವಿಷಯ ತಿಳಿದಿರಲಿಲ್ಲ. ಶ್ರೀಕೃಷ್ಣ ವಿದ್ಯಾರ್ಜನೆ ಮಾಡುವಾಗ ತನ್ನ ಬಡ ಮಿತ್ರ ಕುಚೇಲನನ್ನು ಭೇಟಿಯಾಗಿದ್ದು ಇಲ್ಲಿಯೇ. ಮುಂದೆ ಶ್ರೀಕೃಷ್ಣ ಬಡವನಾಗಿದ್ದ ತನ್ನ ಹಳೇ ಮಿತ್ರ ಕುಚೇಲನನ್ನು ಭೇಟಿಯಾದಾಗ ತನ್ನ ಗೆಳೆಯ ಅವಲಕ್ಕಿಯ ಹೊರತಾಗಿ ಶ್ರೀಕೃಷ್ಣನಿಗೆ ಬೇರೆ ಏನನ್ನೂ ನೀಡಲು ಸಾಧ್ಯವಾಗಿರಲಿಲ್ಲ.

ಟಿ.ವಿ. ಸುದ್ದಿ ವಾಹಿನಿಯ ಚರ್ಚಾ ಗೋಷ್ಠಿಯಲ್ಲಿ ಮೋದಿಯವರ ಈ ತರಹದ ಯೋಜನೆಯಿಂದಾಗಿ ತೆರಿಗೆದಾರರ ಹಣ ಪೋಲಾಗುವುದಿಲ್ಲವೇ ಎಂದು ಪ್ರಶ್ನಿಸಿದಾಗ ಬಂದ ಉತ್ತರವು ನಕಾರಾತ್ಮಕವಾಗಿತ್ತು. ಆದರೆ ಅದಕ್ಕೆ ಸಮರ್ಥನೆಯನ್ನು ನೀಡಲಾಯಿತು. ಹಿಂದೂ ದೇವಸ್ಥಾನಗಳನ್ನು ಸರ್ಕಾರವು ಕಾನೂನಾತ್ಮಕವಾಗಿ ಸರ್ಕಾರದ ವಶಕ್ಕೆ ತೆಗೆದುಕೊಂಡಿದೆ. ಇಂತಹ ದೇವಸ್ಥಾನಗಳಲ್ಲಿ ಸಲ್ಲಿಸುವ ಎಲ್ಲಾ ಹರಕೆಗಳು ಹಾಗೂ ದೇಣಿಗೆಗಳು ಸರ್ಕಾರದ ಬೊಕ್ಕಸಕ್ಕೆ ಹೋಗುತ್ತವೆ. ಹೀಗೆ ಸಂಗ್ರಹವಾದ ಲಕ್ಷ, ಕೋಟಿ ಭಕ್ತಾದಿಗಳ ಹಣದ ಪೈಕಿ ಕೇವಲ ಚಿಕ್ಕ ಮೊತ್ತವು ದೇವಸ್ಥಾನಗಳ ಸುಧಾರಣೆ–ನಿರ್ವಹಣೆ ಯೋಜನೆಗಳಿಗೆ ವಿನಿಯೋಗಿಸಲಾಗುತ್ತದೆ.


ಹಾಗಾದರೆ ಇದೊಂದು ವಿರೋಧಾಭಾಸ. ಜಾತ್ಯಾತೀತತೆಯ ಮೌಲ್ಯವಿಟ್ಟಿರುವ ಸಂವಿಧಾನದಡಿ ಅದೇಕೆ ಹಿಂದೂ ಧರ್ಮದವರಿಗೆ ದೇವಸ್ಥಾನದ ವಿಚಾರದಲ್ಲಿ ಪಕ್ಷಪಾತ?

ಯಾವ ವಿಚಾರದ ಗ್ರಹಿಕೆಯೇ ಆಗಲಿ, ಹಿಂದೂಗಳು ಅಥವಾ ಭಾರತೀಯರು ತಮ್ಮ ವಿನಾಶಕಾರಿ ಜಾತಿ, ಭೇದಭಾವ ಪದ್ಧತಿಯ ವ್ಯತ್ಯಾಸ ತೊರೆದು ಹಾಗೂ ಜಾತಿ ವಿಭಜಕ ಅಡೆತಡೆಗಳಾದ ಭಾಷೆ, ಸಂಸ್ಕೃತಿ ಇತ್ಯಾದಿಗಳನ್ನು ಮೀರಿ ಈ ಪುರಾತನವಾದ ತಮ್ಮ ಸಂಸ್ಕೃತಿಗೆ ಜೋಡಣೆಯಾಗುತ್ತಿರುವುದನ್ನು ನೋಡುತ್ತಿದ್ದೇವೆ. ಇದು ಎಲ್ಲಾ ಭಾರತೀಯರನ್ನು ಒಗ್ಗಟ್ಟಿನಿಂದ ಬಾಳಲು ಅವಕಾಶ ಕಲ್ಪಿಸಬಹುದು.

ಓಂ ಶಾಂತಿ... ಶಾಂತಿ... ಶಾಂತಿ...

ಓಂ ನಮಃ ಶಿವಾಯ

email:
voice@starofmysore.com



"ಕೆಲವರು ಪ್ರಧಾನಿ ನರೇಂದ್ರ ಮೋದಿಯವರು ಚರಿತ್ರೆಯ ಕರಾಳ ಪುಟಗಳನ್ನು ಪುನಃ ತೆರೆಯುತ್ತಿದ್ದಾರೆ. ಇದು 21ನೇ ಶತಮಾನ ಹಾಗೂ ದೇಶದ ಮುಂದಿನ ಭವಿಷ್ಯಕ್ಕೆ ಒಳ್ಳೆಯದಲ್ಲ ಎಂದು ಹೇಳುತ್ತಾರೆ. ಆದಾಗ್ಯೂ ಹಿಂದೂ ದೇವಸ್ಥಾನಗಳ ಭೌತಿಕ ನಿರ್ಮಾಣಗಳ ಮೇಲಿನ ದಾಳಿಗಳಿಗಿಂತ ಮಿಗಿಲಾಗಿ ಹಿಂದೂ ಜನರ ಭಾವನೆಗಳ, ಆತ್ಮಗಳ ಮೇಲೆ ಹೆಚ್ಚಿನ ಗಾಯ ಉಂಟಾಗಿರುವುದನ್ನು ನಾವು ನೆನಪಿಸಿಕೊಳ್ಳಬೇಕು. ಆದ್ದರಿಂದ, ನರೇಂದ್ರ ಮೋದಿಯವರು ಭಾರತ ದೇಶದ ಹಿಂದೂ ಜನರ 'ನವೋದಯ ಮನುಷ್ಯ' (renaissance man) ಎಂದು ಹೇಳಬಹುದು."

ಮೈಸೂರಲ್ಲಿ 'ಗ್ರೇಟ್ ಬಾಂಬೆ ಸರ್ಕಸ್' ಯಶಸ್ವಿ ಪ್ರದರ್ಶನ

ನಾಳೆಯಿಂದ ಶಾಲಾ ಮಕ್ಕಳಿಗೆ ರಿಯಾಯಿತಿ ದರದಲ್ಲಿ ಪ್ರವೇಶ

ಮೈಸೂರು, ಅ.15(ಆರ್‌ಕೆಬಿ)– ಮೈಸೂರು ದಸರಾ ಹಿನ್ನೆಲೆಯಲ್ಲಿ ಮೈಸೂರಿನಲ್ಲಿ ಪ್ರದರ್ಶಿಸಲಾಗುತ್ತಿರುವ ಗ್ರೇಟ್ ಬಾಂಬೆ ಸರ್ಕಸ್ ಯಶಸ್ವಿಯಾಗಿ ನಡೆಯುತ್ತಿದ್ದು, ಪ್ರೇಕ್ಷಕರಿಂದ ಉತ್ತಮ ಪ್ರಶಂಸೆ ದೊರೆತಿದೆ. ಹೀಗಾಗಿ ಶಾಲಾ ಮಕ್ಕಳಿಗೂ ರಿಯಾಯಿತಿ ದರದಲ್ಲಿ ಪ್ರವೇಶ ನೀಡಲು ತೀರ್ಮಾನಿಸಿರುವುದಾಗಿ ಮಾಲೀಕ ಕೆ.ಎಂ.ಸಂಜೀವ್, ಪ್ರಚಾರಕ ಎ.ಕೆ.ಪ್ರೇಮ್‌ನಾಥ್ ತಿಳಿಸಿದ್ದಾರೆ.

ಶನಿವಾರ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಮೈಸೂರಿನ ನಜರ್‌ಬಾದ್‌ನಲ್ಲಿರುವ ಮೃಗಾಲಯದ ಹಿಂಭಾಗದ ಮೈದಾನದಲ್ಲಿ ಹಾಕಲಾಗಿರುವ ಬೃಹತ್ ಶಾಮಿಯಾನದಲ್ಲಿ ಸರ್ಕಸ್ ಸೆ.24ರಿಂದ ಆರಂಭಿಸಲಾಗಿತ್ತು. ಆರಂಭದಿಂದಲೂ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ. 200 ವಿಐಪಿ ಆಸನಗಳು ಸೇರಿದಂತೆ ಒಟ್ಟು 2 ಸಾವಿರ ಆಸನಗಳಿದ್ದು, ಪ್ರತಿದಿನ ಮೂರು ಹೌಸ್‌ಫುಲ್ ಪ್ರದರ್ಶನ ಕಾಣುತ್ತಿದೆ ಎಂದು ಹೇಳಿದರು.

102 ವರ್ಷಗಳಷ್ಟು ಹಳೆಯದಾದ ನಮ್ಮ ಸರ್ಕಸ್ ಕಂಪನಿಯಲ್ಲಿ ತಲಾ 12 ಪಟ್ಟಗಳು, ಶ್ವಾನಗಳೊಂದಿಗೆ ಪುರುಷ, ಮಹಿಳೆಯರು ಸೇರಿ 60ಕ್ಕೂ ಹೆಚ್ಚು ಕಲಾವಿದರು ಪ್ರೇಕ್ಷಕರಿಗೆ ಉತ್ತಮ ಮನರಂಜನೆ ನೀಡುವಲ್ಲಿ ಯಶಸ್ವಿಯಾಗಿವೆ. ನಿಗದಿಯಂತೆ ನ.7ರವರೆಗೂ ಪ್ರದರ್ಶನ ಇರುತ್ತದೆ ಎಂದರು.

ಶಾಲಾ ಮಕ್ಕಳ ಗುಂಪು ಪ್ರವೇಶಕ್ಕೆ ರಿಯಾಯಿತಿ: ಶಾಲೆಗಳಿಗೆ ಅ.17ರಿಂದ ಶಾಲಾ ವಿದ್ಯಾರ್ಥಿಗಳ ಗುಂಪು ಪ್ರವೇಶಕ್ಕೆ ರಿಯಾಯಿತಿ ನೀಡಲು ನಿರ್ಧರಿಸಿದ್ದು ಕನಿಷ್ಠ ಮೂವರು ಶಿಕ್ಷಕರು ಹಾಗೂ 100 ವಿದ್ಯಾರ್ಥಿಗಳ ಪ್ರತಿ ಗುಂಪು ಬುಕಿಂಗ್‌ಗೆ 100 ವಿದ್ಯಾರ್ಥಿ ನೀಡಲಾಗುವುದು. 400 ರೂ. ಟಿಕೆಟ್‌ಗೆ ರೂ.200, 300ರ ಟಿಕೆಟ್‌ಗೆ ರೂ.150, 200ರ ಟಿಕೆಟ್‌ಗೆ ರೂ.100 ಹಾಗೂ 100ರ ಟಿಕೆಟ್‌ಗೆ ರೂ.70ರಂತೆ ರಿಯಾಯಿತಿ ನಿಗದಿಪಡಿಸಲಾಗಿದೆ. ಈ ಸಂಬಂಧ ಶಿಕ್ಷಣ ಇಲಾಖೆ ಮುಖ್ಯಸ್ಥರಿಗೆ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು.




Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ನಂ ಶ್ರೀಕಂಠ ಕುಮಾರ್
ಮೊ: 9481067333

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ
16-10-2022

ಅ.17 ರಂದು ತಲಕಾವೇರಿಯಲ್ಲಿ ಕಾವೇರಿ ತೀರ್ಥೋದ್ಭವ
ತನ್ನಿಮಿತ್ತ ಈ ಲೇಖನ




ನಾಡಿನ ದೇವನದಿ ಕಾವೇರಿ

ಶ್ರೀ ಸ್ಕಾಂದ ಪುರಾಣದ ಪ್ರಕಾರ ಮತ್ಸ್ಯದೇಶವೆಂದು ಕರೆಯಲ್ಪಡುತ್ತಿದ್ದ ಕೊಡಗು ಭೂಭಾಗವನ್ನು ರಾಜ ಚಂದ್ರವರ್ಮನು ಆಳುತ್ತಿದ್ದ. ಸಹ್ಯಾದ್ರಿ ಪರ್ವತ ಶ್ರೇಣಿಯ ನಾಲ್ಕೂ ದಿಕ್ಕುಗಳಲ್ಲಿ ಬ್ರಹ್ಮಗಿರಿ, ಗಜರಾಜಗಿರಿ, ವಾಯು ಗಿರಿ ಮತ್ತು ಅಗ್ನಿಗಿರಿ ಎಂಬ ಗಿರಿಗಳು ಸುತ್ತುವರೆದು ರಮ್ಯತಾಣವಾಗಿದೆ. ಅದರಲ್ಲಿ ಪ್ರಮುಖಗಿರಿಯಾದ ಬ್ರಹ್ಮಗಿರಿ ಯಲ್ಲಿ ಕವೇರನೆಂಬ ಮುನಿಯು ಬಹಳ ವರ್ಷಗಳ ಕಾಲ ತಪೋನಿರತನಾಗಿದ್ದನೆಂಬ ಐತಿಹ್ಯ ಇದೆ. ಪೂರ್ವಕಾಲ ದಲ್ಲಿ ವಿಂದ್ಯ ಮೇರು ಪರ್ವತಗಳಿಗೆ ಕಲಹ ಉಂಟಾಗಲು ವಿಂದ್ಯವು ಭೂಮ್ಯಾಕಾಶಗಳ ಅಂತರವೆಲ್ಲವನ್ನೂ ಆವರಿ ಸಿತು. ಆಗ ಸಮಸ್ತ ಪ್ರಾಣಿಗಳಿಗೂ ಉಸಿರಾಡಲು ಸಾಧ್ಯ ವಾಗದಿರಲು ಆತಂಕಕ್ಕೆ ಒಳಗಾದ ದೇವತೆಗಳು ಕೈಲಾಸಕ್ಕೆ ಹೋಗಿ ಪರಮೇಶ್ವರನಲ್ಲಿ ಆ ಸಮಾಚಾರವನ್ನು ಬಿನ್ನವಿಸಿ ಕೊಂಡರು. ಆಗ ಪರಮೇಶ್ವರನು ಸಪ್ತರ್ಷಿಗಳನ್ನು ಕಳುಹಿಸಿ ಕೊಟ್ಟು ಗಗನ ಮಾರ್ಗವನ್ನು ಅಡ್ಡಗಟ್ಟಿದ ವಿಂದ್ಯ ಪರ್ವತ ಶ್ರೇಣಿಯನ್ನು ಅಡಗಿಸುವಂತೆ ಅಗಸ್ತ್ಯ ಮಹರ್ಷಿಗೆ ಅಪ್ಪಣೆ ಮಾಡಿದನು. ಆಗ ಬ್ರಹ್ಮರ್ಷಿ ಅಗಸ್ತ್ಯರು ಉತ್ತರದಿಂದ ದಕ್ಷಿಣ ಪ್ರದೇಶಕ್ಕೆ ಯಾತ್ರೆ ಕೈಗೊಂಡು ವಿಂದ್ಯ ಪರ್ವತ ರಾಜನನ್ನು ಸಂಧಿಸುತ್ತಾರೆ. ಆಗ ಪರ್ವತ ರಾಜನು ಮಹರ್ಷಿ ಗಳಿಗೆ ನನ್ನಿಂದೇನಾಗಬೇಕು ತಿಳಿಸಿ ಎನ್ನಲು, ಅಯ್ಯಾ ವಿಂದ್ಯಗಿರಿಯೇ ನಾನು ದಕ್ಷಿಣ ಪ್ರದೇಶಕ್ಕೆ ಹೋಗಿ ಬರುವ ವರೆಗೆ ನೀನು ಹೀಗೆಯೇ ನಮ್ರನಾಗಿರಬೇಕು ಎಂದು ಆದೇಶಿಸಿ ತೀರ್ಥಯಾತ್ರೆಯನ್ನು ಮುಂದುವರೆಸುತ್ತಾರೆ. ವಿಂದ್ಯ ಪರ್ವತವು ಅಗಸ್ತ್ಯ ಮಹರ್ಷಿಯು ಇಂದೋ, ನಾಳೆಯೋ, ನಾಡಿದ್ದೋ ಬಂದೇ ಬರುತ್ತಾರೆ ಎಂದು ಚಿಂತಿಸುತ್ತಲೇ ಅಡಗಿದ್ದು ಅಡಗಿದಂತೆಯೇ ಕಾಯುತ್ತಲಿದೆ ಎಂಬುದು ಪ್ರತೀತಿ. ಹೀಗೆ ಲೋಕಕಲ್ಯಾಣಾರ್ಥವಾಗಿ ದಕ್ಷಿಣಕ್ಕೆ ಬಂದ ಮಹಾಮುನಿ ಅಗಸ್ತ್ಯರು ಬ್ರಹ್ಮಗಿರಿ ಬೆಟ್ಟದ ಶ್ರೇಣಿಯಲ್ಲಿ ತಪೋನಿರತರಾಗುತ್ತಾರೆ. ಈ ಬ್ರಹ್ಮಗಿರಿ ಬೆಟ್ಟದ ಶ್ರೇಣಿಯಲ್ಲಿ ಸಪ್ತರ್ಷಿಗಳೂ ಯಾತ್ರೆ ಕೈಗೊಂಡು ಸ್ವಲ್ಪಕಾಲ ತಪಸ್ಸು ಮಾಡಿದರೆಂಬುದು ನಂಬಿಕೆ. ಅದೇ ಕಾಲದಲ್ಲಿ ಬ್ರಹ್ಮಗಿರಿ ಬೆಟ್ಟದಲ್ಲಿ ಕವೇರನೆಂಬ ಋಷಿಯು ತಪೋ ನಿರತನಾಗಿ ಬ್ರಹ್ಮದೇವರ ಮಾನಸ ಪುತ್ರಿ ಮತ್ತು ತಮ್ಮ ಸಾಕುಮಗಳಾದ ಲೋಪಾಮುದ್ರೆಯ ಜೊತೆಯಾಗಿ ನೆಲೆಸಿರುತ್ತಾರೆ. ಆಗ ಅಗಸ್ತ್ಯ ಮಹರ್ಷಿಗಳನ್ನು ಸಂಧಿಸಿದ ಕವೇರ ಮುನಿಯು ತನ್ನ ಮಗಳಾದ ಲೋಪಾಮುದ್ರೆ ಯನ್ನು ವಿವಾಹವಾಗುವಂತೆ ಬಿನ್ನವಿಸುತ್ತಾರೆ. ಆದರೆ ಲೋಪಾಮುದ್ರೆಯು ತನ್ನ ವಿವಾಹವಾದ ನಂತರ ಯಾವ ಕಾರಣಕ್ಕೂ ತನ್ನನ್ನು ಅಗಲಬಾರದೆಂಬ ಕೋರಿಕೆಯನ್ನು ಅಗಸ್ತ್ಯರಲ್ಲಿ ತಿಳಿಸುತ್ತಾಳೆ. ಆದರೆ ದೈವವಶಾತ್ ಒಂದು ದಿನ ಅಗಸ್ತ್ಯ ಮಹರ್ಷಿಗಳು ಕಾರ್ಯಾಂತರವಾಗಿ ಶಿಷ್ಯರೊಂದಿಗೆ ಹೊರಗೆ ಹೋಗಬೇಕಾಗಿದ್ದರಿಂದ ಲೋಪಾ ಮುದ್ರೆಯನ್ನು ಜಲರೂಪದಲ್ಲಿ ತಮ್ಮ ಕಮಂಡಲುವಿನಲ್ಲಿ ನಿಕ್ಷೇಪಿಸಿದ್ದರು. ಆದರೆ ಕಮಂಡಲವು ಉರುಳಿ ಜಲವು ಬ್ರಹ್ಮಗಿರಿ ಶ್ರೇಣಿಯಲ್ಲಿ ಅಂತರ್ಗಾಮಿಯಾಗಿ ಹರಿದು ತುಲಾಮಾಸದಲ್ಲಿ ಸೂರ್ಯನು ತುಲಾರಾಶಿಯನ್ನು ಪ್ರವೇಶಿಸುವ ಪುಣ್ಯ ಮುಹೂರ್ತದಲ್ಲಿ ತಲಕಾವೇರಿಯಲ್ಲಿ ಮಾತೆ ಕಾವೇರಿಯು ದಿವ್ಯ ಶಕ್ತಿಯಾಗಿ ಉದ್ಭವಿಸುತ್ತಾಳೆ. ಆ ಶುಭ ಮುಹೂರ್ತದಲ್ಲಿ ಮಾತೆ ಕಾವೇರಿಯನ್ನು ರಾಜರ ಕಾಲದಿಂದಲೂ ಸಾಂಪ್ರದಾಯಿಕ ಪೂಜೆಯನ್ನು ನೆರವೇರಿಸುತ್ತಾರೆ. ಅಂದು ವಿಶೇಷವಾಗಿ ಕಾವೇರಿ ತೀರ್ಥೋದ್ಭವನ್ನು ತುಲಾ ಸಂಕ್ರಮಣ ಎಂದು ಧಾರ್ಮಿಕವಾಗಿ ಆಚರಿಸಲಾಗುವುದು. ಸಂಕ್ರಮಣದ ನಂತರ ಅವರವರ ಮನೆಗಳಲ್ಲಿ ಕಣಿ ಪೂಜೆಯನ್ನು ಮಾಡಲಾಗುವುದು. ತವರು ಮನೆಯಿಂದ ತಂದ ಕಚ್ಚಿತಳಿ ಯಲ್ಲಿ ಅಕ್ಕಿಯನ್ನು ಹಾಕಿ ಅದರ ಮೇಲೆ ಸೌತೆಕಾಯಿ, ಬಾಳೆಹಣ್ಣು, ತೆಂಗಿನಕಾಯಿ, ಕಣಪೂ ಅನ್ನು ಇಟ್ಟು ನೈವೇದ್ಯ ಮಾಡಲಾಗುವುದು. ಜೊತೆಗೆ ಕೊಡವ ಸಂಪ್ರದಾಯದಲ್ಲಿ ಮದುವೆಗೆ ಒಂದು ದಿನ ಮೊದಲು ಊರು ಕೂಡುವ ದಿನ ಹೆಣ್ಣಿನ ಕುತ್ತಿಗೆಗೆ ಅವಳ ತಾಯಿ ಕಟ್ಟುವ ಪತ್ತಾಕ್ ಎಂಬ ಕಂಠಹಾರವನ್ನು ಇಟ್ಟು ಪೂಜಿಸ ಲಾಗುವುದು. ನಂತರ ಗುರುಹಿರಿಯರಿಗೆ ನಮಸ್ಕರಿಸುವ ಪದ್ಧತಿ ರೂಢಿಯಲ್ಲಿದೆ. ಕಾವೇರಿ ಮಾತೆಯು ತಲಕಾವೇರಿ ಯಲ್ಲಿ ಪ್ರಥಮವಾಗಿ ಉಗಮಿಸಿದ ಕಾಲವನ್ನು ನಿಖರವಾಗಿ ಉಲ್ಲೇಖಿಸಲು ಸಾಧ್ಯವಿಲ್ಲದಿದ್ದರೂ ಸುಮಾರು ತ್ರೇತಾಯುಗದ ಮುಂಚಿತವಾಗಿ ಸಂಭವಿಸಿರಬಹುದು ಎಂದು ಅಂದಾಜಿಸಬಹುದು. ಮತ್ತೆ ಅಗಸ್ತ್ಯ ಮುನಿಗಳು ಪತ್ನಿಯನ್ನು ಹುಡುಕಿಕೊಂಡು ತಲಕಾವೇರಿಗೆ ಬರುತ್ತಾರೆ. ಅಲ್ಲಿ ಅಗಸ್ತ್ಯರು ಮರಳಿನ ಶಿವಲಿಂಗವನ್ನು ಪ್ರತಿಷ್ಠಾಪಿ ಸುತ್ತಾರೆ. ಈ ಸನ್ನಿಧಿಗೆ ಶ್ರೀ ಅಗಸ್ತ್ಯೇಶ್ವರ ಎಂದು ಹೆಸರಿಸಲಾಗಿದ್ದು ಕಾಲಾನಂತರ ಅಲ್ಲಿಯೇ ಮೂಲ ಸನ್ನಿಧಿಗೆ ಒತ್ತಾಗಿ ಕಲ್ಲಿನ ಜೋತಿ ಮಂಟಪವನ್ನು ನಿರ್ಮಿಸಿ ಘಂಟಾಸ್ತಂಭವನ್ನೂ ಸ್ಥಾಪಿಸಲಾಗಿದೆ. ಶಾಸನಗಳಲ್ಲಿ ತಲಕಾವೇರಿಯ ಹೆಸರನ್ನು ಮೊದಲ್ ಕಾವೇರಿ ಎಂದೂ ಉಲ್ಲೇಖಿಸಲಾಗಿದೆ. ದ್ವಾಪರ ಯುಗದಲ್ಲಿ ಪಾಂಡವರು ಹನ್ನೆರಡು ವರ್ಷಗಳ ವನವಾಸವನ್ನು ಅನುಭವಿಸುವ ಕಾಲದಲ್ಲಿ ದಕ್ಷಿಣ ಪ್ರದೇಶಕ್ಕೂ ಆಗಮಿಸಿ ಕೊಡವ ಪ್ರದೇಶದ ಭಾಗದಲ್ಲಿ ಸಂಚಾರ ಮಾಡುತ್ತಿದ್ದುದನ್ನು ಗಮನಿಸಿದ ಕೊಡವರು ಆತಂಕಗೊಂಡು ಕಾವೇರಿ ಮಾತೆಯ ಮೊರೆ ಹೋಗುತ್ತಾರೆ. ಆಗ ಮಾತೆಯು ಕೊಡವರಿಗೆ ತಮ್ಮ ಭೂಮಿಯ ಹಕ್ಕನ್ನು ಪ್ರತಿಷ್ಠಾಪಿಸುವಂತೆ ಹೇಳಲಾಗಿ ಕೊಡ ವರು ತಾವು ವಾಸಮಾಡುವ ಮನೆ, ತಮ್ಮ ಬಾವಿಕಟ್ಟೆ, ಗದ್ದೆಗಳು, ಒಕ್ಕಣೆ ಕಣಗಳ ಸ್ಥಳಗಳಲ್ಲಿ ಬೊತ್ತ್ ಬಳ್ಳಿಯನ್ನು ಪೊಂಗಮರಕ್ಕೆ ಸುತ್ತಿ ಮರದ ಕವಲು ಕೋಲಿನಲ್ಲಿ ದೋಸೆ ಯನ್ನು ಸಿಕ್ಕಿಸಿ ಅವರವರ ಹಕ್ಕು ಬಾಧ್ಯತಾ ಸ್ಥಳಗಳಲ್ಲಿ ನೆಟ್ಟು ತಮ್ಮ ಹಕ್ಕನ್ನು ಪ್ರತಿಪಾದಿಸಿದರಂತೆ. ನಂತರ ಆ ಮಾರ್ಗವಾಗಿ ಬಂದ ಪಾಂಡವರಿಗೆ ಕಾವೇರಿ ಮಾತೆಯು ದರ್ಶನ ನೀಡಿ ಕೊಡವರು ತಮ್ಮ ಹಕ್ಕು ಸ್ಥಾಪಿಸಿರುವು ದನ್ನು ತಿಳಿಸಿ ಇಲ್ಲಿ ನೆಲೆಯೂರದಂತೆ ಪಾಂಡವರು ತಮ್ಮ ವನವಾಸವನ್ನು ಮುಂದುವರೆಸುವಂತೆ ಹೇಳುತ್ತಾಳೆ.

ಆ ನಂತರ ಮತ್ತೆ ಅಗಸ್ತ್ಯ ಮುನಿಗಳು ಪತ್ನಿ ಲೋಪಾ ಮುದ್ರೆಯನ್ನು ಹುಡುಕಿಕೊಂಡು ಭಾಗಮಂಡಲಕ್ಕೆ ಬಂದಾಗ ಅಂತರ್ಗಾಮಿಯಾಗಿ ತ್ರಿವೇಣಿ ಸಂಗಮದಲ್ಲಿ ಕಾಣಿಸಿ ಕೊಳ್ಳುತ್ತಾಳೆ. ಭಾಗಮಂಡಲದ ತ್ರಿವೇಣಿ ಸಂಗಮದಲ್ಲಿ ಕಾವೇರಿ ಮತ್ತು ಕನ್ನಿಕೆ ನದಿಗಳನ್ನು ಸುಜ್ಯೋತಿ ಎಂಬ ನದಿಯು ಗುಪ್ತಗಾಮಿನಿಯಾಗಿ ಸೇರಿ ಪವಿತ್ರ ತೀರ್ಥ ಸ್ಥಳವನ್ನಾಗಿಸಿದೆ. ಅಲ್ಲಿ ಭಗಂಡ ಋಷಿಯು ಹಲವಾರು ವರ್ಷಗಳ ಕಾಲ ತಪೋನಿರತನಾಗಿದ್ದು ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿ ಇಂದಿಗೂ ಶ್ರೀ ಭಗಂಡೇಶ್ವರ ಎಂದು ಪೂಜಿಸಲಾಗುತ್ತಿದೆ. ಈ ದೇವಸ್ಥಾನದ ಆವರಣದಲ್ಲಿ ಶ್ರೀ ಮಹಾವಿಷ್ಣು ಮತ್ತು ಶ್ರೀ ಸುಬ್ರಹ್ಮಣ್ಯೇಶ್ವರ ದೇವಸ್ಥಾನಗಳನ್ನು ಕೊಡಗಿನ ದೊರೆ ದೊಡ್ಡವೀರ ರಾಜೇಂದ್ರನು ಕಟ್ಟಿಸಿದನೆಂದು ತಿಳಿದು ಬರುತ್ತದೆ. ಹೀಗೆ ಮಾತೆ ಕಾವೇರಿಯು ಕೊಡಗಿನಲ್ಲಿ ಉದ್ಭವಿಸಿ ಕರ್ನಾಟಕ, ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಸುಮಾರು 756 ಕಿ.ಮೀ ಜೀವನದಿಯಾಗಿ ಹರಿದು ಅಲ್ಲಿನ ಜನರ ಬದುಕನ್ನು ಹಸನಾಗಿಸಿದ್ದಾಳೆ.

> ಲೋಕಕಲ್ಯಾಣಾರ್ಥವಾಗಿ ದಕ್ಷಿಣಕ್ಕೆ ಬಂದ ಮಹಾಮುನಿ ಅಗಸ್ತ್ಯರು ಬ್ರಹ್ಮಗಿರಿ ಬೆಟ್ಟದ ಶ್ರೇಣಿಯಲ್ಲಿ ತಪೋನಿರತರಾಗುತ್ತಾರೆ. ಈ ಬ್ರಹ್ಮಗಿರಿ ಬೆಟ್ಟದ ಶ್ರೇಣಿಯಲ್ಲಿ ಸಪ್ತರ್ಷಿಗಳೂ ಯಾತ್ರೆ ಕೈಗೊಂಡು ಸ್ವಲ್ಪಕಾಲ ತಪಸ್ಸು ಮಾಡಿದರೆಂಬುದು ನಂಬಿಕೆ. ಅದೇ ಸಮಕಾಲದಲ್ಲಿ ಬ್ರಹ್ಮಗಿರಿ ಬೆಟ್ಟದಲ್ಲಿ ಕವೇರನೆಂಬ ಋಷಿಯು ತಪೋನಿರತನಾಗಿ ಬ್ರಹ್ಮದೇವರ ಮಾನಸ ಪುತ್ರಿ ಮತ್ತು ತಮ್ಮ ಸಾಕುಮಗಳಾದ ಲೋಪಾಮುದ್ರೆಯ ಜೊತೆಯಾಗಿ ನೆಲೆಸಿರುತ್ತಾರೆ. ಆಗ ಅಗಸ್ತ್ಯ ಮಹರ್ಷಿಗಳನ್ನು ಸಂಧಿಸಿದ ಕವೇರ ಮುನಿಯು ತನ್ನ ಮಗಳಾದ ಲೋಪಾಮುದ್ರೆಯನ್ನು ವಿವಾಹವಾಗುವಂತೆ ಬಿನ್ನವಿಸುತ್ತಾರೆ. ಆದರೆ ಲೋಪಾಮುದ್ರೆಯು ತನ್ನ ವಿವಾಹವಾದ ನಂತರ ಯಾವ ಕಾರಣಕ್ಕೂ ತನ್ನನ್ನು ಅಗಲಬಾರದೆಂಬ ಕೋರಿಕೆಯನ್ನು ಅಗಸ್ತ್ಯರಲ್ಲಿ ತಿಳಿಸುತ್ತಾಳೆ. ಆದರೆ ದೈವವಶಾತ್ ಒಂದು ದಿನ ಅಗಸ್ತ್ಯ ಮಹರ್ಷಿಗಳು ಕಾರ್ಯಾಂತರವಾಗಿ ಶಿಷ್ಯರೊಂದಿಗೆ ಹೊರಗೆ ಹೋಗಬೇಕಾಗಿದ್ದರಿಂದ ಲೋಪಾಮುದ್ರೆಯನ್ನು ಜಲರೂಪದಲ್ಲಿ ತಮ್ಮ ಕಮಂಡಲುವಿನಲ್ಲಿ ನಿಕ್ಷೇಪಿಸಿದ್ದರು. ಆದರೆ ಕಮಂಡಲವು ಉರುಳಿ ಜಲವು ಬ್ರಹ್ಮಗಿರಿ ಶ್ರೇಣಿಯಲ್ಲಿ ಅಂತರ್ಗಾಮಿಯಾಗಿ ಹರಿದು ತುಲಾಮಾಸದಲ್ಲಿ ಸೂರ್ಯನು ತುಲಾರಾಶಿಯನ್ನು ಪ್ರವೇಶಿಸುವ ಪುಣ್ಯ ಮುಹೂರ್ತದಲ್ಲಿ ತಲಕಾವೇರಿಯಲ್ಲಿ ಮಾತೆ ಕಾವೇರಿಯು ದಿವ್ಯ ಶಕ್ತಿಯಾಗಿ ಉದ್ಭವಿಸುತ್ತಾಳೆ.





ವಾರಭವಿಷ್ಯ

16.10.2022 ರಿಂದ 22.10.2022

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :- ರವಿ–ಕನ್ಯಾ, ತುಲಾ, ಚಂದ್ರ–ಮಿಥುನ, ಕಟಕ, ಸಿಂಹ, ಕುಜ–ಮಿಥುನ, ಬುಧ–ಕನ್ಯಾ, ಗುರು–ಮೀನ, ಶುಕ್ರ–ಕನ್ಯಾ, ತುಲಾ, ಶನಿ–ಮಕರ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು', ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ,
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು
ಮೊ: 9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಸಾಫ್ಟ್‌ವೇರ್ ವೃತ್ತಿಯವರಿಗೆ ವೃತ್ತಿ ಬದಲಾವಣೆಯಿಂದ ಉನ್ನತಿ. ಕಾಗದ–ಪತ್ರ ಬರಹಗಾರರಿಗೆ ಉತ್ತಮ ಲಾಭ. ಮಕ್ಕಳಿಗೆ ಪರೀಕ್ಷೆ–ಸಂದರ್ಶನಗಳಲ್ಲಿ ಯಶಸ್ಸಿನಿಂದ ಹರುಷ. ಎಲೆಕ್ಟ್ರಿಕಲ್ ಗುತ್ತಿಗೆ ದಾರರಿಗೆ ಕೈ ತುಂಬಾ ಕೆಲಸ ಹಾಗೂ ಧನ ಲಾಭ. ಸ್ನೇಹಿತರ ಸಹಕಾರದಿಂದ ಉತ್ತಮ ಸ್ಥಾನ ಲಭಿಸುವ ಸಾಧ್ಯತೆ. ಅಪರಿಚಿತರೊಂದಿಗೆ ಆನ್‌ಲೈನ್ ವ್ಯವಹಾರ ಮಾಡುವುದರಿಂದ ಧನ ನಷ್ಟ, ರಾಹು ನಿಮ್ಮ ರಾಶಿಯಲ್ಲೇ ಇದ್ದು ದುಡುಕಿನಿಂದ ಎಡವಟ್ಟು. ಶ್ರೀ ವಿಘ್ನೇಶ್ವರನಿಗೆ ಗರಿಕೆ ಸಮರ್ಪಣೆ, ಶುಭ ಸಂಖ್ಯೆ–4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಸದ್ಯದ ಪರಿಸ್ಥಿತಿಯಲ್ಲಿ ಜೀವನದ ಸಾಧಕ ಬಾಧಕಗಳು ನಿಮ್ಮ ಅರಿವಿಗೆ ಬಾರದಿರಲು ಗ್ರಹಗತಿಗಳೇ ಕಾರಣ. ಇಲ್ಲ ಸಲ್ಲದ ಕೆಲಸಗಳಿಗೆ ಕೈ ಹಾಕದಿರಿ. ವಾಮಮಾರ್ಗದಿಂದ ಹಣ ಗಳಿಕೆ ಆಗುವುದು. ವಾರ ಮಧ್ಯೆ ಪ್ರಭಾವಿ ವ್ಯಕ್ತಿಗಳ ಸಂಪರ್ಕದಿಂದ ಕಾರ್ಯಸಿದ್ಧಿ, ಧನ ಸಂಪಾದನೆಯ ಹೊಸ ಮಾರ್ಗ ತೆರೆದುಕೊಳ್ಳುವುದು, ಮನೆಯಲ್ಲಿ ಹಿರಿಯ ಜೀವಿಯೊಬ್ಬರಿಗೆ ಆರೋಗ್ಯ ಕೆಡಬಹುದು.
ಶ್ರೀ ಅಪರಜಿತಾಸ್ತೋತ್ರ ಪಠಿಸಿ. ಶುಭ ಸಂಖ್ಯೆ–2.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ನಿಮ್ಮ ಸ್ವಂತ ಕೆಲಸಗಳನ್ನು ಆತ್ಮಪೂರ್ವಕವಾಗಿ ಸಂಪನ್ನ ಗೊಳಿಸಿಕೊಳ್ಳಿ. ಇದಕ್ಕೆ ಗ್ರಹಗಳ ಪೂರಕ ಬೆಂಬಲವಿದೆ. ಮೃಗಶಿರಾ ನಕ್ಷತ್ರದವರಿಗೆ ವಿಶೇಷ ಸ್ಥಾನಮಾನ ಲಭಿಸಲಿದೆ. ಕೃಷಿಕರಿಗೆ ಹಾಗೂ ಕೃಷಿ ಸಂಬಂಧಿ ವಸ್ತು ಮಾರಾಟಗಾರರಿಗೆ ದ್ವಿಗುಣ ಲಾಭವಾಗುವುದು. ಯಾವುದೇ ಕರಾರು ದಸ್ತಾವೇಜುಗಳಿಗೆ ಸಹಿ ಮಾಡುವ ಮೊದಲು ವಕೀಲರ ಸಲಹೆ ಪಡೆಯುವುದು ಒಳ್ಳೆಯದು. ನರ ಹಾಗೂ ಸ್ನಾಯು ಸಂಬಂಧ ಅನಾರೋಗ್ಯ ಕಾಡಬಹುದು.
ಶ್ರೀದೇವೀ ಉಪಾಸನೆ, ಶುಭ ಸಂಖ್ಯೆ–3..

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ)

ಸಪ್ತಾಹದ ಪೂರ್ವಾರ್ಧದಲ್ಲಿ ನೆಮ್ಮದಿಯ ತಂಗಾಳಿ ಬೀಸಲಿದೆ. ಮನೆ ಮಂದಿಯ ಒಗ್ಗಟ್ಟೇ ಒಬ್ಬಟ್ಟು, ಎಲ್ಲರ ಸಹಕಾರದಿಂದ ಮಹತ್ತರವಾದ ಕಾರ್ಯ ಸಾಧನೆ. ನೀವು ನಿರೀಕ್ಷಿಸಿದ ಹಣ ಕೈ ಸೇರಲು ಗುರುಕೃಪೆ ಇದೆ. ಸ್ಪರ್ಧಾತ್ಮಕ ಪರೀಕ್ಷೆ ಬರೆದವರಿಗೆ ಶುಭ ಸಂದೇಶ ಬರುವುದು. ಸರ್ಕಾರಿ ನೌಕರರಿಗೆ ಲೋಕಾಯುಕ್ತ 'ಬಿಸಿ' ಮುಟ್ಟಬಹುದು. ಧರ್ಮ ಮಾರ್ಗವನ್ನು ಬಿಡದಿರಿ. ಸ್ತ್ರೀಯರಿಗೆ ರಕ್ತದೋಷ ಕಾಡಲಿದೆ. ಶ್ರೀನೃಸಿಂಹ ಸ್ತುತಿ. ಶುಭ ಸಂಖ್ಯೆ–5.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಚಂದ್ರ ಸಂಚಾರ ಶುಭವಿದೆ. ನಿರೀಕ್ಷಿತ ಹಣ ಕೈ ಸೇರುವುದು, ನಿವೇಶನ, ಗೃಹ ಖರೀದಿಗೆ ಪ್ರೇರಣೆ ಆಗುವುದು. ಮತ್ತು ಆಭರಣ ಪ್ರಾಪ್ತಿ. ಹೊಸ ಮಿತ್ರರ ಪರಿಚಯ, ಸರ್ಕಾರಿ ಕೆಲಸ ಕಾರ್ಯಗಳು ನಿಧಾನಗತಿಯಲ್ಲಿ ಸಾಗುತ್ತವೆ. ಪರಸ್ಥಳಕ್ಕೆ ತೆರಳಿ ತೊಂದರೆಗೆ ಗುರಿಯಾಗುವಿರಿ. ಗಂಡ–ಹೆಂಡಿರ ಜಗಳ ಉಂಡು ಮಲಗುವ ತನಕ ಎಂಬಂತೆ ಸಾಗುವುದು, ಆರೋಗ್ಯದ ಕಡೆ ಗಮನ ನೀಡಿ.
ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–8

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ತಾಳಿದವನು ಬಾಳುವನು. ಇದು ಈ ವಾರದಲ್ಲಿ ನೀವು ಪಾಲಿಸಬೇಕಾದ ತತ್ವ, ಮನೆಯಲ್ಲೂ, ಕಚೇರಿಯಲ್ಲೂ, ಉಂಟಾಗುವ ಕೆಲವು ಬದಲಾ ವಣೆಗಳಿಗೆ ಸಿದ್ಧರಾಗಿರಿ. ಪ್ರವಾಸೋದ್ಯಮ, ಹೋಟೆಲ್, ಕ್ಯಾಟರಿಂಗ್ ವ್ಯವಹಾರಿಗಳಿಗೆ ಕೈ ತುಂಬಾ ಆದಾಯವಾಗುವುದು. ಮನೆಯಲ್ಲಿನ ಭಿನ್ನಾಭಿಪ್ರಾಯಗಳನ್ನು ಜಾಣತನದಿಂದ ನಿಭಾಯಿಸಿಕೊಳ್ಳಿ. ವಿದ್ಯಾರ್ಥಿಗಳು ಓದಿನಲ್ಲಿ ಹಿಂದೆ ಬೀಳುವರು. ವಾಯುವಿಹಾರಕ್ಕೆ ತೆರಳುವಾಗ ಆಭರಣ ತೆಗೆದಿಟ್ಟು ಹೋಗಿ.
ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ–1.

ಕಟಕ (ಹಿ.ಹು.ಹೆ.ಹೊ.ಡ.ಡಿ.ಡು)

ಶುಭ ಗುರುವಿನ ಪರಿಣಾಮ ಭಾಗ್ಯವಿಲ್ಲ. ಪೃಥ್ವಿ, ಸುವರ್ಣ, ರಜತ ವ್ಯಾಪಾರಿಗಳಿಗೆ ಹೇರಳ ಧನ ಲಾಭವಾಗುವುದು. ಯುವತಿಯರಿಗೆ ಕನ್ಯಾಸೆರೆಯಿಂದ ಬಿಡುಗಡೆ, ರಿಯಲ್ ಎಸ್ಟೇಟ್ ವ್ಯಾಪಾರಿಗಳಿಗೆ ಹೊಸ ವ್ಯವಹಾರಗಳು ಕುದುರುವುದು. ಸರ್ಕಾರಿ ನೌಕರರು ಅಡ್ಡ ಮಾರ್ಗದಲ್ಲಿ ನಡೆದು ಸಂಕಷ್ಟಕ್ಕೆ ಗುರಿಯಾಗುವುದು. ಪಾಲುದಾರಿಕೆ ಸದಸ್ಯರಲ್ಲಿ ಒಡಕುಗಳು ಉಂಟಾಗುವುದು. ವಾರದ ಕಡೆಗೆ ಶಾರ್ಟ್ ಟ್ರಿಪ್.
ಶ್ರೀಸಪ್ತಮಾತೃಕೆ ಆರಾಧನೆ. ಶುಭ ಸಂಖ್ಯೆ–7

ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ಸಮಯಕ್ಕಾದವನೇ ನೆಂಟ ಎಂಬಂತೆ ಅಪರಿಚಿತರಿಂದ ಸಹಾಯ ಒದಗಿಬರುವುದು. ಸಾಡೇಸಾತಿಯ ಪ್ರಭಾವವಿದ್ದಾಗ್ಯೂ ಮನಸ್ಸಿಗೆ ಹುರುಪು ತುಂಬುವ ಘಟನೆಗಳು ನಿಮ್ಮನ್ನು ಪ್ರಸನ್ನಚಿತ್ತಗೊಳಿ ಸುವುದು. ಹೊಸ ಬಂಡವಾಳ ಹೂಡಿಕೆಗಳನ್ನು ಎಚ್ಚರಿಕೆಯಿಂದ ಮಾಡಿ ಶ್ರೀಮತಿ ಯೊಡನೆಯೂ, ನೆರೆಹೊರೆಯಲ್ಲಿಯೂ ಸಾಮರಸ್ಯದ ಕೊರತೆ. ಸರ್ಕಾರಿ ನೌಕರರಿಗೆ ಹಿರಿಯ ಅಧಿಕಾರಿಗಳ ಕಿರುಕುಳ ರಾತ್ರಿ ಪ್ರವಾಸಗಳನ್ನು ಅವಾಯ್ಡ್ ಮಾಡಿ.
ಕುಲದೇವತಾ ಪ್ರಾರ್ಥನೆ. ಶುಭ ಸಂಖ್ಯೆ–1.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಶುಭ ಚಂದ್ರ ಸಂಚಾರದ ಫಲವಾಗಿ ವಾರದ ಆರಂಭಕ್ಕೆ ಎಮೋಷನಲ್ ಆಗಿರುತ್ತೀರ. ಹಾಗೆಯೇ ಪ್ರಮೋಷನಲ್ ವಿಷಯಗಳ ಬಗ್ಗೆಯೂ ಗಮನ ನೀಡಿ. ಕಬ್ಬಿಣ ಕಾದಾಗ ತಟ್ಟಿಕೊ ಎಂಬಂತೆ ನಿಮ್ಮ ಉತ್ತಮ ಚಿಂತನೆಗಳು ನಿಮ್ಮ ಶ್ರೇಯಸ್ಸಿಗೆ ಪೂರಕವಾಗಲಿದೆ. ವಾರ ಮಧ್ಯೆ ಸಾಧು–ಸಜ್ಜನರ ಭೇಟಿಯಿಂದ ನೆಮ್ಮದಿ ಎನಿಸುವುದು. ವಾರಾಂತ್ಯಕ್ಕೆ ನಿಮ್ಮ ರಾಶಿಗೆ ಚಂದ್ರ ಸತ್ಕಾರ್ಯಗಳಿಗೆ ಪ್ರೇರೇಪಿಸುವನು. ಪಿತ್ತ ಜನಕ ಕಾಯಿಲೆ ಕಾಡಬಹುದು. ಶ್ರೀ ಸೂರ್ಯೋಪಾಸನೆ. ಶುಭ ಸಂಖ್ಯೆ–2.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ವಾರದ ಪೂರ್ವಾರ್ಧಕ್ಕೆ ವಿತ್ತಲಾಭ. ಸುಖ, ಸಂತೋಷಗಳು ಉತ್ತಮ ಭೋಜನ, ಶಯನ ಸುಖ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆ ಗಳು ಸಾಕಾರಗೊಳ್ಳುವುದು. ದೀರ್ಘ ಕಾಲದ ಹೂಡಿಕೆಗಳನ್ನು ಮಾಡಲು ಅಡ್ಡಿ ಇಲ್ಲ. ನಿಮ್ಮ ಪ್ರೀತಿ ಪಾತ್ರರ ಜೊತೆ ಸಂತಸದ ಸಮಯ. ಯುವಕ–ಯುವತಿಯರಿಗೆ ಪ್ರೀತಿ–ಪ್ರೇಮ ವಿಷಯಗಳು ರೋಮಾಂಚನಕಾರಿಯಾಗಿರುತ್ತದೆ. ವ್ಯಯಸ್ಥಾನ, ಸ್ಥಿತ ಶನಿದೇವ ಅನಿರೀಕ್ಷಿತ ಖರ್ಚುವೆಚ್ಚಗಳಿಗೆ ಕಾರಣನಾಗುವನು. ವಾಯು ಪ್ರಕೋಪ ಕಾಡಬಹುದು. ಶ್ರೀ ಶನಿಸ್ತೋತ್ರ ಪಠಣ. ಶುಭ ಸಂಖ್ಯೆ–9

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಸಪ್ತಾಹದ ಪೂರ್ವಾರ್ಧಕ್ಕೆ ದೇಹ ಸೌಖ್ಯ, ಯಶಸ್ಸು, ಸಂತೋಷಗಳು, ವ್ಯಾಪಾರದಿಂದ ಧನಲಾಭ, ಕಾರ್ಯನಿಮಿತ್ತ ದೂರ ಪ್ರಯಾಣಗಳು ಸಂಭವ, ಕೆಲವರಿಗೆ ವಿವಾಹ ಬಂಧನವಾಗುವ ಸಾಧ್ಯತೆ. ಪಂಚಮ ಶನಿದೇವನಿಂದ ಕೆಲಸ ಕಾರ್ಯಗಳಲ್ಲಿ ಒತ್ತಡ, ಮನೆಯಲ್ಲಿ ಸೌಹಾರ್ದತೆಯಲ್ಲಿ ಕೊರತೆ, ಮಾನಸಿಕ ಕಿರಿಕಿರಿ. ಸರ್ಕಾರಿ ಅಧಿಕಾರಿಗಳಿಂದ ತೊಂದರೆ, ಸರ್ಕಾರಕ್ಕೆ ದಂಡ ಪಾವತಿ. ಅಜೀರ್ಣದಿಂದ ಆರೋಗ್ಯ ಕೆಡುವ ಸಂಭವ. ಶ್ರೀ ಶನ್ಯಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–5.


ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದ ಆದಿಗೆ ಕೊಡು–ತರುವ ವಿಷಯಗಳಲ್ಲಿ ಮಿಶ್ರಫಲ ದೊರೆ ಯುವುದು. ಹಣಕಾಸಿನ ಹೊಂದಾಣಿಕೆ ಸುಸೂತ್ರವಾಗಿದ್ದರೂ ನೀವು ನಿರೀಕ್ಷೆ ಮಾಡದಿರದ ವೆಚ್ಚಗಳಿಂದ ಕಂಗಾಲಾಗುವಿರಿ. ವಾರ ಮಧ್ಯೆ ನಿಮ್ಮ ಸರ್ಕಲ್‌ನಲ್ಲಿ ಪ್ರಭಾವಶಾಲಿಗಳೆನಿಸಿ ಕೈ ಹಾಕಿದ ಕೆಲಸಗಳು ದಡ ಮುಟ್ಟುವುದು. ರಾಜಕಾರಿಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು. ಸಹವಾಸಗಳು ಚೆನ್ನಾಗಿರಲಿ ಅನ್ಯಥಾ ಕಷ್ಟ–ನಷ್ಟಗಳಿಗೆ ಗುರಿಯಾಗುವಿರಿ. ದುರ್ಜನರಿಂದ ದೂರವಿರಿ.
ಶ್ರೀ ಮನ್ನಾರಾಯಣ ಸ್ತುತಿ. ಶುಭ ಸಂಖ್ಯೆ–3.

ಮಕ್ಕಳ ಚಿತ್ರ ಕಥೆ

'ನಿನಗೆ ಮೂರು ಪ್ರಶ್ನೆಗಳನ್ನು ಕೇಳಲೇ...?'

–ಹೆಚ್.ಜಿ.ಎನ್.ಪ್ರಸಾದ್, ಮೊ: 9845376199



ನೀತಿ: ಪ್ರತಿಯೊಬ್ಬರ ಬದುಕಿನಲ್ಲಿಯೂ ಇಂತಹ ಕಾಳಸರ್ಪವು ಎದುರಾಗುತ್ತದೆ. ಅವು ನಮ್ಮ ಬಾಳ ಹೊಳಪನ್ನು ಕಂಡು ನಮ್ಮನ್ನು ನಾಶ ಮಾಡಲು ಯತ್ನಿಸುತ್ತಿರುತ್ತವೆ. ಆದರೆ ನಮ್ಮ ಹೊಳಪನ್ನು ಇನ್ನಷ್ಟು ಹೆಚ್ಚಿಸಿಕೊಂಡು ಆ ಹೊಳಪಿನಿಂದಲೇ ಸರ್ಪಗಳನ್ನು ಮಣಿಸಬೇಕು.

ಕೆ.ಆರ್.ಪೇಟೆ ತಾಲೂಕು ಅಂಬಿಗರಹಳ್ಳಿ ಬಳಿಯ ತ್ರಿವೇಣಿ ಸಂಗಮದ ಮಹಾಕುಂಭಮೇಳಕ್ಕೆ ಮಹದೇಶ್ವರರೇ ಸ್ಫೂರ್ತಿ

ಚಂದ್ರಶೇಖರ ಶಿವಾಚಾರ್ಯಶ್ರೀಗಳ ಅಭಿಮತ

ಎಂ.ಕೆ.ಮೋಹನ್‌ರಾಜ್

ಕೆ.ಆರ್.ಪೇಟೆ,ಅ.15– ಕೆ.ಆರ್.ಪೇಟೆ ತಾಲೂಕು ಅಂಬಿಗರಹಳ್ಳಿಯ ಪುಣ್ಯಸ್ಥಳ – ಕಾವೇರಿ, ಲಕ್ಷ್ಮಣ ತೀರ್ಥ, ಹೇಮಾವತಿ ಸೇರುವ ತ್ರಿವೇಣಿ ಸಂಗಮದಲ್ಲಿ ಮಹಾ ಕುಂಭಮೇಳವನ್ನು ನಡೆಸಲು ಮಲೈ ಮಹದೇಶ್ವರಸ್ವಾಮಿ ಸ್ಫೂರ್ತಿಯಾಗಿದ್ದಾರೆ ಎಂದು ಹುಕ್ಕೇರಿಯ ಹಿರೇಮಠದ ಪೀಠಾಧಿಪತಿ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.



ತಾಲೂಕಿನ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಮಹಾ ಕುಂಭಮೇಳದ ಧಾರ್ಮಿಕ ಸಮ್ಮೇಳನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮಹಾ ಕುಂಭಮೇಳವನ್ನು ವೀಕ್ಷಿಸಲು ಬೇರೆ ಬೇರೆ ರಾಜ್ಯಗಳಿಗೆ ಹೋಗುವಂತಹ ಪರಿಸ್ಥಿತಿ ಎದುರಾಗಿತ್ತು. ಆದರೆ ಇಂದು ದಕ್ಷಿಣ ಭಾರತ ಅದರಲ್ಲೂ ಮಂಡ್ಯ ಜಿಲ್ಲೆಯಲ್ಲಿ ಕುಂಭ ಮೇಳ ನಡೆಯುತ್ತಿರುವುದು ನಿಜಕ್ಕೂ ಸಂತಸದ ಸಂಗತಿ ಎಂದು ಶ್ಲಾಘಿಸಿದರು. ಮನುಷ್ಯ ಆನಂದವಾಗಿ ಇರಬೇಕಾದರೆ ಮನಸ್ಸು ನಿರ್ಮಲವಾಗಿರಬೇಕು. ನದಿಗಳ ಬಗ್ಗೆ ಶ್ರದ್ಧೆ ಇರಬೇಕು. ನದಿಗಳನ್ನು ನಾವು ರಕ್ಷಣೆ ಮಾಡಿದರೆ ನದಿಗಳು ನಮ್ಮನ್ನು ಉಳಿಸುತ್ತವೆ. ಭಾರತದಲ್ಲಿ ಧರ್ಮ ಕೆಲಸವನ್ನು ಮಾಡುತ್ತದೆ. ಜನರಿಗೆ ವಿಚಾರವನ್ನು ಹೇಳಿದರೆ ತಿಳಿದುಕೊಳ್ಳುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೆ ಭಾವನಾತ್ಮಕ ಸಂಬಂಧ ನಮ್ಮ ದೇಶದ ಜೊತೆಗಿದೆ. ಈ ಕಾರಣಕ್ಕಾಗಿ ಕುಂಭಮೇಳವನ್ನು ಆಚರಣೆ ಮಾಡಿ ಪುಣ್ಯಸ್ನಾನವನ್ನು ಮಾಡುತ್ತೇವೆ ಎಂದರು.ಮೈಸೂರಿಗೆ ಬರುವಂತಹ ಪ್ರವಾಸಿಗರು ತ್ರಿವೇಣಿ ಸಂಗಮಕ್ಕೂ ಭೇಟಿ ನೀಡಬೇಕು. ತ್ರಿವೇಣಿ ಸಂಗಮ ಅಭಿವೃದ್ಧಿಯ ಜೊತೆಗೆ ಭಾವನಾತ್ಮಕ ಸಂಬಂಧವನ್ನು ಬೆಸೆಯಬೇಕು. ಬಹಳಷ್ಟು ಕ್ಷೇತ್ರಗಳು ಇಂದು ಅಭಿವೃದ್ಧಿಯನ್ನು ಹೊಂದಿದೆ ಎಂಬುದಕ್ಕೆ ಪ್ರವಾಸಿಗರೇ ಮೂಲ ಕಾರಣ ಎಂದು ಹೇಳಿದರು.

ಜಗದ್ಗುರುಗಳಾದ ಡಾ.ನಿರ್ಮಲಾನಂದನಾಥ ಮಹಾಸ್ವಾಮಿ ಹಾಗೂ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಯವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜೊತೆ ಮಾತನಾಡಿ ಮೈಸೂರಿಗೆ ಬರುವಂತಹ ಪ್ರವಾಸಿಗರು ಮೂರು ನದಿಗಳ ತ್ರಿವೇಣಿ ಸಂಗಮಕ್ಕೆ ಭೇಟಿ ನೀಡಿ ಪುಣ್ಯಸ್ನಾನವನ್ನು ಮಾಡುವ ರೀತಿ ಅಭಿವೃದ್ಧಿಪಡಿಸಿದರೆ ಈ ಕ್ಷೇತ್ರ ಅಭಿವೃದ್ಧಿಯಾಗುತ್ತದೆ ಎಂದರು. ಎಡತೊರೆ ಯೋಗಾನಂದೇಶ್ವರ ಮಠದ ಶ್ರೀ ಶಂಕರಭಾರತಿ ಸ್ವಾಮೀಜಿ ಮಾತನಾಡಿ, ತ್ರಿವೇಣಿ ಸಂಗಮ ಕಾವೇರಿ, ಹೇಮಾವತಿ ಹಾಗೂ ಲಕ್ಷ್ಮಣ ತೀರ್ಥದ ಪುಣ್ಯ ಸಂಗಮ ಕ್ಷೇತ್ರವಾಗಿದೆ. ಜಗದ್ಗುರು ಮಹದೇಶ್ವರರು ಪಾದಾರ್ಪಣೆ ಮಾಡಿ ಪವಿತ್ರವಾಗಿರುವ ಪುಣ್ಯ ಭೂಮಿಯಲ್ಲಿ ಮಹಾ ಕುಂಭಮೇಳ ನಡೆಯುತ್ತಿದೆ ಎಂದರು. ಕಾವೇರಿ ನದಿ ದಕ್ಷಿಣ ಭಾರತದಲ್ಲಿ ಹರಿಯುವ ಜೀವನದಿ. ಗಂಗಾ, ಯಮುನಾ, ಗೋದಾವರಿ ಸರಸ್ವತಿ ನರ್ಮದಾ ಸಿಂಧು ಕಾವೇರಿ ಸಪ್ತ ನದಿಗಳಲ್ಲಿ ಕಾವೇರಿ ನದಿ ಅತ್ಯಂತ ಪವಿತ್ರವಾದಂತಹ ನದಿ. ಕಾವೇರಿನದಿಯ ದರ್ಶನದಿಂದ ಪಾಪಗಳು ದೂರವಾಗುತ್ತವೆ. ಆನಂದದಿಂದ ಬಂದು ಸಾರ್ವಜನಿಕರು ಕುಂಭಮೇಳದಲ್ಲಿ ಪುಣ್ಯ ಸ್ನಾನವನ್ನು ಮಾಡಿ ಪುನೀತರಾಗುತ್ತಿದ್ದಾರೆ. ವಿಶೇಷ ದಿನಗಳಲ್ಲಿ ಪವಿತ್ರವಾದ ಸಂಗಮ ಕ್ಷೇತ್ರದಲ್ಲಿ ಸ್ನಾನ ಮಾಡಿ ದೇವರ ದರ್ಶನವನ್ನು ಮಾಡುವುದು ವಿಶೇಷವಾದ ಸಂಸ್ಕಾರ ಎಂದರು.

ಧಾರ್ಮಿಕ ಸಮ್ಮೇಳನದಲ್ಲಿ ಆದಿ ಚುಂಚನಗಿರಿ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಬೆಂಗಳೂರು ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ, ಕಾಗಿನೆಲೆ ಕನಕಗುರು ಪೀಠ ಶ್ರೀ ಶಿವಾನಂದಪುರಿ ಸ್ವಾಮೀಜಿ, ಬೇಬಿ ಮಠ ಮತ್ತು ಚಂದ್ರವನ ಆಶ್ರಮ ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ರೇಷ್ಮೆ ಮತ್ತು ಕ್ರೀಡಾ ಸಚಿವ ಕೆ.ಸಿ.ನಾರಾಯಣಗೌಡ, ಜಿಲ್ಲಾಧಿಕಾರಿ ಎಸ್.ಅಶ್ವತಿ, ಉಪ ವಿಭಾಗಾಧಿಕಾರಿ ಬಿ.ಸಿ ಶಿವಾನಂದ ಮೂರ್ತಿ, ತಹಶೀಲ್ದಾರ್ ರೂಪ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಅತ್ಯಾಚಾರ ಆರೋಪಿ ವಿರುದ್ಧ ಶೀಘ್ರ ಚಾರ್ಜ್ ಶೀಟ್

ಮಳವಳ್ಳಿ, ಅ.14– ಬಾಲಕಿ ಮೇಲೆ ಅತ್ಯಾಚಾರವೆಸಗಿ ಕೊಲೆಗೈದ ಪ್ರಕರಣದ ಆರೋಪಿ ವಿರುದ್ಧ ಮುಂದಿನ ಹತ್ತು ದಿನಗಳಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಮತ್ತು ಅಬಕಾರಿ ಸಚಿವ ಕೆ.ಗೋಪಾಲಯ್ಯ ಹೇಳಿದ್ದಾರೆ.



ಮಳವಳ್ಳಿಯ ಮೈಸೂರು ರಸ್ತೆಯಲ್ಲಿರುವ ಮೃತ ಬಾಲಕಿಯ ಮನೆಗೆ ಭೇಟಿ ನೀಡಿ ಸಾಂತ್ವನ ಹೇಳಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅತ್ಯಾಚಾರಿ ಆರೋಪಿಗೆ ಕಠಿಣ ಶಿಕ್ಷೆ ಆಗುತ್ತದೆ. ಈ ಪ್ರಕರಣವನ್ನ ಶೀಘ್ರಗತಿ ನ್ಯಾಯಾಲಯಕ್ಕೆ ವಹಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಈ ಪ್ರಕರಣ ಸಂಬಂಧ ಈಗಾಗಲೇ ಸಿಎಂ ಜೊತೆ ಮಾತುಕತೆ ನಡೆಸಲಾಗಿದ್ದು, ನೊಂದ ಕುಟುಂಬಕ್ಕೆ ನ್ಯಾಯ ಕೊಡಿಸಲಾಗುವುದು. ಮುಂದಿನ ದಿನಗಳಲ್ಲಿ ಬಾಲಕಿ ಕುಟುಂಬಕ್ಕೆ ಪರಿಹಾರ ಕೊಡಿಸುತ್ತೇವೆ. ಆದರೆ ಎಷ್ಟೇ ಪರಿಹಾರ ಕೊಟ್ಟರೂ ಬಾಲಕಿ ವಾಪಸ್ಸು ತರಲು ಆಗುವುದಿಲ್ಲ. ನಮಗೂ ಅತೀವ ಆ ದುಃಖ ಇದೆ ಎಂದು ಹೇಳಿದರು. ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥ ನಾರಾಯಣ ಮಾತನಾಡಿ, ಮಳವಳ್ಳಿಯಲ್ಲಿ ನಡೆದಿರುವ ಘಟನೆ ಖಂಡನೀಯ. ಈಗಾಗಲೇ ಆರೋಪಿಯ ತ್ವರಿತ ವಿಚಾರಣೆ ನಡೆಸಿ, ತಕ್ಕ ಶಿಕ್ಷೆ ನೀಡುವಂತೆ ಜಿಲ್ಲಾ ಉಸ್ತುವಾರಿ ಸಚಿವರು ಸಂಬಂಧಿಸಿದ ಅಧಿಕಾರಿಗಳ ಜೊತೆ ಮಾತನಾಡಿದ್ದಾರೆ. ಸಮಾಜದ ಬಹುಮಟ್ಟಿಗೆ ಆರೋಗ್ಯಕರವಾಗಿದೆ. ಆದರೂ ಒಮ್ಮೊಮ್ಮೆ ಇಂತಹ ಘಟನೆಗಳು ನಡೆದು ಬಿಡುತ್ತವೆ. ಇದು ವಿಷಾದಕರ ಸಂಗತಿಯಾಗಿದೆ. ಆರೋಪಿಯ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಈಗಾಗಲೇ ಪೋಕ್ಸೊ ಕಾಯ್ದೆಯಡಿ ಎಫ್‌ಐಆರ್ ಪ್ರಕರಣ ದಾಖಲಿಸಲಾಗಿದೆ ಎಂದು ಅವರು ವಿವರಿಸಿದರು. ಈ ಸಂದರ್ಭದಲ್ಲಿ ತಾಲೂಕು ಅಧಿಕಾರಿಗಳು ಹಾಗೂ ಸ್ಥಳೀಯ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಬೆಳೆಗಳಿಗೆ ನೀರು ನುಗ್ಗಿ ನಷ್ಟ: ಪರಿಹಾರಕ್ಕೆ ತಮ್ಮಣ್ಣ ಆಗ್ರಹ

ಭಾರತೀನಗರ, ಅ.15– ಕಳೆದ ಎರಡು ದಿನಗಳಿಂದ ಸುರಿದ ಭಾರೀ ಮಳೆಗೆ ತಾಲೂಕಿನ ರೈತರ ಬೆಳೆಗಳಿಗೆ ನೀರು ನುಗ್ಗಿ ಅಪಾರ ನಷ್ಟ ಉಂಟಾಗಿದೆ. ಸೂಕ್ತ ಪರಿಹಾರ ನೀಡಲು ಸರ್ಕಾರ ಮುಂದಾಗಬೇಕೆಂದು ಶಾಸಕ ಡಿ.ಸಿ.ತಮ್ಮಣ್ಣ ಆಗ್ರಹಿಸಿದ್ದಾರೆ.



ಭಾರತೀನಗರದಲ್ಲಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಲ್ಲಿ ಅನೇಕ ಕೆರೆ–ಕಟ್ಟೆಗಳು ಒಡೆದು ಕೊನೆಭಾಗವಾದ ಮದ್ದೂರು ತಾಲೂಕಿಗೆ ಅಧಿಕ ಪ್ರಮಾಣದಲ್ಲಿ ನೀರು ಹರಿದು ಬಂದ ಪರಿಣಾಮ 985 ಎಕರೆ ವಿಸ್ತೀರ್ಣವಿರುವ ಸೂಳೆಕೆರೆಗೆ ನೀರು ನುಗ್ಗಿದೆ. ಇದರಿಂದ ಕೆರೆಯ ಕೋಡಿ ಮತ್ತು ದಕ್ಷಿಣ ನಾಲೆಯ ಮೇಲ್ಗಾಲುವೆ ಒಡೆದುಹೋಗಿದೆ.

ಇದರಿಂದ ಇತ್ತೀಚಿನ ವರ್ಷಗಳಲ್ಲಿ ನಿರ್ಮಿಸಲಾಗಿದ್ದ ಸೇತುವೆಗೂ ಅಪಾಯ ಎದುರಾಗಿದೆ. ಹಿಂದೆಂದೂ ಇಷ್ಟೊಂದು ಪ್ರಮಾಣದಲ್ಲಿ ನೀರು ಹರಿದು ಬಂದಿರಲಿಲ್ಲ. ಇದರಿಂದ ದಕ್ಷಿಣ ಮತ್ತು ಉತ್ತರ ನಾಲೆಯ ಜಮೀನುಗಳಿಗೆ ನೀರು ನುಗ್ಗಿ ಅಪಾರ ನಷ್ಟ ಉಂಟಾಗಿದೆ. ತಾಲೂಕಿನ ಯಲಾದಹಳ್ಳಿಯ ಕೆರೆಯೂ ಕೂಡ ಒಡೆದಿದೆ. ಇವುಗಳನ್ನು ಪರಿಶೀಲಿಸಲು ಅಧಿಕಾರಿಗಳೊಂದಿಗೆ ಭೇಟಿನೀಡಿ ಅಗತ್ಯ ಕ್ರಮಕೈಗೊಳ್ಳುತ್ತೇನೆ ಎಂದು ಶಾಸಕ ತಮ್ಮಣ್ಣ ತಿಳಿಸಿದರು.

ಪಾಂಡವಪುರದಲ್ಲೂ ಮಳೆಯಿಂದ ಅಪಾರ ಹಾನಿ



ಪಾಂಡವಪುರ, ಅ.15– ತಾಲೂಕಿನಾದ್ಯಂತ ಕಳೆದ ರಾತ್ರಿ ಸುರಿದ ಧಾರಾಕಾರ ಮಳೆಗೆ ಐತಿಹಾಸಿಕ ತೊಣ್ಣೂರುಕೆರೆಯೂ ಉಕ್ಕಿ ಹರಿಯುತ್ತಿದ್ದು, ಅಪಾಯದ ಮಟ್ಟದಲ್ಲಿ ಕೆರೆಗೆ ನೀರು ಸಂಗ್ರಹವಾಗುತ್ತಿದೆ.

ಕೆರೆಗೆ ಅಧಿಕ ಪ್ರಮಾಣದಲ್ಲಿ ನೀರು ಬರುತ್ತಿದ್ದು, ಕೆರೆಯಿಂದ ಹೊರಹೋಗುವ ನೀರು ಸಿಕ್ಕಸಿಕ್ಕ ಜಾಗದಲ್ಲಿ ಹರಿಯುತ್ತಿದೆ. ಕೆರೆಯ ಕೋಡಿ ಹೋಗುವ ಜಾಗದಲ್ಲಿ ಅಧಿಕ ಪ್ರಮಾಣದಲ್ಲಿ ನೀರು ಹೊರಹೋಗುತ್ತಿದ್ದು, ಕೆರೆಯ ಸಂಪರ್ಕ ಕಲ್ಪಿಸುವ ರಸ್ತೆಯ ಮೇಲೆಯೇ ಅಪಾರ ಪ್ರಮಾಣದಲ್ಲಿ ನೀರು ಹರಿಯುತ್ತಿದ್ದು, ಗ್ರಾಮದ ದರ್ಗದ ಬಳಿ ಇರುವ ಚಿಕ್ಕಕೆರೆ ಕೂಡ ಭರ್ತಿಯಾಗಿದೆ. ಚಿಕ್ಕಕೆರೆಯಿಂದ ಅಧಿಕ ಪ್ರಮಾಣದಲ್ಲಿ ನೀರು ಹೊರ ಹೋಗುತ್ತಿದ್ದು ತೊಣ್ಣೂರು ಗ್ರಾಮದ ಪ್ರಾಥಮಿಕ ಆಸ್ಪತ್ರೆಯೂ ಸಂಪೂರ್ಣವಾಗಿ ಜಲಾವೃತಗೊಂಡಿದೆ. ಕೆರೆಯ ಎಡದಂಡೆ ನಾಲೆಯಿಂದಲೂ ಸಹ ಅಧಿಕ ಪ್ರಮಾಣದ ನೀರು ಹೊರಹೋಗುತ್ತಿದ್ದು, ನಾಲೆಯಿಂದ ನೀರು ರಸ್ತೆಯ ಮೇಲೆ ಉರುಳಿ ಗ್ರಾಮದ ಮನೆಗಳಿಗೆ ನುಗ್ಗುವ ಭೀತಿ ಎದುರಾಗಿದೆ.



ಸಂಪರ್ಕ ರಸ್ತೆ ಕುಸಿತ: ಮೇಲುಕೋಟೆ ಭಾಗದಲ್ಲಿ ಅಧಿಕ ಪ್ರಮಾಣದಲ್ಲಿ ಮಳೆಯಾದ ಹಿನ್ನೆಲೆಯಲ್ಲಿ ತಾಲೂಕಿನ ಸುಂಕಾತೊಣ್ಣೂರು ಗ್ರಾಮದಲ್ಲಿ ಕೆಂಗಲ್ ಮಹದೇಶ್ವರ ದೇವಸ್ಥಾನಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣ ಹಾಳಾಗಿದೆ. ಸುಂಕಾತೊಣ್ಣೂರು ಕೆರೆಯೂ ಕೋಡಿಬಿದ್ದ ಹಿನ್ನೆಲೆಯಲ್ಲಿ ಗ್ರಾಮದಿಂದ ಕಾಳೇನಹಳ್ಳಿ, ಮಂಡ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಸಂಪೂರ್ಣವಾಗಿ ಜಲಾವೃತಗೊಂಡಿತು. ಶ್ಯಾದನಹಳ್ಳಿ ಗ್ರಾಮದ ಮೊಸಳೆ ಹಳ್ಳದಲ್ಲೂ ಸಹ ಅಧಿಕ ಪ್ರಮಾಣದಲ್ಲಿ ನೀರು ಉಕ್ಕಿದ ಹಿನ್ನೆಲೆಯಲ್ಲಿ ಪಾಂಡವಪುರದಿಂದ ಕೆಆರ್‌ಎಸ್, ಬನ್ನಂಗಾಡಿಗೆ ಸಂಪರ್ಕ ಕಲ್ಪಿಸುವ ನಾಲೆ ಸಹ ಜಲಾವೃತಗೊಂಡು ವಾಹನ ಸವಾರರು ಪರದಾಡಬೇಕಾಯಿತು.

ನೆರೆಯ ಹಾವಳಿಗೆ ಒಳಗಾಗುವ ಕುಟುಂಬಗಳ ರಕ್ಷಣೆಗಾಗಿ ತಾಲೂಕು ಆಡಳಿತವು ಕೆರೆತೊಣ್ಣೂರು ಗ್ರಾಮದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಕಾಳಜಿ ಕೇಂದ್ರವನ್ನು ತೆರೆದಿದೆ.

ಶ್ರೀರಂಗಪಟ್ಟಣದಲ್ಲಿ ಉಕ್ಕಿ ಹರಿದ ಲೋಕಪಾವನಿ

ಶ್ರೀರಂಗಪಟ್ಟಣ, ಅ.15– ಕಳೆದ 4 ದಿನಗಳಿಂದ ಸುರಿಯುತ್ತಿರುವ ಭಾರೀ ಮಳೆಗೆ ಶ್ರೀರಂಗಪಟ್ಟಣ ತಾಲೂಕಿನ ಚಂದಗಿರಿಕೊಪ್ಪಲು ಬಳಿಯಿರುವ ಲೋಕಪಾವನಿ ನದಿ ಉಕ್ಕಿ ಹರಿದು ಜಮೀನುಗಳು ಜಲಾವೃತಗೊಂಡಿವೆ. ಇದಲ್ಲದೆ ಮಂಡ್ಯ ಪಾಂಡವಪುರ – ಸಬ್ಬನಕುಪ್ಪೆ ಹಾಗೂ ಚಂದಗಿರಿಕೊಪ್ಪಲು ಸಂಪರ್ಕ ಮಾರ್ಗ ಕಲ್ಪಿಸುವ ಸೇತುವೆ ಮೇಲೆ ನೀರು ಹರಿದು ವಾಹನ ಸ್ಥಗಿತಗೊಂಡಿದೆ.



ಜಮೀನು ಜಲಾವೃತವಾಗಿದ್ದು, ವಾಸದ ಮನೆಗಳಿಗೂ ನೀರು ನುಗ್ಗಿದೆ. ಹಲವು ಮನೆಗಳ ಗೋಡೆ ಬಿರುಕುಗಳ ಕಾಣಿಸಿಕೊಂಡಿವೆ. ಇದಲ್ಲದೆ ತಾಲೂಕಿನ ವಿವಿಧೆಡೆ ಮಳೆಯ ಅಬ್ಬರಕ್ಕೆ ಮನೆಗಳ ಗೋಡೆ ಕುಸಿತಗೊಂಡಿದ್ದು, ಜನರಿಗೆ ಸಂಕಷ್ಟದ ಪರಿಸ್ಥಿತಿ ಎದುರಾಗಿದೆ. ತಾಲೂಕಿನ ಚಂದಗಿರಿಕೊಪ್ಪಲು, ಕೆ.ಶೆಟ್ಟಹಳ್ಳಿ, ಕೂಡಲಕುಪ್ಪೆ, ಗಂಜಾಂ, ಬೆಳಗೊಳ, ಅರಕೆರೆ, ಹೊಸಹಳ್ಳಿ, ಹೊಸಾನಂದೂರಿನಲ್ಲಿ ರೈತರ ಜಮೀನು ಜಲಾವೃತಗೊಂಡಿದ್ದರಿಂದ ಬೆಳೆ ನಷ್ಟ ಪರಿಹಾರಕ್ಕೆ ಯಾವುದೇ ಅಧಿಕಾರಿಗಳು ಭೇಟಿ ನೀಡದಿರುವ ಬಗ್ಗೆ ರೈತರು ಹಾಗೂ ಮನೆ ವಾಸಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಜಿಲ್ಲಾಧಿಕಾರಿ ಕಚೇರಿ ಬಳಿಯೇ ಅಳಿಲು, ಪಕ್ಷಿಗಳ ಬೇಟೆ

● ಸ್ಥಳಕ್ಕೆ ಅರಣ್ಯ ಸಿಬ್ಬಂದಿ ದೌಡು; ಉರುಳುಗಳ ತೆರವು ● ವಿಡಿಯೋ, ಫೋಟೋ ಪರಿಗಣಿಸಿ ಪ್ರಕರಣ ದಾಖಲು ಭರವಸೆ

ಮೈಸೂರು, ಅ.15(ಎಂಟಿವೈ)– ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಸಮೀಪವೇ ಕೆಲವರು ಉರುಳು ಹಾಕಿ ಅಳಿಲು ಹಾಗೂ ಪಕ್ಷಿಗಳನ್ನು ರಾಜಾರೋಷವಾಗಿ ಬೇಟೆಯಾಡುತ್ತಿರುವುದು ಶನಿವಾರ ಬೆಳಕಿಗೆ ಬಂದಿದೆ.

ಜಿಲ್ಲಾಧಿಕಾರಿಗಳ ಕಚೇರಿ ಗೇಟ್ ಮುಂಭಾಗದ ಮರಕ್ಕೆ ಪ್ಲಾಸ್ಟಿಕ್ ದಾರದಿಂದ ಮಾಡಿದ ಉರುಳನ್ನು ಹಾಕಿ, ಅಳಿಲು ಕೂಗುವ ಧ್ವನಿಯನ್ನು ಮೊಬೈಲ್‌ನಲ್ಲಿ ಪ್ಲೇ ಮಾಡಿ ಅವುಗಳನ್ನು ಬೇಟೆಯಾಡುವುದನ್ನು ಗಮನಿಸಿದ ಕೆಲ ಮಾಧ್ಯಮದವರು, ಗುಪ್ತವಾಗಿ ಇಂತಹವರ ಚಲನವಲನವನ್ನು ಚಿತ್ರೀಕರಿಸಿ, ಮರಗಳಿಗೆ ಉರುಳು ಹಾಕಿರುವುದನ್ನು ಖಚಿತ ಪಡಿಸಿಕೊಂಡು ಅರಣ್ಯ ಅಧಿಕಾರಿಗಳ ಗಮನಕ್ಕೆ ತಂದರು. ಇದೇ ವೇಳೆ ಉರುಳಿಗೆ ಸಿಲುಕಿದ್ದ ಅಳಿಲನ್ನು ಬಟ್ಟೆಯ ಬ್ಯಾಗ್‌ನಲ್ಲಿ ಹಾಕಿಕೊಳ್ಳುತ್ತಿದ್ದ ವ್ಯಕ್ತಿಯನ್ನು ಹಿಡಿಯಲು ಯತ್ನಿಸಿದಾಗ ಆತ ಪರಾರಿಯಾದ.



ಸ್ಥಳಕ್ಕೆ ದೌಡಾಯಿಸಿದ ಅರಣ್ಯ ಸಿಬ್ಬಂದಿ, ಜಿಲ್ಲಾಧಿಕಾರಿ ಕಚೇರಿ ಸಮೀಪದ ಪಾರ್ಕ್‌ನ ಬೇಲಿ ಹಾಗೂ ಮರಗಳನ್ನು ಪರಿಶೀಲಿಸಿ ಅಲ್ಲಿ ಹಾಕಿದ್ದ ಉರುಳುಗಳನ್ನು ವಶಪಡಿಸಿಕೊಂಡರು. ಉರುಳು ಹಾಕುತ್ತಿರುವ ಹಾಗೂ ಅಳಿಲು ಮತ್ತು ಪಕ್ಷಿಗಳನ್ನು ಬೇಟೆಯಾಡುತ್ತಿರುವ ದೃಶ್ಯ ಮೊಬೈಲ್‌ನಲ್ಲಿ ಸೆರೆಯಾಗಿದ್ದು, ಅದನ್ನು ಆಧರಿಸಿ ವನ್ಯಜೀವಿ ಸಂರಕ್ಷಣಾ ಕಾಯ್ದೆಯಡಿ ಆರೋಪಿಗಳ ವಿರುದ್ಧ ಪ್ರಕರಣ ದಾಖಲಿಸಲು ಅರಣ್ಯ ಇಲಾಖೆ ಮುಂದಾಗಿದೆ. ಅಲ್ಲದೆ ಸ್ಥಳದಲ್ಲಿ ಅನುಮಾನಾಸ್ಪದವಾಗಿ ಕಂಡುಬಂದ ಕೆಲವರಿಗೆ ಎಚ್ಚರಿಕೆ ನೀಡಿದರಲ್ಲದೆ ಇನ್ನಷ್ಟು ದಿನ ಜಿಲ್ಲಾಧಿಕಾರಿ ಕಚೇರಿ ಬಳಿ ಗಸ್ತು ತಿರುಗುವುದಾಗಿ ತಿಳಿಸಿದ್ದಾರೆ.

ಅಳಿದ ಅಳಿಲು: ಜಿಲ್ಲಾಧಿಕಾರಿ ಕಚೇರಿ ಆವರಣ ಹಾಗೂ ಸಮೀಪದ ಪಾರ್ಕ್‌ನಲ್ಲಿ ಸಾಕಷ್ಟು ಮರಗಳಿದ್ದು, ಅವುಗಳಲ್ಲಿ ನೂರಾರು ಅಳಿಲುಗಳು ಹಾಗೂ ನಾನಾ ರೀತಿಯ ಪಕ್ಷಿಗಳು ಆಶ್ರಯಿಸಿದ್ದವು. ಆದರೆ ಕೆಲ ದಿನಗಳಿಂದ ಅಳಿಲು ಹಾಗೂ ಪಕ್ಷಿಗಳ ಸದ್ದೇ ಇಲ್ಲದಂತಾಗಿದೆ. ಮರಗಳಲ್ಲಿ ಚಿಲಿಪಿಲಿ ಎಂದು ಸ್ವಚ್ಛಂದವಾಗಿದ್ದ ವಿಹರಿಸುತ್ತಿದ್ದ ಪಕ್ಷಿಗಳನ್ನು ಕ್ಯಾಟರ್ ಬಿಲ್ ಮೂಲಕ ಬೇಟೆಯಾಡಲಾಗಿದೆ. ಪುಟಾಣಿ ಅಳಿಲುಗಳನ್ನೂ ಪ್ಲಾಸ್ಟಿಕ್ ದಾರದ ಉರುಳಿನಿಂದ ಬೇಟೆಯಾಡಿದ್ದಾರೆ. ಈ ಕೃತ್ಯ ಹಲವು ದಿನಗಳಿಂದ ನಡೆಯುತ್ತಿರುವುದರಿಂದ ಈ ಭಾಗದಲ್ಲಿ ಅಳಿಲು ಸಂತತಿಯೇ ಅಳಿದು ಹೋಗಿದೆ. ಕ್ಯಾಟರ್ ಬಿಲ್‌ನಿಂದ ತೂರುವ ಕಲ್ಲೇಟಿಗೆ ಅದೆಷ್ಟೋ ಪಕ್ಷಿಗಳು ಪ್ರಾಣ ಕಳೆದುಕೊಂಡಿವೆ. ಜಿಲ್ಲಾಧಿಕಾರಿಗಳ ಕಚೇರಿ ಬಳಿ ಹಾಡಹಗಲೇ ಹೀಗೆ ಮೂಕ ಪ್ರಾಣಿ–ಪಕ್ಷಿಗಳ ಜೀವ ಹರಣ ನಡೆಯುತ್ತಿರುವುದಕ್ಕೆ ಸಾರ್ವಜನಿಕ ತೀವ್ರ ವಿಷಾಧ ವ್ಯಕ್ತಪಡಿಸಿದ್ದಾರೆ. ಈಗಲಾದರೂ ಇದನ್ನು ಗಂಭೀರವಾಗಿ ಪರಿಗಣಿಸಿ, ಬೇಟೆಯಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಂಡು ಈ ಕೃತ್ಯ ಮರುಗಳಿಸದಂತೆ ಎಚ್ಚರ ವಹಿಸಬೇಕೆಂದು ಆಗ್ರಹಿಸಿದ್ದಾರೆ.

ಮೈಸೂರಲ್ಲಿ ಮಳೆಯ ಆರ್ಭಟ



ಮೈಸೂರು, ಅ.15(ಜಿಎ)– ಮಳೆಯ ಅಬ್ಬರ ಮೈಸೂರಿನಲ್ಲಿ ಮುಂದುವರೆದಿದ್ದು, ಶನಿವಾರ ರಾತ್ರಿಯೂ ಭಾರೀ ಮಳೆ ಸುರಿಯಿತು.

ಮಧ್ಯಾಹ್ನದಿಂದಲೇ ಮೋಡ ಕವಿದ ವಾತಾವರಣವಿತ್ತು. ರಾತ್ರಿ 9ರ ವೇಳೆಗೆ ಬನ್ನಿಮಂಟಪ, ಉದಯಗಿರಿ, ಹೆಬ್ಬಾಳ್, ವಿಜಯನಗರ, ಜೆಪಿನಗರ, ಶಾರದಾದೇವಿನಗರ, ದಟ್ಟಗಳ್ಳಿ, ತಿಲಕ್‌ನಗರ, ಸರಸ್ವತಿಪುರಂ, ಗೋಕುಲಂ, ಯಾದವಗಿರಿ, ಒಂಟಿ ಕೊಪ್ಪಲ್, ಮೇಟಗಳ್ಳಿ ಸೇರಿದಂತೆ ನಗರದ ಹಲವೆಡೆ ಗುಡುಗು, ಮಿಂಚು ಸಹಿತ ಮಳೆ ಸುರಿಯಿತು.

ಧಾರಾಕಾರ ಮಳೆ ಪರಿಣಾಮ ಗೋಕುಲಂ ಬಡಾವಣೆಯ ಡಾಕ್ಟರ್ಸ್ ಕಾರ್ನರ್ ಬಳಿಯ ಕೆಲ ಮನೆಗಳಿಗೆ ನೀರು ನುಗ್ಗಿ, ನಿವಾಸಿಗಳು ತೊಂದರೆಗೊಳಗಾದರು. ವಿಷಯ ತಿಳಿದು ನಗರಪಾಲಿಕೆಯ ಅಭಯ–2ನೇ ತಂಡದವರು ಧಾವಿಸಿ ನೀರನ್ನು ಹೊರ ಹಾಕಿದರು. ಮತ್ತೊಂದೆಡೆ ಯಾದವಗಿರಿಯ ರೈಲ್ವೇ ಬ್ರಿಡ್ಜ್ ಬಳಿ ಮರವೊಂದು ಬುಡ ಸಹಿತ ಉರುಳಿತು. ನಂತರ ಅಭಯ ತಂಡ ಅದನ್ನು ತೆರವುಗೊಳಿಸಿದೆ.

ರಾತ್ರಿ ಬಹು ಹೊತ್ತಿನವರೆಗೂ ನಿರಂತರವಾಗಿ ಜೋರು ಮಳೆ ಸುರಿಯುತ್ತಿತ್ತು. ಮೈಸೂರಿನಲ್ಲಿ ನಿನ್ನೆ(ಶುಕ್ರವಾರ) ಸಂಜೆ ಆರಂಭವಾದ ಮಳೆ ಇಂದು ಬೆಳಗ್ಗೆವರೆಗೂ ನಿರಂತರವಾಗಿ ಸುರಿಯಿತು. ಇದರಿಂದ 51.51 ಮಿ.ಮೀ ಮಳೆಯಾಗಿದೆ ಎಂದು ವರದಿಯಾಗಿದೆ.

ಅದ್ದೂರಿ ದಸರಾದಿಂದ ಸೆ.28ರಿಂದ ಅ.10ರವರೆಗೆ 13 ದಿನದಲ್ಲಿ 7.93 ಕೋಟಿ ಬಂಪರ್ ಗಳಿಕೆ

ಅದ್ದೂರಿ ದಸರಾದಿಂದ ಸಾರಿಗೆ ಸಂಸ್ಥೆಗೆ ದಾಖಲೆ ಆದಾಯ

ಮೈಸೂರು, ಅ.15(ಎಸ್‌ಪಿಎನ್)– ಈ ಬಾರಿಯ ಅದ್ದೂರಿ ದಸರಾದಿಂದಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ)ಕ್ಕೆ ಬಂಪರ್ ಆದಾಯ ತಂದುಕೊಟ್ಟಿದೆ. ಮೈಸೂರು ವಿಭಾಗದಲ್ಲಿ ಅ.10ರಂದು ಒಂದೇ ದಿನ 4.76 ಕೋಟಿ ರೂ ಸೇರಿದಂತೆ ಸೆ. 28ರಿಂದ ಅ.10ರ (13 ದಿನಗಳು)ವರೆಗೆ 7.93 ಕೋಟಿ ರೂ. ಆದಾಯ ಬಂದಿದೆ.



ದಸರಾ ಉತ್ಸವದ ಅಂಗವಾಗಿ 271 ಹೆಚ್ಚುವರಿ ಸಾರಿಗೆ ಬಸ್‌ಗಳನ್ನು ಓಡಿಸಲಾಗಿತ್ತು. ಇದರಲ್ಲಿ ಮೈಸೂರು ವಿಭಾಗದಿಂದ 179, ಚಾಮರಾಜನಗರ 51, ಮಂಡ್ಯ 41 ಸಾರಿಗೆ ಬಸ್‌ಗಳು ರಾಜ್ಯದ ವಿವಿಧೆಡೆಗೆ ಕಾರ್ಯಾಚರಣೆಗೊಂಡಿದ್ದವು. ಅಂತೆಯೇ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದಿಂದ 226 ಹಾಗೂ ಉಳಿದ 45 ಬಸ್‌ಗಳನ್ನು ನಗರ ಸಾರಿಗೆ ಬಸ್‌ಗಳು ನಿಲ್ದಾಣ ದಿಂದ ಕಾರ್ಯಾಚರಣೆಗೊಂಡಿದ್ದವು ಎಂದು ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಅಶೋಕ್ ಕುಮಾರ್ ತಿಳಿಸಿದ್ದಾರೆ.

12 ದಿನಕ್ಕೆ 3.17 ಕೋಟಿ ರೂ. ಆದಾಯ: ದಸರಾ ವಿಶೇಷ ಕಾರ್ಯಾಚರಣೆ ಅಂಗವಾಗಿ ಸೆ.28ರಿಂದ ಅ.9ರವರೆಗೆ 6,82,551 ಮಂದಿ ಗ್ರಾಹಕರು ಪ್ರಯಾಣಿಸಿ 3.17 ಕೋಟಿ ಆದಾಯ ಬಂದಿದೆ. ಅ.10ರಂದೇ 4.76 ಕೋಟಿ ಯೊಂದಿಗೆ ಒಟ್ಟು 7.93 ಕೋಟಿ ಆದಾಯ ಬಂದಿದೆ. ಈ ಹಿಂದೆ 2019ರಲ್ಲಿ 1.67 ಕೋಟಿ ರೂ. ಮಾತ್ರ ಆದಾಯ ಬಂದಿದ್ದನ್ನು ಸ್ಮರಿಸಬಹುದು.

7.93 ಲಕ್ಷ ಆದಾಯ: ಅಲ್ಲದೆ, ಸೆ.29ರಿಂದ ಅ.9ರವರೆಗೆ ಗಿರಿದರ್ಶಿನಿ, ಜಲದರ್ಶಿನಿ, ದೇವದರ್ಶಿನಿ ಹಾಗೂ ಮೈಸೂರು ದರ್ಶಿನಿ ಪ್ರವಾಸಿಗರ ಪ್ಯಾಕೇಜ್‌ನಡಿ 7,93,220 ರೂ. ಆದಾಯ ಬಂದಿದ್ದು, ಜಲದರ್ಶಿನಿ 17, ಗಿರಿದರ್ಶಿನಿ 20, ದೇವದರ್ಶಿನಿ 5, ಊಟಿ ಪ್ಯಾಕೇಜ್ 4 ಹಾಗೂ ದೀಪಾಲಂಕಾರ ವೀಕ್ಷಣೆಗೆ 7 ಬಸ್ ಸೇರಿದಂತೆ ಒಟ್ಟು 53 ಬಸ್‌ಗಳು ನಿಯೋಜನೆಗೊಂಡಿದ್ದವು. ಇದರಲ್ಲಿ ಒಟ್ಟು 2,020 ಮಂದಿ ಪ್ರಯಾಣ ಮಾಡಿದ್ದಾರೆ ಎಂದು ತಿಳಿಸಿದ ಅವರು, ಅ.10 ರಂದು ಒಂದೇ ದಿನ ಕೆಎಸ್‌ಆರ್‌ಟಿಸಿ ನಿಗಮಕ್ಕೆ ದಸರಾ ವಿಶೇಷ ಬಸ್ ಕಾರ್ಯಾಚರಣೆಯಿಂದ ಒಟ್ಟು 20 ಕೋಟಿಗೂ ಹೆಚ್ಚು ಆದಾಯ ಬಂದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಂಬಾರಿ ಬಸ್; 28.21 ಲಕ್ಷ ರೂ ಆದಾಯ



ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಪ್ರವಾಸಿಗರಿಗೆ ಸೆ.24ರಿಂದ ಅ.12ರವರೆಗೆ ನಿಯೋಜಿಸಿದ್ದ ಡಬ್ಬಲ್ ಡೆಕ್ಕರ್ ಅಂಬಾರಿ ಬಸ್‌ನಲ್ಲಿ 9,121 ಮಂದಿ ಪ್ರಯಾಣಿಸಿದ್ದು 28,21,450 ರೂ. ಆದಾಯ ಬಂದಿದೆ ಅಂಬಾರಿ ಬಸ್ ಮೇಲಿನ ಆಸನದಲ್ಲಿ 5,412 ಪ್ರಯಾಣಿಕರು 350 ರೂ ಟಿಕೆಟ್ ಪಡೆದು ಪ್ರಯಾಣಿಸಿದ್ದರಿಂದ 18,94,200 ರೂ. ಹಾಗೂ ಕೆಳಗಿನ ಹಂತದ ಆಸನ ದಲ್ಲಿ 3,709 ಮಂದಿ 250 ಟಿಕೆಟ್ ಪಡೆದು ಪ್ರಯಾಣಿಸಿದ್ದರು.

ಮುರುಘಾ ಶರಣರಿಂದ ಅಧಿಕಾರ ಹಸ್ತಾಂತರ: ಪೀಠತ್ಯಾಗ ಇಲ್ಲ

ಚಿತ್ರದುರ್ಗ: ಮುರುಘಾ ಮಠದ ಅಧೀನದಲ್ಲಿರುವ ಎಸ್‌ಜೆಎಂ ವಿದ್ಯಾಪೀಠದ ಆಡಳಿತಾತ್ಮಕ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು (ಪವರ್ ಆಫ್ ಅಟಾರ್ನಿ) ಕಾರಾಗೃಹದಲ್ಲಿರುವ ಶಿವಮೂರ್ತಿ ಮುರುಘಾ ಶರಣರು ನಿವೃತ್ತ ನ್ಯಾಯಾಧೀಶ ಎಸ್.ಬಿ.ವಸ್ತ್ರಮಠ ಅವರಿಗೆ ಹಸ್ತಾಂತರಿಸಿದ್ದಾರೆ.

ಹೈಕೋರ್ಟ್ ಅನುಮತಿ ಪಡೆದು ಅಧಿಕಾರ ಪತ್ರ ಹಸ್ತಾಂತರ ಪ್ರಕ್ರಿಯೆಯನ್ನು ಕಾರಾಗೃಹದಲ್ಲಿ ಪೂರ್ಣಗೊಳಿಸಲಾಗಿದೆ. ವಿದ್ಯಾಪೀಠದ ಶಿಕ್ಷಣ ಸಂಸ್ಥೆಗಳ ಆಡಳಿತಾತ್ಮಕ ನಿರ್ಧಾರ, ಚೆಕ್‌ಗಳಿಗೆ ಸಹಿ ಹಾಕುವ ಅಧಿಕಾರವನ್ನು ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿಯೂ ಆಗಿರುವ ವಸ್ತ್ರಮಠ ಕಾನೂನಾತ್ಮಕವಾಗಿ ಪಡೆದಿದ್ದಾರೆ.

ಎಸ್‌ಜೆಎಂ ವಿದ್ಯಾಪೀಠದ ಕಾರ್ಯದರ್ಶಿಗೆ ಅಧಿಕಾರ ಪತ್ರ (ಪವರ್ ಆಫ್ ಅಟಾರ್ನಿ) ನೀಡಬೇಕು ಎಂಬ ನಿಯಮ ಇದೆ. ಈ ಪ್ರಕ್ರಿಯೆಯನ್ನು ಹೈಕೋರ್ಟ್ ಆದೇಶಕ್ಕೆ ಅನುಗುಣವಾಗಿ ಪೂರ್ಣಗೊಳಿಸಲಾಗಿದೆ. ಕಾರಾಗೃಹದಲ್ಲಿ ನ್ಯಾಯಬದ್ಧವಾಗಿ ಪ್ರಕ್ರಿಯೆ ನಡೆದಿದೆ ಎಂದು ಎಸ್.ಬಿ.ವಸ್ತ್ರಮಠ ಮಾಧ್ಯಮಕ್ಕೆ ತಿಳಿಸಿದ್ದಾರೆ.

ಶಿವಮೂರ್ತಿ ಮುರುಘಾ ಶರಣರು ವಿದ್ಯಾಪೀಠದ ಅಧ್ಯಕ್ಷರಾಗಿದ್ದಾರೆ. ಅಧಿಕಾರ ಅವರಲ್ಲಿದ್ದ ಕಾರಣಕ್ಕೆ ವೇತನ ಹಾಗೂ ಇತರ ಆಡಳಿತಾತ್ಮಕ ವಿಚಾರಕ್ಕೆ ತೊಂದರೆ ಉಂಟಾಗಿತ್ತು. ಅವರೇ ಸ್ವ ಇಚ್ಛೆಯಿಂದ ಅಧಿಕಾರವನ್ನು ಹಸ್ತಾಂತರಿಸಿದ್ದಾರೆ. ಇನ್ನು ಮುಂದೆ ಆಡಳಿತ ಸುಲಲಿತವಾಗಿ ನಡೆಯಲಿದೆ ಎಂದು ಮಾಹಿತಿ ನೀಡಿದರು.

ಪೀಠತ್ಯಾಗದ ಪ್ರಶ್ನೆಯೇ ಇಲ್ಲ: ಶಿವಮೂರ್ತಿ ಮುರುಘಾ ಶರಣರು ಪೀಠತ್ಯಾಗ ಮಾಡುವ ಪ್ರಶ್ನೆಯೇ ಉದ್ಭವಿಸಿಲ್ಲ. ಚಿನ್ಮೂಲಾದ್ರಿ ಶ್ರೀಜಗದ್ಗುರು ಮುರುಘ ರಾಜೇಂದ್ರ ಟ್ರಸ್ಟ್‌ಗೆ ಅವರೇ ಅಧ್ಯಕ್ಷರಾಗಿದ್ದು, ಪೀಠಾಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು ಎಸ್.ಬಿ.ವಸ್ತ್ರಮಠ ಸ್ಪಷ್ಟನೆ ನೀಡಿದ್ದಾರೆ.

ಮಠ ಹಾಗೂ ವಿದ್ಯಾಪೀಠ ಎರಡೂ ಪ್ರತ್ಯೇಕವಾಗಿವೆ. ವಿದ್ಯಾಪೀಠದ ಆಡಳಿತಾತ್ಮಕ ವಿಚಾರಕ್ಕೆ ಸಂಬಂಧಿಸಿದ ಅಧಿಕಾರವನ್ನು ಮಾತ್ರ ಹಸ್ತಾಂತರಿಸಲಾಗಿದೆ. ಮಠದ ವಿಚಾರದಲ್ಲಿ ಹಬ್ಬಿರುವ ವದಂತಿಗಳಿಗೆ ಭಕ್ತರು ಕಿವಿಗೊಡುವ ಅಗತ್ಯವಿಲ್ಲ. ಪೀಠಾಧ್ಯಕ್ಷರಾಗಿ ಶರಣರೇ ಮುಂದುವರಿಯಲಿದ್ದಾರೆ ಎಂದು ಹೇಳಿದರು.

ಜಾನಪದ ಗೀತೆಗಳ ಕಲಿಕಾ ಶಿಬಿರ

ಮೈಸೂರು, ಅ. 15– ಮೈಸೂರಿನ ಕುವೆಂಪುನಗರದ ಮಹಾರತ್ನ ಟ್ರಸ್ಟ್ ವತಿಯಿಂದ ಅ. 17 ರಿಂದ 21 ರವರೆಗೆ ಸಂಜೆ 4 ರಿಂದ 6ರವರೆಗೆ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ಜಾನಪದ ಗೀತೆಗಳ ಕಲಿಕಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಜಾನಪದ ವಿದ್ವಾಂಸ ಪ್ರೊ. ಕೃಷ್ಣಮೂರ್ತಿ, ದೇವಾನಂದ ವರ ಪ್ರಸಾದ್, ಡಾ. ಮೈಸೂರು ಗುರುರಾಜು, ಮೈಸೂರು ಮಹಾಲಿಂಗು ಶಿಬಿರದಲ್ಲಿ ಪಾಲ್ಗೊಳ್ಳಲಿದ್ದಾರೆ. ಹೆಚ್ಚಿನ ಮಾಹಿತಿಗೆ ಮೊ. 93430 56766, ಮೊ. 9740287860, 9663661646 ಸಂಪರ್ಕಿಸಬಹುದು.

ಮಾರ್ಬಳ್ಳಿ ಬಳಿ ಬೋನ್‌ಗೆ ಬಿದ್ದ ಚಿರತೆ

ಮೈಸೂರು, ಅ.15(ಎಂಟಿವೈ)– ಮೈಸೂರು ತಾಲೂಕಿನ ಜಯಪುರ ಹೋಬಳಿ ಮಾರ್ಬಳ್ಳಿ ಗ್ರಾಮದಲ್ಲಿ ಉಪಟಳ ನೀಡುತ್ತಿದ್ದ ಚಿರತೆಯೊಂದು ಅರಣ್ಯ ಇಲಾಖೆ ಇಟ್ಟಿದ್ದ ಬೋನ್‌ಗೆ ಬಿದ್ದಿದೆ.



ಕಳೆದ ಕೆಲವು ದಿನಗಳಿಂದ ಗ್ರಾಮದ ಹೊರವಲಯದಲ್ಲಿ ಕಾಣಿಸಿಕೊಂಡು, ಸಾಕುಪ್ರಾಣಿಗಳನ್ನು ಬಲಿ ಪಡೆದು ಸ್ಥಳೀಯರಲ್ಲಿ ಆತಂಕವನ್ನುಂಟು ಮಾಡಿತ್ತು. ಗ್ರಾಮಸ್ಥರು ನೀಡಿದ ದೂರಿನ ಮೇರೆಗೆ ಅರಣ್ಯ ಸಿಬ್ಬಂದಿ ಗ್ರಾಮದ ಮಹಾದೇವಮ್ಮ ಎಂಬುವರ ಜಮೀನಿನಲ್ಲಿ ಎರಡು ದಿನದ ಹಿಂದೆ ಬೋನ್ ಇಟ್ಟಿದ್ದರು. ಬೋನ್‌ನಲ್ಲಿ ನಾಯಿಯೊಂದನ್ನು ಇರಿಸಲಾಗಿತ್ತು. ಆಹಾರ ಅರಸಿ ಬಂದ ಚಿರತೆ ಕಳೆದ ರಾತ್ರಿ ಬೋನ್‌ಗೆ ಬಿದ್ದಿದೆ. ಇದರೊಂದಿಗೆ ಸುಮಾರು 3–4 ವರ್ಷದ ಗಂಡು ಚಿರತೆ ಸೆರೆ ಸಿಕ್ಕಿದ್ದು, ಅದನ್ನು ಬಂಡೀಪುರ ಅರಣ್ಯದ ಮೂಲೆಯೊಳೆ ವಲಯದಲ್ಲಿ ಬಿಡುಗಡೆ ಮಾಡಲಾಗಿದೆ.

ಶ್ರೀಮತಿ ಸುಲೋಚನಮ್ಮ ನಿಧನ

ಮೈಸೂರು, ಅ.15– ಮೈಸೂರಿನ ಇರ್ವಿನ್ ರಸ್ತೆ ಕ್ರಾಸ್‌ನ ನಿವಾಸಿ ದಿ. ಎಂ.ಎಲ್. ಪುಂಡಲೀಕರಾವ್ ಮಾಳೋತ್ಕರ್ ಅವರ ಪತ್ನಿ ಸುಲೋಚನಮ್ಮ (78) ಶನಿವಾರ ಸಂಜೆ ನಿಧನರಾದರು.



ಮೃತರು ಇಬ್ಬರು ಗಂಡು ಮತ್ತು ಓರ್ವ ಹೆಣ್ಣು ಮಗಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12 ಗಂಟೆಗೆ ಚಾಮುಂಡಿ ಬೆಟ್ಟದ ಪಾದದ ಬಳಿಯ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವನ್ಯಜೀವಿ–ಮಾನವ ಸಂಘರ್ಷ ತಡೆಗೆ ತಮಿಳುನಾಡು ಮಾದರಿ ರೋಪ್ ಫೆನ್ಸ್

5 ಕೋಟಿ ರೂ. ವೆಚ್ಚದಲ್ಲಿ ನಾಗರಹೊಳೆ ಅರಣ್ಯ ವ್ಯಾಪ್ತಿಯಲ್ಲಿ ಮೊದಲ ಪ್ರಯೋಗ



ಮಡಿಕೇರಿ,ಅ.15– ವನ್ಯಜೀವಿ–ಮಾನವ ನಡುವಿನ ಸಂಘರ್ಷ ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರ ಗಂಭೀರ ಚಿಂತನೆ ನಡೆಸಿದ್ದು, ತಮಿಳುನಾಡು ಮಾದರಿಯಲ್ಲಿ ಕರ್ನಾಟಕದಲ್ಲಿಯೂ ರೋಪ್ ಫೆನ್ಸ್ ಅನ್ನು ಪ್ರಾಯೋಗಿಕವಾಗಿ 5 ಕೋಟಿ ರೂ. ವೆಚ್ಚದಲ್ಲಿ ನಾಗರಹೊಳೆ ಅರಣ್ಯ ವ್ಯಾಪ್ತಿಯಲ್ಲಿ ಅಳವಡಿಸಲಾಗುತ್ತದೆ ಎಂದು ರಾಜ್ಯ ಅರಣ್ಯ, ಜೀವವೈವಿಧ್ಯ ಮತ್ತು ಪರಿಸರ ಇಲಾಖೆಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಜಾವೇದ್ ಅಕ್ತರ್ ತಿಳಿಸಿದ್ದಾರೆ.

ನಗರದಲ್ಲಿ ಕೊಡಗು ಕಾಫಿ ಬೆಳೆಗಾರರ ಸಂಘದ 143ನೇ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಮಾತನಾಡಿದ ಜಾವೇದ್ ಅಕ್ತರ್, ಪ್ರಮುಖವಾಗಿ ಕಾಡಾನೆಗಳು ನಾಡಿಗೆ ಬಾರದಂತೆ ತಡೆಯುವ ನಿಟ್ಟಿನಲ್ಲಿ ಮುಖ್ಯಮಂತ್ರಿಯೊಂದಿಗೆ ಚರ್ಚಿಸಲಾಗಿದ್ದು, ಬಜೆಟ್‌ನಲ್ಲಿ ನಿಗದಿಪಡಿಸಿರುವ 5 ಕೋಟಿ ರೂಗೆ ಹೆಚ್ಚುವರಿಯಾಗಿ ಮತ್ತೆ 5 ಕೋಟಿ ರೂ. ಅನುದಾನವನ್ನು ಕಾಡಾನೆ ಹಾವಳಿ ತಡೆಗೆ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದರು.

ತಮಿಳುನಾಡು ರಾಜ್ಯದಲ್ಲಿ ಈಗಾಗಲೇ ಅಳವಡಿಸಿ ಯಶಸ್ವಿಯಾಗಿರುವ ರೋಪ್ ಫೆನ್ಸ್ ತಂತ್ರಜ್ಞಾನವನ್ನು ಈ ಅನುದಾನ ಬಳಸಿಕೊಂಡು ಶೀಘ್ರದಲ್ಲಿಯೇ ಪ್ರಾಯೋಗಿಕವಾಗಿ ರಾಜ್ಯದ ನಾಗರಹೊಳೆಯಲ್ಲಿಯೂ ಅಳವಡಿಸಲಾಗುತ್ತದೆ ಎಂದರಲ್ಲದೆ, ವನ್ಯಜೀವಿಗಳಿಂದ ಕೃಷಿ ಜಮೀನು ಹಾನಿಗೆ ಶೇ.100ರಷ್ಟು ಪರಿಹಾರ ನೀಡಲು ವಾಸ್ತವ ನೆಲೆಗಟ್ಟಿನಲ್ಲಿ ಅಸಾಧ್ಯ ಎಂದು ಸ್ಪಷ್ಟಪಡಿಸಿದರು.

ಭಾರತೀಯ ಕಾಫಿಯನ್ನು ಆಂತರಿಕ ಬಳಕೆಗೆ ಹೆಚ್ಚು ಬಳಸಬೇಕು. ವಿದೇಶಿ ಸಂಸ್ಥೆಗಳೂ ಈಗಾಗಲೇ ಭಾರತದಾದ್ಯಂತ ಕಾಫಿ ಮಳಿಗೆ ಪ್ರಾರಂಭಿಸಿವೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಕಾಫಿ ದೊರಕುವಂತಾಗಿದೆ. ಹೀಗಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಕಾಫಿಯ ಆಂತರಿಕ ಬಳಕೆ ಹೆಚ್ಚಾಗಿಲ್ಲ. ಹಳ್ಳಿಗಳಲ್ಲಿಯೂ ನಗರಗಳ ಮಾದರಿಯಲ್ಲಿ ಕಾಫಿ ಪೇಯ ಮಾರಾಟದ ಸಣ್ಣ ಅಂಗಡಿಗಳು ತೆರೆದರೆ ಕಾಫಿಯ ಬಳಕೆ ಹೆಚ್ಚಾಗುವ ನಿರೀಕ್ಷೆಯಿದೆ ಎಂದು ಜಾವೇದ್ ಅಕ್ತರ್ ಅಭಿಪ್ರಾಯಪಟ್ಟರು.

2015–16ನೇ ಸಾಲಿನಲ್ಲಿ 3.05 ಮೆಟ್ರಿಕ್ ಟನ್ ಉತ್ಪಾದಿಸಲ್ಪಡುತ್ತಿದ್ದ ಭಾರತೀಯ ಕಾಫಿ 2022–23ನೇ ಸಾಲಿನಲ್ಲಿ ದಾಖಲೆಯ 4 ಲಕ್ಷ ಮೆಟ್ರಿಕ್ ಟನ್ ಉತ್ಪಾದನೆಯಾಗುವ ನಿರೀಕ್ಷೆಯಿದೆ. ಇದು ಕಾಫಿ ಬೆಳೆಗಾರರಿಗೆ ಆರ್ಥಿಕವಾಗಿಯೂ ಉತ್ತಮ ಮಾರ್ಗವಾಗುವ ಆಶಾಕಿರಣಕ್ಕೆ ಕಾರಣವಾಗಿದೆ ಎಂದು ಭರವಸೆ ನುಡಿದ ಜಾವೇದ್ ಅಕ್ತರ್, ಭಾರತದಲ್ಲಿನ ಅರೆಬಿಕಾ ಕಾಫಿ ಇಂದಿಗೂ ವಿಶ್ವದಲ್ಲಿಯೇ ಅತ್ಯುತ್ತಮ ಕಾಫಿ ಎಂಬ ಹೆಗ್ಗಳಿಕೆಯನ್ನು ಉಳಿಸಿಕೊಂಡಿರುವುದು ಭಾರತದ ಕಾಫಿಯ ಗುಣಮಟ್ಟದ ಶ್ರೇಷ್ಠತೆಗೆ ಉದಾಹರಣೆಯಾಗಿದೆ ಎಂದರು.

ಉಪಾಸಿಯ ಅಧ್ಯಕ್ಷ ಜೆಫ್ರಿ ರೆಬೆಲ್ಲೋ ಮಾತನಾಡಿ, ಕೊಲಂಬಿಯಾ, ಇಥಿಯೋಪಿಯಾ ಮಾದರಿಯಲ್ಲಿಯೇ ಭಾರತದ ಗ್ರೀನ್ ಕಾಫಿಯನ್ನು ಭಾರತೀಯ ಕಾಫಿಯ ಮಾದರಿಯನ್ನಾಗಿ ಕಾಫಿಯನ್ನು ಜಾಗತಿಕ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಬಗ್ಗೆ ಯೋಜನೆ ರೂಪಿಸಲಾಗಿದೆ. ಭಾರತದ ಅತ್ಯುತ್ತಮ ಗುಣಮಟ್ಟದ ಕಾಫಿಗೆ ಜಾಗತಿಕ ಮಟ್ಟದಲ್ಲಿಯೂ ಮೌಲ್ಯವರ್ಧನೆಯೊಂದಿಗೆ ಭಾರತೀಯ ಶುದ್ಧ ಕಾಫಿಗೆ ಬೇಡಿಕೆ ವೃದ್ಧಿಯಾಗಲಿದೆ ಎಂದು ಮಾಹಿತಿ ನೀಡಿದರು. ಭಾರತೀಯ ಕಾಫಿ ಈಗಾಗಲೇ ತನ್ನ ಸ್ವಾದದ ಮೂಲಕ ವಿಶ್ವಮಟ್ಟದಲ್ಲಿ ರಾಯಲ್ ಕಾಫಿ ಎಂದು ಮನ್ನಣೆ ಹೊಂದುವಂತಾಗಿದೆ ಎಂದು ಜೆಫ್ರಿ ರೆಬೆಲ್ಲೋ ತಿಳಿಸಿದರು.

ಕೊಡಗು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎನ್. ನಿರಂಜನ ಮೂರ್ತಿ ಮಾತನಾಡಿ, ಕಾಡಿನಲ್ಲಿ ಕಳೆದ 10 ವರ್ಷಗಳಿಗೆ ಹೋಲಿಸಿದರೆ ಬಿದಿರು ಮೆಳೆ ಪ್ರಮಾಣ ಕಡಿಮೆಯಾಗಿರುವುದು ಕೂಡ ಕಾಡಾನೆಗಳು ನಾಡಿಗೆ ಬರುತ್ತಿರುವುದಕ್ಕೆ ಕಾರಣವಾಗಿದೆ. ಇದನ್ನು ನಿವಾರಿಸಲು ಕೊಡಗು ಜಿಲ್ಲೆಯಲ್ಲಿ 15 ಸಾವಿರ ಮೆಟ್ರಿಕ್ ಟನ್‌ಗಳಷ್ಟು ಬಿದಿರು ಸಸಿ ನೆಡಲಾಗಿದೆ. 1 ಸಾವಿರದಷ್ಟು ಕೆರೆಗಳು ಕಾಡಿನೊಳಗಿದ್ದು ಇವುಗಳಿಗೂ ಕಾಯಕಲ್ಪ ನೀಡಲಾಗುತ್ತಿದೆ ಎಂದರು. ಕೊಡಗು ಜಿಲ್ಲೆಯಲ್ಲಿರುವ 1300 ಕಾಡಾನೆಗಳ ಪೈಕಿ 200ರಷ್ಟು ಆನೆಗಳು ನಾಡಿಗೆ ಹೆಚ್ಚಾಗಿ ಬರುತ್ತಿದ್ದು ಸಮಸ್ಯೆ ಸೃಷ್ಟಿಸುತ್ತಿವೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿರುವ ಹುಲಿ ದಾಳಿಯನ್ನು ತಪ್ಪಿಸಲು ಈಗಾಗಲೇ 3 ಹುಲಿಗಳ ಸೆರೆಗೆ ಅರಣ್ಯ ಇಲಾಖೆ ಮುಂದಾಗಿದೆ ಎಂದು ಮಾಹಿತಿ ನೀಡಿದರು. ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗಿನಲ್ಲಿ ಅರಣ್ಯ ಇಲಾಖೆಯ ಕ್ಷಿಪ್ರ ಕಾರ್ಯಪಡೆ ಅತ್ಯಂತ ವೇಗವಾಗಿ ಸಂಕಷ್ಟಕ್ಕೊಳಗಾದವರಿಗೆ ಸ್ಪಂದಿಸುತ್ತಿದೆ ಎಂದು ಅವರು ಹೇಳಿದರು.

ಕೊಡಗು ಬೆಳೆಗಾರರ ಸಂಘದ ಅಧ್ಯಕ್ಷ ಬಿ.ವಿ.ಮೋಹನ್ ದಾಸ್, ಕೊಡಗಿನಲ್ಲಿ ಕೃಷಿಕರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಬಗ್ಗೆ ಗಮನ ಸೆಳೆದರು. ಸರ್ಫೇಸಿ ಕಾನೂನಿನಿಂದಾಗಿ ಬ್ಯಾಂಕ್‌ಗಳು ಬೆಳೆಗಾರರಿಗೆ ಆರ್ಥಿಕ ಹೊಡೆತ ನೀಡುತ್ತಿದೆ. ಕಾಫಿಯನ್ನು ಕೃಷಿ ಬೆಳೆ ಎಂದು ಪರಿಗಣಿಸಿ ತೆರಿಗೆಯಿಂದ ಹೊರತಾಗಿಸಬೇಕು ಎಂದು ಸರ್ಕಾರಕ್ಕೆ ಒತ್ತಾಯಿಸಲಾಗಿದೆ ಎಂದು ಹೇಳಿದರು. ಪ್ರಧಾನಮಂತ್ರಿ ಫಸಲು ಭಿಮ ಯೋಜನೆಯಲ್ಲಿ ಇತರ ಬೆಳೆಗಳನ್ನು ಪರಿಗಣಿಸಿರುವಂತೆಯೇ ಕಾಫಿಯನ್ನೂ ವಿಮೆಯಡಿ ತರಬೇಕೆಂದು ಬೆಳೆಗಾರರ ಸಂಘಟನೆಗಳು ಸರ್ಕಾರಕ್ಕೆ ಒತ್ತಡ ಹೇರಿದೆ ಎಂದೂ ಮೋಹನ್ ದಾಸ್ ವಿವರಿಸಿದರು.

ಕೊಡಗು ಬೆಳೆಗಾರರ ಸಂಘದ ಕಾರ್ಯದರ್ಶಿ ಸಿ.ಕೆ.ಬೆಳ್ಯಪ್ಪ, ಉಪಾಧ್ಯಕ್ಷ ಸಿ.ಯು. ಅಶೋಕ್ ವೇದಿಕೆಯಲ್ಲಿದ್ದರು. ಜಿಲ್ಲೆಯ ವಿವಿಧೆಡೆಗಳಿಂದ ಕೊಡಗು ಬೆಳೆಗಾರರ ಸಂಘದ ಸದಸ್ಯರು 143ನೇ ವಾರ್ಷಿಕ ಮಹಾಸಭೆಯಲ್ಲಿ ಹಾಜರಿದ್ದರು.

ಅ.18, ಮೈಸೂರು ಕೊಡವ ಸಮಾಜದಲ್ಲಿ ಕಾವೇರಿ ಸಂಕ್ರಮಣ

ಮೈಸೂರು, ಅ.15– ಮೈಸೂರಿನ ಕೊಡವ ಸಮಾಜದ ವತಿಯಿಂದ ಅ.18 ರಂದು ವಿಜಯನಗರದಲ್ಲಿರುವ ಕೊಡವ ಸಮಾಜದಲ್ಲಿ ಕಾವೇರಿ ಸಂಕ್ರಮಣ ಮತ್ತು ತೀರ್ಥಸ್ವರೂಪಿಣಿ ಕಾವೇರಿ ಮಾತೆಗೆ ಪೂಜೆ ಸಲ್ಲಿಸಿ ತಲಕಾವೇರಿಯ ತೀರ್ಥೋದ್ಭವವಾದ ತೀರ್ಥ ವಿತರಣ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಅಂದು ಬೆಳಗ್ಗೆ 10 ಗಂಟೆಗೆ ಕಣಿ ಪೂಜೆ ನಡೆಯಲಿದ್ದು, ಪೂಜೆಯ ನಂತರ ತೀರ್ಥವನ್ನು ವಿತರಿಸಲಾಗುವುದು ಎಂದು ಕೊಡವ ಸಮಾಜದ ಅಧ್ಯಕ್ಷ ಮೇಚಂಡ ಎಂ. ಶಶಿ ಪೊನ್ನಪ್ಪ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಿಂದೂಗಳ ಟಾರ್ಗೆಟ್ ಆಡಿಯೋ ವೈರಲ್

ನಗರಸಭಾ ಸದಸ್ಯ, ರಿಯಲ್ ಎಸ್ಟೇಟ್ ಉದ್ಯಮಿ ಬಂಧನ?

ಮಡಿಕೇರಿ ಅ.15– ಹಿಂದೂಗಳನ್ನು ಗುರಿಯಾಗಿಸಿಕೊಂಡು ನೀಡಿರುವ ಆಡಿಯೋವೊಂದು ವೈರಲ್ ಆಗಿ ಕೊಡಗು ಜಿಲ್ಲೆಯಲ್ಲಿ ಭಾರೀ ಸಂಚಲನವನ್ನೇ ಸೃಷ್ಟಿಸಿದೆ.

ಈ ಸಂಬಂಧ ನಗರಸಭಾ ಸದಸ್ಯ ಮತ್ತು ರಿಯಲ್ ಎಸ್ಟೇಟ್ ಉದ್ಯಮಿಯನ್ನು ನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ ಎಂದು ಖಾಸಗಿ ಚಾನಲ್‌ನಲ್ಲಿ ವರದಿಯಾಗಿದೆ.

ಪೆಟ್ರೋಲ್ ಬಾಂಬ್ ಬಳಸಿ ಹಿಂದೂಗಳನ್ನು ಹತ್ಯೆ ಮಾಡಬೇಕು. ಕೊಡಗು ಜಿಲ್ಲೆಯ 50ಕ್ಕೂ ಅಧಿಕ ಸ್ಥಳಗಳಲ್ಲಿ ಬಾಂಬ್ ಸ್ಫೋಟಿಸಿ ಸಮಾಜದಲ್ಲಿ ಭಯದ ವಾತಾವರಣ ನಿರ್ಮಾಣ ಮಾಡಬೇಕು ಎಂಬ ಮೂರು ನಿಮಿಷಗಳ ಆಡಿಯೋ ಸಾಮಾಜಿಕ ಜಾಲ ತಾಣಗಳಲ್ಲಿ ವೈರಲ್ ಆಗಿತ್ತು. ನಾವು ಸತ್ತರೂ ಪರವಾಗಿಲ್ಲ. ಹಿಂದೂಗಳನ್ನು ಮಾತ್ರ ಬಿಡಬಾರದು. ಪೆಟ್ರೋಲ್ ಬಾಂಬ್ ಸ್ಫೋಟಿಸಿ ಹತ್ಯೆ ಮಾಡಬೇಕು ಎಂದು ಇವರಿಬ್ಬರು ಮೊಬೈಲ್ ಸಂಭಾಷಣೆಯಲ್ಲಿ ಚರ್ಚಿಸಿದ್ದಾರೆ ಎನ್ನಲಾಗಿದೆ. ಈ ಕುರಿತು ಶೇಷಪ್ಪ ರೈ ಎಂಬುವವರು ಸಾಕ್ಷಿ ಸಮೇತ ನೀಡಿದ ದೂರಿನ ಹಿನ್ನೆಲೆಯಲ್ಲಿ ಇಂದು ಇಬ್ಬರನ್ನು ನಗರ ಠಾಣಾ ಪೊಲೀಸರು ಬಂಧಿಸಿದ್ದಾರೆ. ಮಡಿಕೇರಿ ನಗರ ಠಾಣಾ ಪೊಲೀಸರು ಈ ಆಡಿಯೋದಲ್ಲಿರುವ ಧ್ವನಿ ಇವರದ್ದೇ? ಇದರ ಅಸಲಿಯತ್ತೇನು? ಇದರ ಹಿಂದೆ ಇರುವ ಕೈಗಳು ಯಾವುದು ಎಂಬ ವಿಷಯಗಳ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಹಿಂದೂ ಪರ ಸಂಘಟನೆಗಳ ಹಲವು ಕಾರ್ಯಕರ್ತರು ನಗರ ಠಾಣೆಯ ಎದುರು ಜಮಾಯಿಸಿ ಆರೋಪಿಗಳ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ನ.1ರಿಂದ ಮೈಸೂರು ಕೊಡಗು ಸಹಕಾರ ಸಂಘದಲ್ಲಿ ಯಶಸ್ವಿನಿ ಯೋಜನೆಗೆ ನೋಂದಣಿ

1650 ಖಾಯಿಲೆಗಳಿಗೆ ಚಿಕಿತ್ಸೆ, ಶುಲ್ಕ ಪಾವತಿಸಿ ಸದಸ್ಯರಾಗಿ, ಪ್ರಯೋಜನ ಪಡೆಯಿರಿ

ಮೈಸೂರು, ಅ.15– ರಾಜ್ಯ ಸರ್ಕಾರ 'ಯಶಸ್ವಿನಿ' ಯೋಜನೆಯನ್ನು ಪರಿಷ್ಕರಿಸಿ ನ.1 ರಿಂದ ಜಾರಿಗೊಳಿಸಲು ನಿರ್ಧರಿಸಿದ್ದು, ಈ ಹಿನ್ನೆಲೆಯಲ್ಲಿ ಮೈಸೂರಿನ ಕೊಡಗು ಸಹಕಾರ ಸಂಘವು ಸರ್ಕಾರದ ಮಾರ್ಗಸೂಚಿಯಂತೆ ಸದಸ್ಯರ ನೋಂದಣಿ ಕಾರ್ಯ ಆರಂಭಿಸಲು ಮುಂದಾಗಿದೆ.

ಯಶಸ್ವಿನಿ ಯೋಜನೆಯು 2023 ಜನವರಿ 1 ರಿಂದ 31–12–2023 ರವರೆಗೆ ಜಾರಿಯಲ್ಲಿರುತ್ತದೆ. ಈ ಯೋಜನೆಯಡಿ 1650 ಖಾಯಿಲೆಗಳಗೆ ಚಿಕಿತ್ಸೆ ಲಭ್ಯವಾಗಲಿದ್ದು, ನೋಂದಾಯಿತ ಸದಸ್ಯರು ಈ ಕಾರ್ಡ್‌ನ್ನು ಬಳಸಿಕೊಂಡು ಐದು ಲಕ್ಷದವರೆಗೆ ನಗದು ರಹಿತ ಚಿಕಿತ್ಸೆಗಳನ್ನು ಪಡೆಯಬಹುದಾಗಿದೆ.

ಯಶಸ್ವಿನಿ ಯೋಜನೆಯಡಿ ಮುಖ್ಯವಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳು, ಕಿವಿ, ಮೂಗು, ಗಂಟಲು ವ್ಯಾಧಿಗಳು, ಕರುಳಿನ ಖಾಯಿಲೆಗಳು, ನರಗಳಿಗೆ ಸಂಬಂಧಿಸಿದ ಖಾಯಲೆಗಳು, ಕಣ್ಣಿನ ಖಾಯಿಲೆಗಳು, ಮೂಳೆ ರೋಗಗಳು, ಸ್ತ್ರೀಯರಿಗೆ ಸಂಬಂಧಿಸಿದ ಖಾಯಲೆಗಳಿಗೆ ಚಿಕಿತ್ಸೆ ನೀಡಲಾಗುವುದು. 2003ರಲ್ಲಿ ಸಹಕಾರ ಇಲಾಖೆಯಿಂದ ಯಶಸ್ವಿನಿ ಯೋಜನೆಯನ್ನು ಪ್ರಾರಂಭಿಸಲಾಗಿತ್ತು. ಇದು 2017–18 ರವರೆಗೆ ಜಾರಿಯಲ್ಲಿತ್ತು. ನಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವರ್ಗಾವಣೆಗೊಂಡು, 2018 ಮೇ 31 ರಂದು ಯೋಜನೆಯು ಸ್ಥಗಿತಗೊಂಡಿತ್ತು.

ಸಹಕಾರಿಗಳ ಮತ್ತು ರೈತರ ಒತ್ತಾಯದ ಮೇರೆಗೆ ರಾಜ್ಯ ಸರ್ಕಾರ 2022–23ನೇ ಸಾಲಿನ ಬಜೆಟ್‌ನಲ್ಲಿ ಯಶಸ್ವಿನಿ ಯೋಜನೆಯನ್ನು ಪರಿಣಾಮಕಾರಿಯಾಗಿ ರೂಪಿಸಿ ಮರು ಜಾರಿಗೊಳಿಸಲು ತೀರ್ಮಾನಿಸಿ, 300 ಕೋಟಿ ರೂ.ಗಳನ್ನು ಇದಕ್ಕಾಗಿ ಮೀಸಲಿಟ್ಟಿತ್ತು ಜೊತೆಗೆ ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ಸಹಕಾರ ಇಲಾಖೆಯಿಂದ ಅನುಷ್ಠಾನಗೊಳಿಸುವಂತೆ ಆದೇಶಿಸಿತು.

ರಾಜ್ಯ ಸರ್ಕಾರ ಯಶಸ್ವಿನಿ ಯೋಜನೆಯನ್ನು ಪರಿಷ್ಕರಿಸಿ ಮರು ಜಾರಿಗೊಳಿಸಿರುವ ಸಲುವಾಗಿ ಕೆಲವು ಮಾರ್ಗಸೂಚಿಗಳನ್ನು ಹೊರಡಿಸಿದ್ದು, ಅದರಂತೆ ಸದಸ್ಯರುಗಳು ನೋಂದಣಿ ಮಾಡಿಕೊಳ್ಳುವಂತೆ ಮನವಿ ಮಾಡಲಾಗಿದೆ.

ಗ್ರಾಮೀಣ ಸಹಕಾರ ಸಂಘಗಳ, ಸ್ವಸಹಾಯ ಗುಂಪುಗಳು ಗರಿಷ್ಟ ನಾಲ್ಕು ಸದಸ್ಯರ ಒಂದು ಕುಟುಂಬಕ್ಕೆ ವಾರ್ಷಿಕ 500 ರೂ.ಗಳ ವಂತಿಗೆ ಪಾವತಿಸಿ ಸದಸ್ಯತ್ವ ಪಡೆಯಬೇಕು. ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರು ಶೇ.20 ರಷ್ಟು ಹೆಚ್ಚುವರಿಯಾಗಿ ಅಂದರೆ ಪ್ರತಿ ಹೆಚ್ಚುವರಿ ಸದಸ್ಯರು 100 ರೂ. ಶುಲ್ಕ ಪಾವತಿಸಿ ಹೆಸರು ನೋಂದಾಯಿಸಿಕೊಳ್ಳಬಹುದಾಗಿದೆ.

ನಗರ ಸಹಕಾರ ಸಂಘಗಳಿಗೆ ನಾಲ್ವರು ಸದಸ್ಯರ ಕುಟುಂಬವೊಂದಕ್ಕೆ ವಾರ್ಷಿಕ ಒಂದು ಸಾವಿರ ರೂ.ವಂತಿಗೆ, ನಾಲ್ಕಕ್ಕಿಂತ ಹೆಚ್ಚಿನ ಸದಸ್ಯರುಳ್ಳ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೆ ಶೇ.20 ರಷ್ಟು ಅಂದರೆ ಹೆಚ್ಚುವರಿ ಸದಸ್ಯರು 200 ರೂ. ವಂತಿಗೆ ಪಾವತಿಸಿ ಈ ಯೋಜನೆಯ ಲಾಭ ಪಡೆಯಬಹುದಾಗಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸದಸ್ಯರಿಗೆ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಯಡಿ ಸಹಾಯ ಧನವನ್ನು ನೀಡುವ ಮೂಲಕ ಅವರ ವಾರ್ಷಿಕ ಸದಸ್ಯತ್ವದ ವಂತಿಗೆಯನ್ನು ಸರ್ಕಾರವೇ ಭರಿಸಲಿದೆ. ಸಹಕಾರಿ ಮೀನುಗಾರರು, ಸಹಕಾರಿ ಬೀಡಿ ಕಾರ್ಮಿಕರು ಮತ್ತು ಸಹಕಾರಿ ನೇಕಾರರು ಕೂಡ ಈ ಯೋಜನೆಗೆ ಅರ್ಹರಾಗಿದ್ದಾರೆ.

ಯಶಸ್ವಿನಿ ಯೋಜನೆಯಡಿ ಸದಸ್ಯರಾಗಲು ಯಾವುದೇ ವಯೋಮಿತಿಯ ನಿರ್ಬಂಧವಿರುವುದಿಲ್ಲ. ಈ ಯೋಜನೆಯು 2022 ನ.1 ರಿಂದ ಜಾರಿಗೆ ಬರಲಿದೆ.

ಯಶಸ್ವಿನಿ ಯೋಜನೆಯಡಿ ಸದಸ್ಯರು ಜನರಲ್ ವಾರ್ಡಿನಲ್ಲಿ ಚಿಕಿತ್ಸೆ ಪಡೆಯಲು ಅರ್ಹರಾಗಿರುತ್ತಾರೆ. ಯಶಸ್ವಿನಿ ಯೋಜನೆಯ ನೆಟ್‌ವರ್ಕ್ ಆಸ್ಪತ್ರೆಯಲ್ಲಿ ಒದಗಿಸಿರುವ ಚಿಕಿತ್ಸಾ ಸೌಲಭ್ಯದಲ್ಲಿ ಔಷಧಿ ವೆಚ್ಚ, ಆಸ್ಪತ್ರೆ ವೆಚ್ಚ, ಶಸ್ತ್ರಚಿಕಿತ್ಸೆಯ ವೆಚ್ಚ, ಆಪರೇಶನ್ ಥಿಯೇಟರ್ ಬಾಡಿಗೆ, ಅರವಳಿಕೆ ತಜ್ಞರ ಫೀ ಇತ್ಯಾದಿ ವೆಚ್ಚ ಒಳಗೊಂಡಿರುತ್ತದೆ ಎಂದು ಸರ್ಕಾರ ಹೊರಡಿಸಿರುವ ಮಾರ್ಗಸೂಚಿಯಲ್ಲಿ ತಿಳಿಸಲಾಗಿದೆ.

ನೆಟ್‌ವರ್ಕ್ ಆಸ್ಪತ್ರೆಯಲ್ಲಿ ಯಶಸ್ವಿನಿ ಸದಸ್ಯರಿಗೆ ಹೊರ ರೋಗಿ ಚಿಕಿತ್ಸೆ (ಓಪಿಡಿ) ಗರಿಷ್ಟ 200 ರೂ.ಗಳ (ಮೂರು ತಿಂಗಳ ಅವಧಿಗೆ) ಮಿತಿ ನಿಗದಿ ಪಡಿಸಲಾಗಿದ್ದು, ನೆಟ್‌ವರ್ಕ್ ಆಸ್ಪತ್ರೆಗಳು ಇದಕ್ಕಿಂತ ಹೆಚ್ಚಿನ ಶುಲ್ಕವನ್ನು ಸದಸ್ಯರಿಗೆ ವಿಧಿಸುವಂತಿಲ್ಲ. ಈ ಪೈಕಿ 100 ರೂ.ಗಳನ್ನು ಯಶಸ್ವಿನಿ ಟ್ರಸ್ಟ್ ವತಿಯಿಂದ ಪಾವತಿಸಲಾಗುವುದು.

ಆಸಕ್ತ ಸಂಘದ ಸದಸ್ಯರು ನ.1 ರಿಂದ (ಬೆಳಗ್ಗೆ 10 ರಿಂದ ಸಂಜೆ 6 ರವರೆಗೆ) ಜಯಲಕ್ಷ್ಮೀಪುರನಲ್ಲಿರುವ ಸಂಘದ ಕಛೇರಿಗೆ ಆಗಮಿಸಿ ಯಶಸ್ವಿನಿ ಯೋಜನೆಗೆ ನೋಂದಣಿ ಮಾಡಿಸಿಕೊಳ್ಳುವಂತೆ ಕೊಡಗು ಸಹಕಾರ ಸಂಘದ ಕಾರ್ಯ ನಿರ್ವಾಹಕ ನಿರ್ದೇಶಕ ಪೂಚಂಡ ಲವ್ಲಿ ಅಪ್ಪಯ್ಯ ತಿಳಿಸಿದ್ದಾರೆ.

ನಾಳೆ ಶ್ರೀ ಕ್ಷೇತ್ರ ತಲಕಾವೇರಿಯಲ್ಲಿ ತೀರ್ಥೋದ್ಭವ

ಮಡಿಕೇರಿ, ಅ.15– ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ ಇಲಾಖೆ ವತಿಯಿಂದ ಶ್ರೀ ಭಗಂಡೇಶ್ವರ–ತಲಕಾವೇರಿ ದೇವಾಲಯದಲ್ಲಿ ಅ.17 ರಂದು ರಾತ್ರಿ 7 ಗಂಟೆ 21 ನಿಮಿಷಕ್ಕೆ ಸಲ್ಲುವ ಮೇಷ ಲಗ್ನದಲ್ಲಿ ಶ್ರೀ ಮೂಲ ಕಾವೇರಿ ತುಲಾ ಸಂಕ್ರಮಣ ಪವಿತ್ರ ತೀರ್ಥೋದ್ಭವದ ಪುಣ್ಯ ಕಾಲ ನೆರವೇರಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕರಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚುರಂಜನ್, ಎಂ.ಪಿ.ಸುಜಾ ಕುಶಾಲಪ್ಪ ಎಸ್.ಎಲ್.ಭೋಜೇಗೌಡ, ಆಯನೂರು ಮಂಜುನಾಥ್, ಸಂಸದ ಪ್ರತಾಪ್ ಸಿಂಹ, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ, ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವೆ ಶಶಿಕಲಾ ಜೊಲ್ಲೆ, ಭಾಗಮಂಡಲ ಗ್ರಾ.ಪಂ. ಅಧ್ಯಕ್ಷೆ ಪೆಮಿತ, ಉಪಾಧ್ಯಕ್ಷರಾದ ಹೊಸೂರು ಸತೀಶ್ ಕುಮಾರ್ ಅವರು ಭಾಗವಹಿಸಲಿದ್ದಾರೆ.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್, ಡಿಸಿ ಡಾ. ಬಿ.ಸಿ.ಸತೀಶ, ಜಿ.ಪಂ ಸಿಇಓ ಭಂವರ್ ಸಿಂಗ್ ಮೀನಾ, ಎಡಿಸಿ ಡಾ. ಯತೀಶ್ ಉಲ್ಲಾಳ್, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಆಯುಕ್ತೆ ರೋಹಿಣಿ ಸಿಂಧೂರಿ, ಎಸ್ಪಿ ಅಯ್ಯಪ್ಪ, ಹೆಚ್ಚುವರಿ ಡಿಸಿ ಡಾ.ನಂಜುಂಡೇಗೌಡ, ಭಗಂಡೇಶ್ವರ ತಲ ಕಾವೇರಿ ದೇವಾಲಯದ ಸಿಇಓ ಬಿ.ಎಂ.ಕೃಷ್ಣಪ್ಪ ಪಾಲ್ಗೊಳ್ಳಲಿದ್ದಾರೆ.

ನಿಟ್ರೆಯಲ್ಲಿ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮ'

ಶಾಸಕರು, ಅಧಿಕಾರಿಗಳ ಮುಂದೆ ಸಮಸ್ಯೆಗಳ ಸುರಿಮಳೆ

ಜನರ ಸಮಸ್ಯೆ ಶೀಘ್ರ ಪರಿಹರಿಸಲು ಶಾಸಕರ ನಿರ್ದೇಶನ

ಬೇಗೂರು, ಅ.15– ಗುಂಡ್ಲುಪೇಟೆ ತಾಲೂಕಿನ ನಿಟ್ರೆ ಗ್ರಾಮದ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿಂದು ಕ್ಷೇತ್ರ ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಹಾಗೂ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಸಮ್ಮುಖದಲ್ಲಿ ನಡೆದ 'ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮ'ದಲ್ಲಿ ಜನರು ಸಮಸ್ಯೆಗಳ ಸುರಿಮಳೆಗೈದರು.



ಸಭೆಯ ಆರಂಭದಲ್ಲೇ ರಸ್ತೆ, ಆಸ್ಪತ್ರೆ, ಬಸ್ ಸೌಕರ್ಯ, ಬೆಳೆ ವಿಮೆ ಪರಿಹಾರ, ವಿದ್ಯುತ್ ಕಂಬಗಳ ಅಳವಡಿಕೆ, ಅಕ್ರಮ ಗಣಿಗಾರಿಕೆಗೆ ತಡೆ, ಸಮುದಾಯ ಭವನಗಳ ದುರಸ್ತಿ, ಹಾಸ್ಟೆಲ್ ಸೌಲಭ್ಯ, ಶಾಲಾ ಕೊಠಡಿಗಳ ಬೇಡಿಕೆ, ವಸತಿ ಸೌಲಭ್ಯ, ಕೃಷಿ ಇಲಾಖೆಯ ಸವಲತ್ತುಗಳು, ಉದ್ಯೋಗ ಖಾತರಿ ಯೋಜನೆಯಡಿ ಕೂಲಿ ಪಾವತಿ, ಜಲ ಜೀವನ್ ಮಿಷನ್ ಸಮರ್ಪಕ ಅನುಷ್ಠಾನ, ಖಾತೆ ಸಂಬಂಧಿಸಿದ ದೂರುಗಳು ಸೇರಿದಂತೆ ಹಲವು ಸಮಸ್ಯೆಗಳನ್ನು ಜನರು ಸಭೆಯ ಮುಂದಿಟ್ಟರು. ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಜನರಿಂದ ಅಹವಾಲು ಆಲಿಸಿ, ಸಾಕಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ. ಜನರು ಹಲವು ಸಮಸ್ಯೆಗಳನ್ನು ಪ್ರಸ್ತಾಪಿಸಿದ್ದಾರೆ. ಆಯಾ ಇಲಾಖೆಗಳಿಗೆ ಅರ್ಜಿಗಳನ್ನು ಕಳುಹಿಸಿ ಅಧಿಕಾರಿಗಳು ಶೀಘ್ರವೇ ನಿಯಮಾನುಸಾರ ಪರಿಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸಲಾಗುವುದು. ಅರ್ಜಿಗಳ ಸ್ವೀಕಾರಕ್ಕಾಗಿ ಸಂಜೆಯವರೆಗೂ ಪ್ರತ್ಯೇಕ ಕೌಂಟರ್ ತೆರೆಯಲಾಗಿದೆ. ಯಾವುದೇ ಸಮಸ್ಯೆಗಳಿದ್ದಲ್ಲಿ ಜನರು ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದರು.

ಶಾಸಕ ಸಿ.ಎಸ್.ನಿರಂಜನ್‌ಕುಮಾರ್ ಮಾತನಾಡಿ, ಕುಂದು ಕೊರತೆಗಳ ಸಂಬಂಧ ಸ್ವೀಕರಿಸಿರುವ ಅರ್ಜಿಗಳಿಗೆ ಅಧಿಕಾರಿಗಳು ತ್ವರಿತವಾಗಿ ಸ್ಪಂದಿಸಿ, ಶೀಘ್ರ ಪರಿಹರಿಸಬೇಕು ಅಧಿಕಾರಿಗಳು ಜನರ ಬಳಿಗೆ ತೆರಳಿ ಅವರ ಸಮಸ್ಯೆ ಸ್ಥಳದಲ್ಲಿಯೇ ಪರಿಹರಿಸುವ ಉದ್ದೇಶದೊಂದಿಗೆ ಜಿಲ್ಲಾಧಿಕಾರಿಗಳ ನಡೆ ಹಳ್ಳಿಯ ಕಡೆ ಕಾರ್ಯಕ್ರಮವನ್ನು ಸರ್ಕಾರ ಜಾರಿಗೆ ತಂದಿದೆ ಎಂದರು.

ಬಗರ್ ಹುಕುಂ ಸಾಗುವಳಿ ಚೀಟಿ ಕೋರಿ 4 ಸಾವಿರ ಅರ್ಜಿಗಳು ಸಲ್ಲಿಕೆಯಾಗಿದ್ದವು. ಇವುಗಳನ್ನು ಪರಿಶೀಲಿಸಿ 2 ಸಾವಿರ ಅರ್ಹ ಅರ್ಜಿಗಳಿಗೆ ಸಂಬಂಧಿಸಿದಂತೆ ಸಾಗುವಳಿ ಚೀಟಿ ವಿತರಿಸುವ ಸಂಬಂಧ ಕ್ರಮ ವಹಿಸಲಾಗಿದೆ ಈಗಾಗಲೇ 150 ಮಂದಿಗೆ ಸಾಗುವಳಿ ಚೀಟಿ ವಿತರಿಸಲಾಗಿದೆ. 94 ಸಿ ರಡಿ ಇಂದು ಸಹ ಹಕ್ಕುಪತ್ರ ವಿತರಿಸಲಾಗುತ್ತಿದೆ. ಹಾಲಹಳ್ಳಿ–ನಿಟ್ರೆ 4 ಕಿ.ಮೀ ರಸ್ತೆ ಹಾಗೂ ರಂಗನಾಥಪುರ ರಸ್ತೆ ಅಭಿವೃದ್ಧಿಗೂ ಅನುದಾನ ನೀಡಲಾಗುತ್ತಿದೆ. ನಿಟ್ರೆ ಗ್ರಾಮದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ 50 ಲಕ್ಷ ರೂ. ನೀಡಲಾಗಿದೆ ಎಂದರು.

ತಹಸೀಲ್ದಾರ್ ಸಿ.ಜಿ.ರವಿಶಂಕರ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಇದೇ ಸಂದರ್ಭದಲ್ಲಿ ಫಲಾನುಭವಿಗಳಿಗೆ ಸಾಗುವಳಿ ಹಕ್ಕುಪತ್ರ, ವಿಶೇಷ ಚೇತನರಿಗೆ ಯುಡಿಐಡಿ ಕಾರ್ಡ್, ರಕ್ತದಾನ ಮಾಡಿದವರಿಗೆ ಪ್ರಶಂಸನಾ ಪತ್ರ ವಿತರಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ವಿವಿಧ ಇಲಾಖೆಗಳು ಏರ್ಪಡಿಸಿದ್ದ ಮಾಹಿತಿ ಮಳಿಗೆಗಳನ್ನು ಉದ್ಘಾಟಿಸಲಾಯಿತು.

ಆರೋಗ್ಯ ತಪಾಸಣೆ, ರಕ್ತದಾನ ಶಿಬಿರ, ಜಾನುವಾರು ಆರೋಗ್ಯ ಶಿಬಿರ ಏರ್ಪಡಿಸಲಾಗಿತ್ತು. ಗ್ರಾಪಂ ಅಧ್ಯಕ್ಷ ಮರಿಸ್ವಾಮಿ ಸಿದ್ದೇಗೌಡ, ಉಪಾಧ್ಯಕ್ಷ ಲಕ್ಷ್ಮಮ್ಮ ದುಂಡನಾಯಕ, ಜಿಪಂ ಮಾಜಿ ಸದಸ್ಯ ನಾಗರಾಜು, ಬಗರ್ ಹುಕುಂ ಸಮಿತಿ ಸದಸ್ಯ ನಾಗರಾಜಪ್ಪ, ಜಿಲ್ಲಾ ಮಟ್ಟದ ಅಧಿಕಾರಿಗಳು ಕಾರ್ಯಕ್ರಮದಲ್ಲಿದ್ದರು.

ಶಾಸಕರ ಬಳಿ ರೈತರ ಅಳಲು...

ಅಕ್ರಮ ಗಣಿಗಾರಿಕೆ ವಿರುದ್ಧ ಅಳಲು ತೋಡಿಕೊಂಡ ರೈತರಿಗೆ ಶಾಸಕರು ಪೊಲೀಸರ ಸಹಾಯ ಪಡೆಯುವಂತೆ ಸಲಹೆ ನೀಡಿದರು. ಈ ವೇಳೆ ರೈತರು, ಪೊಲೀಸ್ ಇಲಾಖೆ ಕೆಲ ಅಧಿಕಾರಿಗಳು ಉಳ್ಳವರಪರ ಇದ್ದು, ದೂರು ನೀಡಲು ಹೋದವರ ವಿರುದ್ಧವೇ ಕೇಸ್ ದಾಖಲಿಸುತ್ತಾರೆ. ದಲ್ಲಾಳಿಗಳಂತೆ ವರ್ತಿಸಿ, ದೂರಿಗೆ ಇಂತಿಷ್ಟು ಎಂದು ಹಣ ನಿಗದಿಪಡಿಸುತ್ತಾರೆ. ಹೋಬಳಿಯಾದ್ಯಂತ ಹಲವು ಗ್ರಾಮಗಳ ಜಮೀನುಗಳಲ್ಲಿ ತಿಂಗಳಿಗೊಂದರಂತೆ ರೈತರ ಜಮೀನಿನ ಕೇಬಲ್‌ಗಳು ಕಳುವಾಗುತ್ತಿವೆ. ಬಡ ರೈತರು ಜೀವನ ನಡೆಸುವುದೇ ಕಷ್ಟವಾಗಿದೆ. ಅಕಾಲಿಕ ಮಳೆಯಿಂದ ಬೆಳೆ ಹಾನಿಯಾದರೂ ತಾಲೂಕಿನ ಯಾವ ರೈತರಿಗೂ ಪರಿಹಾರ ಬಂದಿಲ್ಲ ಎಂದು ಅವಲತ್ತುಕೊಂಡ ರೈತರು, ಕೃಷಿ ಇಲಾಖೆಯ ಅಧಿಕಾರಿಗಳು ಯಾವ ರೀತಿಯ ಕೆಲಸ ಮಾಡುತ್ತಿದ್ದಾರೆ ಎಂದು ಪ್ರಶ್ನಿಸಿದರು. ಶಾಸಕ ನಿರಂಜನ್‌ಕುಮಾರ್ ಮಧ್ಯಪ್ರವೇಶಿಸಿ ನೀವು ಪೊಲೀಸ್ ಠಾಣೆಗೆ ದೂರು ನೀಡಿದ್ದರೆ ಅವರು ಕೆಲಸ ಮಾಡುತ್ತಾರೆ ಎಂದರು. ಇದರಿಂದ ಅಸಮಾಧಾನಗೊಂಡ ರೈತರು, ನಿಮ್ಮಿಂದ ಈ ಉತ್ತರ ಬರುತ್ತದೆ ಎಂದು ನಮಗೆ ಗೊತ್ತು ಎಂದು ರೈತರು ಶಾಸಕರನ್ನೇ ತರಾಟೆ ತಗೆದುಕೊಂಡ ಪ್ರಸಂಗವೂ ನಡೆಯಿತು.

ಹುಲಿ–ಚಿರತೆ ಪ್ರತ್ಯೇಕ ದಾಳಿ ಪ್ರಕರಣ; ಎತ್ತು–ಕರುಗೆ ಗಾಯ

ಬೇಗೂರು, ಅ.15–ಪ್ರತ್ಯೇಕ ಪ್ರಕರಣಗಳಲ್ಲಿ ಹುಲಿ, ಚಿರತೆ ದಾಳಿಗೆ ಎತ್ತು ಹಾಗೂ ಕರು ತೀವ್ರವಾಗಿ ಗಾಯಗೊಂಡಿರುವ ಘಟನೆ ಗುಂಡ್ಲುಪೇಟೆ ತಾಲೂಕಿನ ಬೇಗೂರು ಹೋಬಳಿಯಲ್ಲಿ ನಡೆದಿವೆ.

ಬೇಗೂರು ಸಮೀಪದ ಯಡವನಹಳ್ಳಿ ಗ್ರಾಮದ ಹೊರವಲಯದಲ್ಲಿ ಎತ್ತಿನ ಮೇಲೆ ಹುಲಿ ದಾಳಿ ನಡೆಸಿ ಗಾಯಗೊಳಿಸಿದೆ. ಎಂದಿನಂತೆ ಯಡವನಹಳ್ಳಿ ಗ್ರಾಮದ ಕೃಷ್ಣಮೂರ್ತಿ ಎತ್ತಿನೊಂದಿಗೆ ಜಮೀನಿಗೆ ತೆರಳುತ್ತಿದ್ದ ಸಂದರ್ಭ ಹಿಂಬದಿಯಿಂದ ಹುಲಿ ಎತ್ತಿನ ಮೇಲೆರಗಿದೆ. ಈ ಸಂದರ್ಭ ಕೃಷ್ಣಮೂರ್ತಿ ಎತ್ತನ್ನು ಬಿಟ್ಟು ಓಡಿ ಪಾರಾಗಿದ್ದಾರೆ. ಅಕ್ಕ ಪಕ್ಕದ ಜಮೀನಿನವರು ಸದ್ದು ಮಾಡಿದ್ದರಿಂದ ಹುಲಿ ಎತ್ತನ್ನು ಬಿಟ್ಟು ಓಡಿ ಹೋಗಿದೆ. ಹುಲಿ ದಾಳಿಯಿಂದ ಎತ್ತು ತೀವ್ರವಾಗಿ ಗಾಯಗೊಂಡಿದೆ.

ಓಂಕಾರ ಅರಣ್ಯ ವಲಯದಿಂದ ಹುಲಿ ಹಾಗಾಗ ಯಡವನಹಳ್ಳಿ, ಹೊಸಪುರ, ಶಿವಕುಮಾರಪುರ, ಮಂಚಹಳ್ಳಿ, ಗ್ರಾಮಗಳಿಗೆ ಲಗ್ಗೆ ಇಟ್ಟು ಜಾನುವಾರಗಳ ಬಲಿ ಪಡೆಯುತ್ತಿವೆ. ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಬೋನ್ ಇರಿಸಿ ಹುಲಿ ಸೆರೆ ಹಿಡಿಯುವಂತೆ ಈ ರೈತರು, ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಚಿರತೆ ದಾಳಿ: ಬೇಗೂರು ಸಮೀಪದ ಮರಳಾಪುರ ಗ್ರಾಮದ ವೀರಪ್ಪ ಅವರ ತೋಟದ ಮನೆ ಕೊಟ್ಟಿಗೆಯಲ್ಲಿ ಕಟ್ಟಿದ್ದ ಹಸುವಿನ ಕರು ಮೇಲೆ ಚಿರತೆ ದಾಳಿ ನಡೆಸಿ ಎಳೆದೊಯ್ಯಲು ಯತ್ನಿಸಿದ ಘಟನೆ ಶುಕ್ರವಾರ ರಾತ್ರಿ ನಡೆದಿದೆ. ಈ ವೇಳೆ ಜಾನುವಾರುಗಳು ಹಾಗೂ ನಾಯಿಗಳ ಸದ್ದಿಗೆ ಎಚ್ಚರಗೊಂಡ ಮಾಲೀಕ ಹಾಗೂ ತೋಟದಲ್ಲಿದ್ದ ಮಲ್ಲೇಶ್ ಅವರ ಲೈಟ್ ಹಾಕಿ ಸದ್ದು ಮಾಡಿದ್ದರಿಂದ ಚಿರತೆ ಕರುವನ್ನು ಅಲ್ಲಿಯೇ ಬಿಟ್ಟು ಕಾಲ್ಕಿತ್ತಿದೆ. ಘಟನೆಯಿಂದ ಗ್ರಾಮಸ್ಥರು ಗಾಬರಿಯಾಗಿದ್ದಾರೆ.

ಬದನಗುಪ್ಪೆ ಗ್ರಾಪಂ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ

ಚಾಮರಾಜನಗರ, ಅ.15– ತಾಲೂಕಿನ ಬದನಗುಪ್ಪೆ ಗ್ರಾಮಪಂಚಾಯಿತಿ ಕಚೇರಿಯಲ್ಲಿ ಗುರುವಾರ ಉಪವಿಭಾಗಾಧಿಕಾರಿಗಳ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಗ್ರಾಪಂ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಾಯಿತು.

21 ಗ್ರಾಮ ಪಂಚಾಯಿತಿ ಸದಸ್ಯರ ಪೈಕಿ 15 ಮಂದಿ ಸದಸ್ಯರು ಸಭೆಯಲ್ಲಿ ಹಾಜರಿದ್ದು, ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಿದರು. ಸದಸ್ಯರ ನಿರ್ಣಯ ಅಂಗೀಕರಿಸುವ ಮೂಲಕ ಅಧ್ಯಕ್ಷರನ್ನು ಪದಚ್ಯುತಗೊಳಿಸಲಾಯಿತು.

ಇಂದು ರಜತ ಮಹೋತ್ಸವ


ಕೊಳ್ಳೇಗಾಲ, ಅ.15– ಕೊಳ್ಳೇಗಾಲ ದೇವಾಂಗ ಮಹಾಸಭಾದ ಶ್ರೀ ರಾಜರಾಜೇಶ್ವರಿ ಕಲ್ಯಾಣ ಮಂಟಪದ ರಜತ ಮಹೋತ್ಸವ ನಾಳೆ(ಅ.16) ಬೆಳಗ್ಗೆ 10.30ಕ್ಕೆ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಕಾರ್ಯಕ್ರಮವನ್ನು ಮಾಜಿ ಶಾಸಕ ಎಂ.ಡಿ.ಲಕ್ಷ್ಮೀನಾರಾಯಣ ಉದ್ಘಾಟಿಸಲಿದ್ದು, ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ್ ಬಿದರಿ, ಎನ್.ಮಹೇಶ್, ಆರ್.ನರೇಂದ್ರ, ಪುಟ್ಟರಂಗಶೆಟ್ಟಿ, ನಿರಂಜನಕುಮಾರ್ ಹಾಗೂ ದೇವಾಂಗ ಸಮಾಜದ ಮುಖಂಡರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ದೇವಾಂಗ ಕುಲದ ಎಲ್ಲಾ ಶೆಟ್ಟಿಗಾರರ ಉಪಸ್ಥಿತಿಯಲ್ಲಿ ನಡೆಯಲಿರುವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಟ್ರಸ್ಟ್ ಅಧ್ಯಕ್ಷ ಎಸ್. ಮಂಜುನಾಥ್ ವಹಿಸಲಿದ್ದಾರೆ.



ಯಳಂದೂರು ತಾಲೂಕಿನ ಅಗರ ಗ್ರಾಮ ಪಂಚಾಯಿತಿಗೆ ಅವಿರೋಧವಾಗಿ ಆಯ್ಕೆಯಾದ ನೂತನ ಅಧ್ಯಕ್ಷೆ ರಾಜಮ್ಮ ಬಸವರಾಜು ಅವರನ್ನು ಮಾಜಿ ಶಾಸಕ ಎ.ಆರ್.ಕೃಷ್ಣಮೂರ್ತಿ ಅಭಿನಂದಿಸಿದರು. ಈ ವೇಳೆ ಉಪಾಧ್ಯಕ್ಷ ಹೆಚ್.ಕುಮಾರ್, ಸದಸ್ಯರಾದ ಸುರೇಶ್, ಮುದ್ದುನಾಯಕ, ವೆಂಕಟಾಚಲ, ನಾಗರಾಜು, ಸ್ವಾಮಿ, ನಳಿನಾಕುಮಾರಿ, ಅನ್ನಪೂರ್ಣ, ನಿರ್ಮಲ, ರಾಣಿ, ಶೋಭಾ, ಜಿಪಂ ಮಾಜಿ ಸದಸ್ಯ ಸಿದ್ದರಾಜು, ಮುಖಂಡರಾದ ನಾಗರಾಜು, ಪ್ರಭುಪ್ರಸಾದ್, ವಿಜಯಲಕ್ಷ್ಮಿ ನಂಜುಂಡ, ಸುಬ್ಬಣ್ಣ, ಶಂಕರಪ್ಪ ಸೇರಿದಂತೆ ಅಗರ ಹಾಗೂ ಕಿನಕಹಳ್ಳಿ ಗ್ರಾಮಸ್ಥರಿದ್ದರು.

ಮೂವರು ಅಂತರ ಜಿಲ್ಲಾ ಬೈಕ್ ಕಳ್ಳರ ಬಂಧನ

16 ದ್ವಿಚಕ್ರ ವಾಹನ ವಶ, ಶೋಕಿಗಾಗಿ ವಾಹನ ಕಳವು



ಕೊಳ್ಳೇಗಾಲ, ಅ.15–ಶೋಕಿಗಾಗಿ ದ್ವಿಚಕ್ರ ವಾಹನಗಳನ್ನು ಕಳವು ಮಾಡಿ ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದ್ದ ಮೂವರು ಅಂತರಜಿಲ್ಲಾ ಬೈಕ್ ಕಳ್ಳರನ್ನು ಬಂಧಿಸಿ, 11.50 ಲಕ್ಷ ಮೌಲ್ಯದ 16 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆಯುವಲ್ಲಿ ಕೊಳ್ಳೇಗಾಲ ಪಟ್ಟಣ ಪೊಲೀಸರು ಯಶಸ್ವಿಯಾಗಿದ್ದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶಿವಕುಮಾರ್ ಶ್ಲಾಘಿಸಿದ್ದಾರೆ.

ಕೊಳ್ಳೇಗಾಲದ ಸಂತೇಪೇಟೆಯ ಗರಡಿ ಬೀದಿ ನಿವಾಸಿ ನಂದನ್(19), ಹನೂರು ತಾಲೂಕಿನ ಬಂಡಳ್ಳಿ ಸಂಜಯ್(21), ಮೈಸೂರಿನ ಇಲವಾಲ ಗ್ರಾಮದ ರವಿಕುಮಾರ್ (21) ಬಂಧಿತ ಆರೋಪಿಗಳು.

ಪಟ್ಟಣ ಠಾಣೆಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಎಸ್‌ಪಿ ಶಿವಕುಮಾರ್, ಆರೋಪಿಗಳನ್ನು ಹೆಡೆಮುರಿಕಟ್ಟಿರುವ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಇಲಾಖೆಯಿಂದ ನಗದು ಪುರಸ್ಕಾರ ನೀಡುವುದಾಗಿ ಘೋಷಿಸಿದರು.

ಅ.11ರಂದು ಪಿಎಸ್‌ಐ ಉಮಾವತಿ ಮತ್ತು ಸಿಬ್ಬಂದಿ ಚೇತನ್ ಅವರು ಗಸ್ತಿನಲ್ಲಿದ್ದ ವೇಳೆ ಸಾಯಂಕಾಲ 4.30ರ ಸುಮಾರಿನಲ್ಲಿ ಆರೋಪಿಗಳಾದ ಸಂಜಯ್ ಹಾಗೂ ರವಿಕುಮಾರ್ ಹೆಲ್ಮೆಟ್ ಧರಿಸದೆ ಬೈಕ್ ಚಲಾಯಿಸುತ್ತಿದ್ದರು. ತಕ್ಷಣ ಅವರನ್ನು ತಡೆದು ತಪಾಸಣೆ ನಡೆಸಿ ವಾಹನಗಳ ದಾಖಲೆ ಕೇಳಿದಾಗ, ಅವು ಕದ್ದ ಬೈಕ್‌ಗಳು ಎಂದು ಆರೋಪಿಗಳು ಬಾಯಿಬಿಟ್ಟಿದ್ದಾರೆ. ಈ ಇಬ್ಬರ ಮಾಹಿತಿ ಆಧರಿಸಿ ಮತ್ತೋರ್ವ ಆರೋಪಿ ನಂದನ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ, ಇವರು ವಿವಿಧೆಡೆ ಕದ್ದು ಮಾರಿದ್ದ 11.50 ಲಕ್ಷ ಮೌಲ್ಯದ 16 ದ್ವಿಚಕ್ರ ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಶೋಕಿಗಾಗಿ ಕಳವು: ಕೂಲಿ ಕೆಲಸ ಮಾಡುತ್ತಿದ್ದ ಈ ಮೂವರು ಆರೋಪಿಗಳು ಶೋಕಿಗಾಗಿ ಬೈಕ್ ಕದ್ದು ಮಾರುತ್ತಿದ್ದರು. ಸಾರ್ವಜನಿಕ ಸ್ಥಳಗಳಲ್ಲಿ ನಿಲ್ಲಿಸುತ್ತಿದ್ದ ದ್ವಿಚಕ್ರವಾಹನಗಳೇ ಇವರ ಟಾರ್ಗೆಟ್. ಯಮಹ, ಪಲ್ಸರ್, ಹೋಂಡಾ ಆಕ್ಟಿವಾ ಇನ್ನಿತರೆ ಕಂಪನಿಯ ದ್ವಿಚಕ್ರ ವಾಹನಗಳನ್ನು ಕದ್ದು ಮಾರುತ್ತಿದ್ದರು. ಬೈಕ್ ಕಳ್ಳತನ ಕುರಿತು ಇವರ ವಿರುದ್ಧ ಕೊಳ್ಳೇಗಾಲ ಠಾಣೆ, ಮೈಸೂರಿನ ವಿಜಯನಗರ ಹಾಗೂ ಬೆಂಗಳೂರಿನ ಕುಂಬಳಗೂಡು ಠಾಣೆಯಲ್ಲಿ ತಲಾ ಒಂದೊಂದು ಪ್ರಕರಣ ದಾಖಲಾಗಿದೆ. ಇದಲ್ಲದೆ ಆರೋಪಿಗಳ ವಿರುದ್ಧ ಮೈಸೂರು ಮತ್ತು ಬೆಂಗಳೂರಿನ ವೋಗೊ ಸ್ಕೂಟರ್ ಕೇಂದ್ರದಿಂದ 8 ವಾಹನಗಳನ್ನು ಕದ್ದು ಜಿಪಿಎಸ್ ನಿಷ್ಕ್ರಿಯಗೊಳಿಸಿ ಮಾರಿರುವ ಆರೋಪವೂ ಇದ್ದು, ತನಿಖೆ ನಡೆಯುತ್ತಿದೆ ಎಸ್‌ಪಿ ತಿಳಿಸಿದ್ದಾರೆ.

ಆರೋಪಿಗಳ ಪತ್ತೆ ಹಾಗೂ ಮಾರಿದ್ದ ಬೈಕ್ ವಶಕ್ಕಾಗಿ ಎಎಸ್‌ಪಿ ಸುಂದರರಾಜು, ಡಿವೈಎಸ್‌ಪಿ ನಾಗರಾಜು, ವೃತ್ತನಿರೀಕ್ಷಕ ಶಿವರಾಜ್ ಮಾರ್ಗದರ್ಶನದಲ್ಲಿ ಪಿಎಸ್‌ಐ ಉಮಾವತಿ, ಚೇತನ್, ಪ್ರೊಬೆಷನರಿ ಎಸ್‌ಐ ಈಶ್ವರ್, ಮುಖ್ಯಪೇದೆಗಳಾದ ರಘು, ಪ್ರದೀಪ್, ಶಂಕರ್, ಪೇದೆಗಳಾದ ಬಿಳಿಗೌಡ, ಹರೀಶ ರಮೇಶ್, ಶಿವಕುಮಾರ್, ಪ್ರಕಾಶ್, ಶಂಕರ, ಮಹೇಶ ಇನ್ನಿತರರ ತಂಡ ರಚಿಸಲಾಗಿತ್ತು. ತನಿಖೆ ಕೈಗೊಂಡ ತಂಡ ಆರೋಪಿಗಳು ವಿವಿಧೆಡೆ ಕದ್ದು ಬೇರೆಡೆ ಮಾರಿದ್ದ 8 ಹೊಂಡಾ ಆಕ್ಟಿವಾ ಸ್ಕೂಟರ್, 4 ಪಲ್ಸರ್ ಬೈಕ್ 2 ಕೆಟಿಎಂ, ಪ್ಯಾಷನ್ ಪ್ರೊ ಸೇರಿದಂತೆ 16 ದ್ವಿಚಕ್ರ ವಾಹನಗಳನ್ನು ವಶಕ್ಕೆ ಪಡೆದಿದ್ದಾರೆ.

ದಾಖಲೆ ಇಲ್ಲದ ವಾಹನ ಖರೀದಿಸಬೇಡಿ: ಎಸ್‌ಪಿ

ಮೂವರು ಕಳ್ಳರು ಚಾ.ನಗರ ಜಿಲ್ಲೆಯ ಕೊಳ್ಳೇಗಾಲ, ಮೈಸೂರು ನಗರ, ಮೈಸೂರು ಜಿಲ್ಲೆಯ ಬದನವಾಳು, ತಗಡೂರು, ಮಂಡ್ಯ ಜಿಲ್ಲೆಯ ಮದ್ದೂರು, ಬೆಂಗಳೂರು ನಗರ, ಕುಂಬಳಗೂಡು ಸೇರಿದಂತೆ ಇತರೆಡೆ ಕಳ್ಳತನ ಮಾಡಿ, ಕೊಳ್ಳೇಗಾಲ, ಕೆ.ಆರ್. ನಗರ, ಮದ್ದೂರು, ಚಾ.ನಗರ ಮುಂತಾದ ಕಡೆ ವಾಹನ ಮಾರಾಟ ಮಾಡಿದ್ದಾಗಿ ತನಿಖೆ ವೇಳೆ ತಪ್ಪೊಪ್ಪಿಕೊಂಡಿದ್ದು, ಮೂವರು ವಿರುದ್ಧ ತನಿಖೆ ಮುಂದುವರೆದಿದೆ. ಸಾರ್ವಜನಿಕರು ಕಡಿಮೆ ಬೆಲೆಗೆ ಸಿಗುತ್ತದೆ ಎಂದು ಬೈಕ್‌ಗಳ ಖರೀದಿಸದೆ, ದಾಖಲಾತಿ ಪರಿಶೀಲಿಸಬೇಕು. ವಾಹನಗಳಿಗೆ ದಾಖಲಾತಿ ಇಲ್ಲದಿದ್ದರೆ ಸಮೀಪದ ಪೊಲೀಸರಿಗೆ ಮಾಹಿತಿ ನೀಡಿ, ಸಹಕರಿಸುಂತೆ ಮನವಿ ಮಾಡಿದರು.

ಇಂದು, ನಾಳೆ ನೀರಿಲ್ಲ

ಚಾಮರಾಜನಗರ, ಅ.15–ಚಾಮರಾಜನಗರ ನಗರಸಭಾ ವ್ಯಾಪ್ತಿಗೆ ನೀರು ಸರಬರಾಜು ಮಾಡುವ ಟಿ.ನರಸೀಪುರದ ಜಾಕ್‌ವೆಲ್‌ನಲ್ಲಿ ಪ್ಯಾನಾಲ್ ಬೋರ್ಡ್ ದುರಸ್ತಿ ಹಿನ್ನೆಲೆಯಲ್ಲಿ ಅ.16 ಮತ್ತು 17 ರಂದು ನೀರು ಸರಬರಾಜು ಇರುವುದಿಲ್ಲ.

ಒಂದನೇ ಪುಟದಿಂದ

ದೈತ್ಯ ಮೊಸಳೆ ಪ್ರತ್ಯಕ್ಷ

ಬಲೆ ಮೇಲೆ ಕಲ್ಲುಗಳನ್ನು ಹೇರಿ, ಎರಡೂ ಕಡೆ ಹಗ್ಗವನ್ನು ಬಿಗಿಯಾಗಿ ಎಳೆದು ಹಿಡಿದಿದ್ದರು. ಮತ್ತೊಂದೆಡೆ ದಪ್ಪದಾದ ಹಗ್ಗವನ್ನು ಕುಣಿಕೆ ಮಾಡಿ, ಅದನ್ನು ಮೊಸಳೆ ದೇಹಕ್ಕೆ ತೂರಿಸುವ ಪ್ರಯತ್ನ ನಡೆಸಲಾ ಯಿತು. ನೀರಿನಲ್ಲಿ ಮುಳುಗಿದ್ದ ಮೊಸಳೆಗೆ ನೀಳ ಕೋಲಿ ನಿಂದ ತಾಕಿಸಿ ತಲೆಭಾಗದಿಂದ ಹಗ್ಗ ಹಾಕುವ ಯತ್ನ ಅಂತಿಮ ಕ್ಷಣದಲ್ಲಿ ವಿಫಲವಾಯಿತು. ರಾಜಕಾಲುವೆ ಮೂಲೆ ಯಲ್ಲಿರುವ ಮರವೊಂದರ ಬುಡದಲ್ಲಿ ನೀರಿನ ರಭಸದಿಂದ ಉಂಟಾಗಿರುವ ಸಂದುವಿನ ಮೂಲಕ ಮೊಸಳೆ ಬಲೆಯಿಂದ ಮುಂದಕ್ಕೆ ಸಾಗಿತ್ತು. ಸಿಬ್ಬಂದಿ ಮತ್ತೆ ರೆಂಬೆ ಮಾದರಿ ಕೋಲಿನಿಂದ ಮೊಸಳೆಗೆ ತಾಕಿಸಿ ಅದು ಹಿಂದಕ್ಕೆ ಸಾಗುವಂತೆ ಮಾಡಿದರು. ಬಳಿಕ ಕಾರ್ಯಾಚರಣೆ ಚುರುಕುಗೊಳಿಸಲಾ ಯಿತು. ಮೊಸಳೆ ಮೂರು ಬಾರಿ ಹಗ್ಗದ ಕುಣಿಕೆಗೆ ಮೊಸಳೆ ಮುಖಭಾಗ ಸಿಕ್ಕಿ ಹಾಕಿಕೊಂಡಿತ್ತು. ಇನ್ನೇನು ಹಗ್ಗವನ್ನು ಬಿಗಿಗೊಳಿಸಬೇಕೆನ್ನುವಷ್ಟರಲ್ಲಿ ಒದ್ದಾಡಿದ್ದರಿಂದ ಮೊಸಳೆ ಕುಣಿಕೆಯಿಂದ ನುಣಿಚಿಕೊಂಡಿತು. ಕಡೇ ಗಳಿಗೆಯಲ್ಲಿ 'ಮೊಸಳೆ ಆಪರೇಷನ್' ವಿಫಲವಾಗಿದ್ದರಿಂದ ಸಿಬ್ಬಂದಿ ಹೈರಾಣಾದರು. ಕತ್ತಲಾದ ಕಾರಣ ಅನಿವಾರ್ಯವಾಗಿ ಕಾರ್ಯಾಚರಣೆ ಸ್ಥಗಿತಗೊಳಿಸಿ ಬರಿಗೈಯಲ್ಲಿ ವಾಪಸ್ಸಾದರು.

ಜಮಾಯಿಸಿದ ಜನ: ಇಂದು ಬೆಳಗ್ಗೆ 11 ಗಂಟೆ ವೇಳೆಯಲ್ಲೇ ರಾಜಕಾಲುವೆಯಲ್ಲಿ ಮೊಸಳೆ ಕಾಣಿಸಿತು. ಒಬ್ಬರಿಂದೊಬ್ಬರಿಗೆ ವಿಷಯ ಹರಡಿ ಅನೇಕರು ಬಂದು ಮೊಸಳೆ ನೋಡಿದರು. ಬಳಿಕ ಅದು ಎಲೆ ತೋಟದ ಮೂಲೆಯಲ್ಲಿ ಸೇರಿಕೊಂಡಿತು. ನಗರ ಪಾಲಿಕೆ ಅಭಯ ತಂಡದ ಮಂಜು ಮತ್ತಿತರರು ಸುಮಾರು ಹೊತ್ತು ಇಲ್ಲೇ ಇದ್ದು ಮೊಸಳೆ ಹತ್ತಿರಕ್ಕೆ ಹೋಗದಂತೆ ಜನರಿಗೆ ತಿಳಿಹೇಳಿದರು. ಅರಣ್ಯಾಧಿಕಾರಿ ಗಳಿಗಿಂತ ಮುನ್ನವೇ ಆಗಮಿಸಿದ್ದ ಪೊಲೀಸರು, ಕಾರ್ಯಾಚರಣೆ ಸ್ಥಗಿತಗೊಳಿಸು ವವರೆಗೂ ಜನರನ್ನು ನಿಯಂತ್ರಿಸಿದರು. ಆದರೂ ಸುತ್ತಮುತ್ತಲ ಬಡಾವಣೆ ನಿವಾಸಿಗಳು ನೂರಾರು ಸಂಖ್ಯೆಯಲ್ಲಿ ಜಮಾಯಿಸಿದ್ದು, ಕಾರ್ಯಾಚರಣೆಗೆ ಅಡ್ಡಿಯಾಯಿತು.

ಎಲ್ಲಿಂದ ಬಂತು?: ಜೋರು ಮಳೆಯಿಂದ ರಾಜಕಾಲುವೆಯಲ್ಲಿ ನೀರಿನ ಹರಿವು ಹೆಚ್ಚಾಗಿದೆ. ಈ ಪರಿಸ್ಥಿತಿಯಲ್ಲಿ ಎಲೆತೋಟದ ಬಳಿ ಕಾಣಿಸಿಕೊಂಡ ಮೊಸಳೆ ಎಲ್ಲಿಂದ ಬಂದಿದೆ ಎನ್ನುವುದು ತಿಳಿದುಬಂದಿಲ್ಲ. ನಿನ್ನೆ ರಾತ್ರಿ ಧಾರಾಕಾರ ಮಳೆ ಸುರಿದ ಸಮಯದಲ್ಲಿ ಸೀವೇಜ್ ಫಾರಂ ಕಡೆಯಿಂದ ಅಥವಾ ಕಾರಂಜಿಕೆರೆ ಕಡೆಯಿಂದ ಬಂದಿದೆಯೋ ಎನ್ನುವುದು ಅರಣ್ಯ ಇಲಾಖೆ ಅಧಿಕಾರಿಗಳಿಗೂ ಸ್ಪಷ್ಟತೆಯಿಲ್ಲ. ಆದರೆ ಬೃಹತ್ ಗಾತ್ರದ ಮೊಸಳೆ ರಾಜಕಾಲುವೆಯಲ್ಲಿರುವುದರಿಂದ ಕನಕಗಿರಿ ಸೇರಿದಂತೆ ಅಕ್ಕಪಕ್ಕದ ಬಡಾವಣೆ ನಿವಾಸಿಗಳಲ್ಲಿ ಆತಂಕ ಹೆಚ್ಚಿಸಿದೆ. ಮತ್ತೆ ಜೋರು ಮಳೆ ಸುರಿದು ರಾಜಕಾಲುವೆಯಲ್ಲಿ ನೀರಿನ ಪ್ರಮಾಣ ಹೆಚ್ಚಾಗಿ ಮೊಸಳೆ ಮೇಲಕ್ಕೆ ಹತ್ತಬಹುದೆಂದು ಭಯಗೊಂಡಿದ್ದಾರೆ.

ಕ್ರಮಿಸಿದ ರಾಹುಲ್ ಗಾಂಧಿ

ಮಾಡುವ ಮೂಲಕ ಎಸ್‌ಸಿ–ಎಸ್‌ಟಿಗಳ ವಿರುದ್ಧ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ. ಎಸ್‌ಸಿ–ಎಸ್‌ಟಿಗಳಿಗೆ ಮೀಸಲಾತಿ ಹೆಚ್ಚಿಸುವ ಸಲುವಾಗಿ ಕಾಂಗ್ರೆಸ್ ಸರ್ಕಾರ ಇದ್ದಾಗ ನ್ಯಾಯಮೂರ್ತಿ ನಾಗಮೋಹನ್‌ದಾಸ್ ನೇತೃತ್ವದ ಸಮಿತಿ ರಚಿಸಲಾಗಿತ್ತು. ಈ ಸಮಿತಿಯು ಎಸ್‌ಸಿಗಳಿಗೆ ಶೇ. 15ರಿಂದ 17 ಮತ್ತು ಎಸ್‌ಟಿಗಳಿಗೆ ಶೇ. 3ರಿಂದ 7ರಷ್ಟು ಮೀಸಲಾತಿ ಹೆಚ್ಚಳಕ್ಕೆ ಶಿಫಾರಸು ಮಾಡಲಾಗಿತ್ತು. ಈ ಸಮಿತಿ ವರದಿಗೆ ಬಹಳ ವಿಳಂಬವಾಗಿ ಸಚಿವ ಸಂಪುಟದಲ್ಲಿ ಅನುಮೋದನೆ ನೀಡಲಾಗಿದೆ. ಆದರೆ, ಅದರ ಅನುಷ್ಠಾನಕ್ಕೆ ಸರ್ಕಾರ ಮೀನಾಮೇಷ ಎಣಿಸುತ್ತಿದೆ ಎಂದ ರಾಹುಲ್ ಗಾಂಧಿ, ಸರ್ಕಾರವು ಯಾವುದೇ ಸಬೂಬು ಹೇಳದೇ ತಕ್ಷಣದಿಂದಲೇ ನ್ಯಾಯಮೂರ್ತಿ ನಾಗಮೋಹನ ದಾಸ್ ಸಮಿತಿ ವರದಿಯನ್ನು ಅನುಷ್ಠಾನಗೊಳಿಸಬೇಕು ಎಂದು ಆಗ್ರಹಿಸಿದರು. ಕಲ್ಯಾಣ ಕರ್ನಾಟಕ ಭಾಗಕ್ಕೆ ಕಲಂ 371ಕ್ಕೆ ತಿದ್ದುಪಡಿ ತರಲು ಕಾಂಗ್ರೆಸ್ ಒತ್ತಾಯಿಸಿದಾಗ ಬಿಜೆಪಿ ಅದಕ್ಕೆ ನಿರಾಕರಿಸಿತ್ತು. ನಂತರ ಕಾಂಗ್ರೆಸ್ ಸರ್ಕಾರದಲ್ಲಿ ಈ ವಿಶೇಷ ಸ್ಥಾನಮಾನವನ್ನು ಈ ಭಾಗಕ್ಕೆ ನೀಡಿದ ಫಲವಾಗಿ ಸಾವಿರಾರು ಯುವಕರಿಗೆ ಉದ್ಯೋಗ ದೊರೆತಿದೆ. ಸಾವಿರಾರು ವಿದ್ಯಾರ್ಥಿಗಳಿಗೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಸೀಟ್‌ಗಳು ದೊರೆತಿವೆ. ಈ ಭಾಗದ ಅಭಿವೃದ್ಧಿಗಾಗಿ ಸಾವಿರಾರು ಕೋಟಿ ರೂ. ಅನುದಾನ ಬಂದಿದೆ ಎಂದು ಹೇಳಿದರು.

ಭಾರತ ಐಕ್ಯತಾ ಯಾತ್ರೆಯನ್ನು ಕಾಂಗ್ರೆಸ್ ಅಧಿಕಾರಕ್ಕೆ ಬರಬೇಕು ಎಂಬ ಉದ್ದೇಶದಿಂದ ಪ್ರಾರಂಭಿಸಿದ್ದಲ್ಲ. ಇಂದು ದೇಶದಲ್ಲಿ ಆರ್‌ಎಸ್‌ಎಸ್ ಮತ್ತು ಬಿಜೆಪಿ ಧರ್ಮ ಧರ್ಮಗಳ ನಡುವೆ ದ್ವೇಷ ಮತ್ತು ಅಸೂಯೆಯನ್ನು ಬಿತ್ತುತ್ತಿದೆ. ದೇಶದ ಜನರ ಭಾವನೆಗಳ ಮೇಲೆ ದಾಳಿ ನಡೆಸುತ್ತಿದೆ. ದೇಶದಲ್ಲಿ ಒಂದೆಡೆ ನಿರುದ್ಯೋಗ ತಾಂಡವವಾಡುತ್ತಿದ್ದರೆ, ಮತ್ತೊಂದೆಡೆ ಬೆಲೆ ಏರಿಕೆ ಜನರನ್ನು ಕಾಡುತ್ತಿದೆ. ಜನರು ಶಾಂತಿ, ನೆಮ್ಮದಿಯಿಂದ ಬದುಕಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸಮಸ್ಯೆಗಳ ಪರಿಹಾರಕ್ಕಾಗಿ ದೇಶದ ಜನರನ್ನು ಒಗ್ಗೂಡಿಸಲು ಈ ಯಾತ್ರೆ ಕೈಗೊಳ್ಳಲಾಗಿದೆ ಎಂದರು.

ನನ್ನ ತಾಯಿ, ಅಜ್ಜಿಯನ್ನು ಗೆಲ್ಲಿಸಿ ಕಳಿಸಿದ ನಿಮ್ಮನ್ನು ಮರೆಯಲಾದೀತೆ...

ಬಳ್ಳಾರಿ ಮತ್ತು ಕರ್ನಾಟಕದ ಜೊತೆ ನಮ್ಮ ಕುಟುಂಬಕ್ಕೆ ಅವಿನಾಭಾವ ಸಂಬಂಧವಿದೆ. ಬಳ್ಳಾರಿ ಜನತೆ ನನ್ನ ತಾಯಿ ಸೋನಿಯಾ ಗಾಂಧಿಯ ವರನ್ನು ಅತ್ಯಧಿಕ ಮತಗಳ ಅಂತರದಲ್ಲಿ ಗೆಲ್ಲಿಸಿ ಸಂಸತ್‌ಗೆ ಕಳುಹಿಸಿದ್ದೀರಿ. ಅದೇ ರೀತಿ ಚಿಕ್ಕಮಗಳೂರು ಜನತೆ ನನ್ನ ಅಜ್ಜಿ ಇಂದಿರಾ ಗಾಂಧಿಯವರನ್ನು ಕಷ್ಟ ಕಾಲದಲ್ಲಿ ಗೆಲ್ಲಿಸಿ ಸಂಸತ್‌ಗೆ ಕಳುಹಿಸಿದ್ದರು. ಕರ್ನಾಟಕ ಜನತೆಯ ಈ ಪ್ರೀತಿ, ವಿಶ್ವಾಸವನ್ನು ನಮ್ಮ ಕುಟುಂಬ ಜೀವನ ಪರ್ಯಂತ ಮರೆಯಲು ಸಾಧ್ಯವಿಲ್ಲ. ಬಳ್ಳಾರಿ ಜನ ಕಷ್ಟ ಜೀವಿಗಳು. ಇನ್ನೂ ಬೇಸಿಗೆ ಆರಂಭವಾಗಿಲ್ಲ. ಆದರೆ ಇಂದು ನಾನು ಇಲ್ಲಿ ನಡೆಯುವಾಗ ಬಿಸಿಲಿನ ಬೇಗೆಯನ್ನು ಅನುಭವಿಸಿದ್ದೇನೆ. ಬೇಸಿಗೆಯಲ್ಲಿ ಇಲ್ಲಿನ ರೈತರು ಮತ್ತು ಕಾರ್ಮಿಕರು ಎಷ್ಟು ಕಷ್ಟಪಡುತ್ತಾರೆ ಎಂದು ನಾನು ಯೋಚಿಸಿದೆ. ಇಲ್ಲಿನ ಜನರ ಕಷ್ಟವನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ನಮ್ಮ ಸರ್ಕಾರ ಆಡಳಿತಕ್ಕೆ ಬಂದರೆ ವಿಶೇಷ ಗಮನ ಹರಿಸಿ ಈ ಭಾಗದ ಜನರ ಸರ್ವಾಂಗೀಣ ಅಭಿವೃದ್ಧಿಗೆ ಯೋಜನೆ ಗಳನ್ನು ರೂಪಿಸಲಾಗುವುದು. – ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ.



ಭಾರತ ಐಕ್ಯತಾ ಯಾತ್ರೆ 'ಕ್ವಿಟ್ ಬಿಜೆಪಿ' ಅಭಿಯಾನವಾಗಿದೆ

ರಾಹುಲ್‌ಗಾಂಧಿ ಅವರು ಅಧಿಕಾರಕ್ಕಾಗಿ ಭಾರತ ಐಕ್ಯತಾ ಯಾತ್ರೆ ಮಾಡುತ್ತಿಲ್ಲ. ಆದರೂ ಈ ಯಾತ್ರೆಯೂ 'ಕ್ವಿಟ್ ಬಿಜೆಪಿ' ಅಭಿಯಾನವಾಗಿ ರೂಪುಗೊಳ್ಳುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು. ಇಲ್ಲಿನ ಪುರಸಭೆ ಮೈದಾನದಲ್ಲಿ ನಡೆದ ಬೃಹತ್ ಸಮಾವೇಶವನ್ನುದ್ದೇಶಿಸಿ ಮಾತನಾಡಿದ ಅವರು, 2023ರ ಚುನಾವಣೆಯಲ್ಲಿ ರಾಜ್ಯದಲ್ಲಿ ಶೇ.40ರಷ್ಟು ಕಮಿಷನ್ ಸರ್ಕಾರವಾಗಿರುವ ಬಿಜೆಪಿಯನ್ನು ತೊಲಗಿಸಿ, ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರುವ ಮೂಲಕ ಇಡೀ ದೇಶಕ್ಕೆ ರಾಜ್ಯದ ಜನತೆ ಒಂದು ಸಂದೇಶವನ್ನು ಸಾರಬೇಕಾಗಿದೆ. ಈ ಯಾತ್ರೆಯು ರಾಜ್ಯದಲ್ಲಿ ಕಾಂಗ್ರೆಸ್ 150 ಸ್ಥಾನ ಗೆಲ್ಲಲು ಸಹಕಾರಿಯಾಗುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ರಾಹುಲ್‌ಗಾಂಧಿ ಅವರು ಪ್ರಧಾನಿಯಾಗಬೇಕೆಂದಾಗಲೀ, ಖರ್ಗೆ, ಸಿದ್ದರಾಮಯ್ಯ ಅಥವಾ ನಾನು (ಡಿಕೆಶಿ) ಮುಖ್ಯಮಂತ್ರಿಯಾಗಬೇಕೆಂದಾಗಲೀ ಯಾತ್ರೆಯನ್ನು ಆರಂಭಿಸಿಲ್ಲ. ಜನರ ನೋವು, ದುಃಖ–ದುಮ್ಮಾನಗಳ ನಿವಾರಣೆಗಾಗಿ ಹಾಗೂ ದೇಶವನ್ನು ಶಾಂತಿಯ ತೋಟವನ್ನಾಗಿ ನಿರ್ಮಾಣ ಮಾಡುವ ಸಲುವಾಗಿ ರಾಹುಲ್‌ಗಾಂಧಿ ಭಾರತ ಐಕ್ಯತಾ ಯಾತ್ರೆಯನ್ನು ಆರಂಭಿಸಿದ್ದಾರೆ.

ನೂರಕ್ಕೆ ನೂರು ಸತ್ಯ...

ಕಾರಣ. 1999ರಲ್ಲಿ ಬಳ್ಳಾರಿಯಿಂದ ಸ್ಪರ್ಧಿಸಿ ಸಂಸದರಾದ ಮೇಲೆ ಸೋನಿಯಾಗಾಂಧಿ ಅವರು 3300 ಕೋಟಿ ರೂ.ಗಳ ಕುಡತಿನಿ ವಿದ್ಯುತ್ ಯೋಜನೆ ಜಾರಿ ಮಾಡಿದ್ದರು. ಆದರೆ ಬಳ್ಳಾರಿ ಅಭಿವೃದ್ಧಿಗೆ ಶ್ರೀರಾಮುಲು ಅಥವಾ ಬಿಜೆಪಿಯ ಕೊಡುಗೆ ಏನು? ನರೇಂದ್ರ ಮೋದಿ ಅವರು ಪ್ರಧಾನಿಯಾಗಿ 8 ವರ್ಷ ಕಳೆದಿದೆ. ಬಳ್ಳಾರಿಗೆ ಒಂದೇ ಒಂದು ರೂಪಾಯಿ ಉಪಯೋಗವಾಗಿಲ್ಲ ಎಂದ ಅವರು, ಶ್ರೀರಾಮುಲು ಚರ್ಚೆಗೆ ತಯಾರಿದ್ದಾರಂತೆ ಆದರೆ ಅವರಂತಹ ಪೆದ್ದನ ಜೊತೆಗೆ ಚರ್ಚೆ ಮಾಡುವ ಹುಂಬತನದ ಕೆಲಸ ನಾನು ಮಾಡಲ್ಲ ಎಂದರು.

ಅಕ್ರಮ ಗಣಿಗಾರಿಕೆಯಲ್ಲಿ ಬಳ್ಳಾರಿಯನ್ನು ಲೂಟಿ ಹೊಡೆದಿದ್ದೇ ನಿಮ್ಮ ಸಾಧನೆ. ಇದಕ್ಕೆ ಕುಮ್ಮಕ್ಕುಕೊಟ್ಟವರು ಯಾರು? ನಾವು ಈ ಅಕ್ರಮಗಳ ವಿರುದ್ಧ ಬೆಂಗಳೂರಿನಿಂದ ಬಳ್ಳಾರಿಗೆ ಪಾದಯಾತ್ರೆ ಮಾಡಿದ ಮೇಲೆ ಜನಾರ್ಧನರೆಡ್ಡಿ ಜೈಲು ಸೇರಿದ್ದು, ಇಂದೂ ಕೂಡ ಅವರ ವಿರುದ್ಧ ಅನೇಕ ಮೊಕದ್ದಮೆಗಳಿವೆ. ಕಾಂಗ್ರೆಸ್ ವಿರುದ್ಧ ಮಾತನಾಡುವ ನೈತಿಕತೆ ಶ್ರೀರಾಮುಲು ಅವರಿಗೆ ಇಲ್ಲ. ಒಂದು ವೇಳೆ ಕಾಂಗ್ರೆಸ್ ಪಕ್ಷ ಬಳ್ಳಾರಿಗೆ ಮಾಡಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಚರ್ಚೆ ಮಾಡಬೇಕು ಎಂದಿದ್ದರೆ ನಮ್ಮ ಪಕ್ಷದ ನಾಯಕರಾದ ಉಗ್ರಪ್ಪನವರನ್ನು ಕಳುಹಿಸಿ ಕೊಡುತ್ತೇವೆ ನೀವು ತಯಾರಾಗಿರಿ ಎಂದು ಶ್ರೀರಾಮುಲು ಅವರಿಗೆ ಸವಾಲೆಸೆದರು. ರಾಜ್ಯಸಭೆ ವಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ದೇಶದಲ್ಲಿ ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿಷ ಬೀಜ ಬಿತ್ತುತ್ತಿದೆ ಎಂದರು.

ಬಿಜೆಪಿ 150 ಕ್ಷೇತ್ರಗಳಲ್ಲಿ ಗೆಲುವು

ಮತ್ತೊಮ್ಮೆ ಲಾಂಚ್ ಮಾಡುವ ಪ್ರಯತ್ನದಲ್ಲಿದ್ದಾರೆ. ಅದು ಬಿಟ್ಟರೆ ಇವರ ಜೋಡೋ ಯಾತ್ರೆಗೆ ಯಾವುದೇ ಅರ್ಥವಿಲ್ಲ ಎಂದು ತಿಳಿಸಿದರು. ಬಳ್ಳಾರಿಯಲ್ಲಿ ನಡೆಯುವ ಕಾಂಗ್ರೆಸ್ ಪಕ್ಷದ ಭಾರತ್ ಜೋಡೋ ಸಮಾವೇಶಕ್ಕೆ ಯಾವ ಪ್ರಶ್ನೆ ಕೇಳಲು ಬಯಸು ತ್ತೀರಿ ಎಂಬುದಕ್ಕೆ ಪ್ರತಿಕ್ರಿಯಿಸಿ, ಗೌರವಾನ್ವಿತ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಮತಿ ಸೋನಿಯಾ ಗಾಂಧಿಯವರು ಬಳ್ಳಾರಿಯಲ್ಲಿ ಲೋಕಸಭಾ ಚುನಾವಣೆಗೆ ನಿಂತು, ಈ ಕ್ಷೇತ್ರವನ್ನೇ ಆಯ್ಕೆ ಮಾಡುವುದಾಗಿ ನಿರ್ಣಯಿಸಿ, ನಂತರ ರಾಯಬರೇಲಿ ಎಂದು ಆಯ್ಕೆ ಮಾಡಿಕೊಂಡರು. ಆ ಸಂದರ್ಭದಲ್ಲಿ ಮತ ಹಾಕಿದ ಜನರಿಗೆ ಕೃತಜ್ಞತೆಯನ್ನೂ ಸಲ್ಲಿಸಲಿಲ್ಲ. ಅಂದು 3 ಸಾವಿರ ಕೋಟಿ ಬಜೆಟ್ ನಿಗದಿಪಡಿಸಿ 1 ಪೈಸೆಯನ್ನೂ ಬಿಡುಗಡೆ ಮಾಡಲಿಲ್ಲ. ಈಗ ಯಾವ ಮುಖ ಇಟ್ಟುಕೊಂಡು ಬಳ್ಳಾರಿಯಲ್ಲಿ ಪಾದಯಾತ್ರೆ ಮಾಡುತ್ತಿದ್ದೀರಿ. ಅಲ್ಲಿನ ಜನಕ್ಕೆ ನೀವು ಮೋಸ ಮಾಡಿದಂತಲ್ಲವೇ ಎಂದು ಪ್ರಶ್ನಿಸಿದರು.

ಶಿಕ್ಷಕರು, ವಿದ್ಯಾರ್ಥಿಗಳ ಕಾರ್ಯಾಗಾರಕ್ಕೆ ಚಾಲನೆ

ಎನ್‌ಇಪಿ ಅನುಷ್ಠಾನ ಸಂಬಂಧ ಸರ್ಕಾರಕ್ಕೆ ಶೀಘ್ರ ಸಲಹಾ ವರದಿ

ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ

ಮೈಸೂರು,ಅ.15(ಆರ್‌ಕೆಬಿ)– ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಒಳ್ಳೆಯ ಯೋಜನೆ. ಹಾಗಾಗಿ, ಇದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ವರದಿಯೊಂದನ್ನು ಸಲ್ಲಿಸಲಾಗುವುದು ಎಂದು ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ತಿಳಿಸಿದರು.

ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ, ಮೈಸೂರು ವಿವಿಯ ಅಲುಮ್ನಿ ಅಸೋಸಿಯೇಷನ್ ವತಿಯಿಂದ ಮಾನಸಗಂಗೋತ್ರಿಯ ವಿಜ್ಞಾನಭವನದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಶನಿವಾರ ಏರ್ಪಡಿಸಿದ್ದ ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಅವರು ಮಾತ ನಾಡಿದರು. ನಮ್ಮ ದೇಶಕ್ಕೆ ಎನ್‌ಇಪಿ ಒಂದು ಉತ್ತಮ ವ್ಯವಸ್ಥೆ. ಇದರ ಅನುಷ್ಠಾನ ಆಗಿ ಒಂದೂವರೆ ವರ್ಷವಾದರೂ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಕೊಟ್ಟಿಲ್ಲ. ಹಲವು ವಿವಿಗಳಲ್ಲಿ ಅಧ್ಯಾಪಕರ ಕೊರತೆ ಇದೆ. ಹಾಗಾಗಿ ನಮ್ಮ ವೇದಿಕೆ ಎನ್‌ಇಪಿ ಅನುಷ್ಠಾನ ಕುರಿತಂತೆ ಕಾಲೇಜು ವಿದ್ಯಾರ್ಥಿಗಳು, ಶಿಕ್ಷಕರಿಗಾಗಿ ಕಾರ್ಯಾಗಾರ ಏರ್ಪಡಿಸಿದ್ದಾಗಿ ತಿಳಿಸಿದರು.

ಈ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಭಾಗವಹಿಸಿದ್ದಾರೆ. ಅವರ ಅಭಿಪ್ರಾಯ ಪಡೆದು ಸರ್ಕಾರಕ್ಕೆ ವರದಿ ನೀಡಲಿದ್ದೇವೆ. ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡರು ವರದಿ ತಯಾರಿಸಿ, ಸರ್ಕಾರಕ್ಕೆ ನೀಡಲಿದ್ದಾರೆ. ಸಂಶೋಧನೆ, ಶಿಕ್ಷಣದ ಗುಣಮಟ್ಟ ಸೇರಿದಂತೆ ಇನ್ನಿತರೆ ವಿಚಾರಗಳ ಬಗ್ಗೆಯೂ ನಮ್ಮ ವೇದಿಕೆ ಚರ್ಚಿಸಲಿದೆ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ.ಹೇಮಂತ್‌ಕುಮಾರ್ ಮಾತನಾಡಿ, 2019ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಕಾರ್ಯಾಗಾರ ಏರ್ಪಡಿಸಿ,



ಕರ್ನಾಟಕ ವಿಶ್ರಾಂತ ಕುಲಪತಿಗಳ ವೇದಿಕೆ, ಮೈಸೂರು ವಿವಿಯ ಅಲುಮ್ನಿ ಅಸೋಸಿಯೇಷನ್ ಮೈಸೂರಿನ ವಿಜ್ಞಾನಭವನದಲ್ಲಿ ಶಿಕ್ಷಕರು ಹಾಗೂ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತ ಕಾರ್ಯಾಗಾರವನ್ನು ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ ಉದ್ಘಾಟಿಸಿದರು. ಚಿತ್ರದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ವಿಶ್ರಾಂತ ಕುಲಪತಿಗಳಾದ ಪ್ರೊ.ಕೆ.ಎಸ್.ರಂಗಪ್ಪ, ಪ್ರೊ.ಎನ್.ಎಸ್.ರಾಮೇಗೌಡ, ಅಲುಮ್ನಿ ಅಸೋಸಿಯೇಷನ್ ಕಾರ್ಯದರ್ಶಿ ಪ್ರೊ.ಎಸ್.ಶ್ರೀಕಂಠಸ್ವಾಮಿ, ಪ್ರೊ.ಸಿ.ನಾಗಣ್ಣ ಅವರನ್ನು ಕಾಣಬಹುದು.

ಪ್ರೊ.ಕಸ್ತೂರಿ ರಂಗನ್ ಅವರನ್ನು ಕರೆಸಲಾಗಿತ್ತು. ಪದವಿಯಲ್ಲಿದ್ದ ಮೂರು ವಿಷಯದಿಂದ ಎರಡು ವಿಷಯಕ್ಕೆ ಇಳಿಯುವುದು ಸವಾಲಿನ ವಿಷಯ ಆಗಿತ್ತು. ಎನ್‌ಇಪಿ ಮುಖ್ಯ ಉದ್ದೇಶವೆಂದರೆ ವಿಶ್ವದ ಅತ್ಯುನ್ನತ 100 ರೊಳಗೆ ನಮ್ಮ ದೇಶದ ವಿವಿಗಳು ಬರಬೇಕು. ಗುಣಮಟ್ಟದ ಹಾಗೂ ಮೌಲ್ಯಯುತ ಶಿಕ್ಷಣ ನೀಡಬೇಕು. ಕೌಶಲ್ಯಗಳನ್ನು ತಿಳಿಸಬೇಕು. ಒಂದೊಳ್ಳೆ ಯೋಜನೆ ಇದು. ಬಹುಶಿಸ್ತೀಯ ಅಂಶಗಳು ಇದರಲ್ಲಿ ಅಡಕವಾಗಿದೆ ಎಂದು ಹೇಳಿದರು.


ಬೇರೆ ಕೋರ್ಸ್ ಓದುವುದು ಕಷ್ಟ ಎಂಬ ವಿದ್ಯಾರ್ಥಿ ಗಳಲ್ಲಿರುವ ಭಾವನೆ ನಿವಾರಣೆ ಮಾಡಬೇಕು. ಸರ್ಕಾರ ಪಾಲಿಸಿ ಅನುಷ್ಠಾನಕ್ಕೆ ತಂದರೆ ಸಾಲದು. ಅದನ್ನು ಸಮರ್ಥವಾಗಿ ಅನುಷ್ಠಾನಕ್ಕೆ ತರಬೇಕು. ಶೇ.1.5 ಜಿಡಿಪಿಯನ್ನು ಇದೀಗ ಸರ್ಕಾರ ನೀಡುತ್ತಿದೆ ಅದು ಶೇ.6 ರಷ್ಟು ಆಗಬೇಕು. ಕಾಲೇಜುಗಳಿಗೆ ಸಂಪನ್ಮೂಲ ಹಾಗೂ ಸೌಕರ್ಯ ಗಳನ್ನು ನೀಡಬೇಕು ಎಂದು ಮನವಿ ಮಾಡಿದರು.

ವಿಶ್ರಾಂತ ಕುಲಪತಿ ಪ್ರೊ.ಎಸ್.ಎನ್.ಹೆಗ್ಡೆ ಮಾತನಾಡಿ, ಇದು ಎರಡು ವರ್ಷದ ಪಾಲಿಸಿ ಅಲ್ಲ. 15 ವರ್ಷದ ಪಾಲಿಸಿ. ಇದನ್ನು ಎಲ್ಲಾ ಕಾಲೇಜು ಗಳಲ್ಲಿ ಅನುಷ್ಠಾನಕ್ಕೆ ತರಬೇಕು. ಇದು ಒಳ್ಳೆಯ ಯೋಜನೆ. ಆದರೆ ಅದಕ್ಕೆ ತಯಾರಿ ಆಗಿದೆಯಾ? ರಾಜಕೀಯ ಧೋರಣೆ ಶಿಕ್ಷಣ ಕ್ಷೇತ್ರಕ್ಕೆ ಕಾಲಿಡ ಬಾರದು. ಈ ಯೋಜನೆ ಅನುಷ್ಠಾನಕ್ಕೆ ಬೇಕಾದ ಶಿಕ್ಷಕರು ಎಲ್ಲಿದ್ದಾರೆ? ಸೌಕರ್ಯ ಎಲ್ಲಿದೆ? ಇದನ್ನೆಲ್ಲ ಸರ್ಕಾರ ಮನಗಾಣಬೇಕು. ಇಂತಹ ಕಾರ್ಯಾಗಾರ ಹೆಚ್ಚು ನಡೆಯಬೇಕು. ಕಲಾ, ವಿಜ್ಞಾನ, ವಾಣಿಜ್ಯ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಸಂಗ್ರಹಿಸಿ ಸರ್ಕಾರಕ್ಕೆ ನೀಡಬೇಕು ಎಂದು ಸಲಹೆ ನೀಡಿದರು.

ವಿಶ್ರಾಂತ ಕುಲಪತಿ ಪ್ರೊ.ಎನ್.ಎಸ್.ರಾಮೇಗೌಡ ಮಾತನಾಡಿ, ಈ ಕಾರ್ಯಾಗಾರಕ್ಕೆ ಬಂದಿರುವ ಅಧ್ಯಾಪಕರು, ವಿದ್ಯಾರ್ಥಿಗಳು ತಮ್ಮ ಕಾಲೇಜಿನ ಇತರರಿಗೆ ಎನ್‌ಇಪಿ ಕುರಿತ ವಿಷಯ ವಿನಿಮಯ ಮಾಡಿಕೊಳ್ಳಬೇಕು. ಈ ಕಾರ್ಯಾಗಾರದ ಬಳಿಕ ವರದಿ ತಯಾರಿಸಿ ಸರ್ಕಾರಕ್ಕೆ ನೀಡಲಿದ್ದೇವೆ ಎಂದು ಹೇಳಿದರು. ಪರಿಸರ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಪ್ರೊ.ಎಸ್.ಶ್ರೀಕಂಠಸ್ವಾಮಿ, ಪ್ರೊ.ಸಿ.ನಾಗಣ್ಣ ಇನ್ನಿತರರು ಉಪಸ್ಥಿತರಿದ್ದರು.

ಶಂಕಿತ ಮಂಕಿಪಾಕ್ಸ್ ಆತಂಕ ನಿವಾರಣೆ

- ಬಾಲಕಿಯಲ್ಲಿ ಚಿಕನ್ ಪಾಕ್ಸ್ ವೈರಸ್
- ವೈದ್ಯಕೀಯ ವರದಿಯಲ್ಲಿ ದೃಢ
- ಸಾಮಾನ್ಯ ವೈರಸ್‌ಗೆ ಚಿಕಿತ್ಸೆ



ಮೈಸೂರು, ಅ.15(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಇತ್ತೀಚೆಗೆ ಮಂಕಿಪಾಕ್ಸ್ ಸೋಂಕಿನ ಚರ್ಚೆಗೆ ಆಸ್ಪದ ಮಾಡಿ ಕೊಟ್ಟಿದ್ದ ಬಾಲಕಿಯ ವೈದ್ಯಕೀಯ ಪರೀಕ್ಷೆ ವರದಿ ಬಂದಿದ್ದು, ಈಕೆ ಚಿಕನ್ ಪಾಕ್ಸ್ ವೈರಸ್‌ನಿಂದ ಬಳಲುತ್ತಿರುವುದು ದೃಢಪಟ್ಟಿದೆ.

ಕೆ.ಆರ್.ನಗರ ಮೂಲದ 12 ವರ್ಷದ ಈ ಬಾಲಕಿಯಲ್ಲಿ ಶಂಕಿತ ಮಂಕಿಪಾಕ್ಸ್ ಲಕ್ಷಣದ ಹಿನ್ನೆಲೆಯಲ್ಲಿ ಆತಂಕ ಉಂಟಾಗಿತ್ತು. ಬಾಲಕಿಯ ಕೈ–ಕಾಲು ಸೇರಿದಂತೆ ಮೈಮೇಲೆ ಸಿಡುಬು ಲಕ್ಷಣದಂತೆ ಗುಳ್ಳೆಯಾಕಾರದ ಗಾಯ ಕಂಡು ಬಂದಿತ್ತು. ಖಾಸಗಿ ಮಕ್ಕಳ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಬಾಲಕಿಯ ರಕ್ತದ ಮಾದರಿಯನ್ನು ಹೆಚ್ಚಿನ ಪರೀಕ್ಷೆಗೆಂದು ಬೆಂಗಳೂರಿನ ಪ್ರಯೋಗಾಲಯಕ್ಕೆ ರವಾನಿಸಲಾಗಿತ್ತು. ವರದಿ ಬಂದಿದ್ದು, ಮಂಕಿಪಾಕ್ಸ್ ನೆಗೆಟಿವ್ ದಾಖಲಾಗಿದೆ. ಆದರೆ, ಬಾಲಕಿಯಲ್ಲಿ ಚಿಕನ್‌ಪಾಕ್ಸ್ ವೈರಸ್ ಪತ್ತೆಯಾಗಿದೆ. ಇದರಿಂದ ಆರೋಗ್ಯ ಇಲಾಖೆ ನಿಟ್ಟುಸಿರು ಬಿಟ್ಟಿದೆ.

ಚಿಕಿತ್ಸೆ ಮುಂದುವರಿಕೆ: ಚಿಕನ್‌ಪಾಕ್ಸ್ ಸೋಂಕು ದೃಢಪಟ್ಟ ಹಿನ್ನೆಲೆಯಲ್ಲಿ ಬಾಲಕಿಗೆ ಚಿಕಿತ್ಸೆ ಮುಂದುವರೆಸಲಾಗಿದೆ. ಆಸ್ಪತ್ರೆಗೆ ಕರೆತಂದ ದಿನದಿಂದಲೂ ಬಾಲಕಿಯ ಆರೋಗ್ಯ ಸ್ಥಿತಿ ಉತ್ತಮ ವಾಗಿಯೇ ಇರುವುದರಿಂದ ಇನ್ನೆರಡು ದಿನದಲ್ಲಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುವ ಸಾಧ್ಯತೆ ಇದೆ. ಮೈ ಮೇಲೆ ಆಗಿರುವ ಗಾಯವೂ ಮಾಸುತ್ತಿದೆ ಎಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ.

ಅಪರೂಪದ ಲಕ್ಷಣ: ಈ ಸಂಬಂಧ' ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಶಂಕಿತ ಮಂಕಿಪಾಕ್ಸ್ ಸೋಂಕಿಗೆ ಒಳಗಾಗಿದ್ದಾಳೆ ಎಂಬ ಅನುಮಾನ ವ್ಯಕ್ತವಾಗಿದ್ದ 12 ವರ್ಷದ ಬಾಲಕಿಯ ವೈದ್ಯಕೀಯ ವರದಿಯಲ್ಲಿ ನೆಗೆಟಿವ್ ಬಂದಿದೆ. ಬಾಲಕಿಯ ಕೈ–ಕಾಲು, ಪಾದದ ಬಳಿ ಗುಳ್ಳೆಯೊಂದಿಗೆ ಗಾಯಗಳಾಗಿದ್ದರಿಂದ ಮಂಕಿಪಾಕ್ಸ್ ಶಂಕೆ ವ್ಯಕ್ತವಾಗಿತ್ತು. ಈ ಪ್ರಕರಣವನ್ನು ಶಂಕಿತ ಮಂಕಿಪಾಕ್ಸ್ ಎಂದು ಪರಿಗಣಿಸಿ ಚಿಕಿತ್ಸೆ ನೀಡಲಾಗುತ್ತಿತ್ತು. ಹೆಚ್ಚಿನ ಪರೀಕ್ಷೆಗಾಗಿ ರಕ್ತದ ಮಾದರಿಯನ್ನು ಬೆಂಗಳೂರಿನ ಪ್ರಯೋಗಾಲಯಕ್ಕೆ ಕಳುಹಿಸಲಾಗಿತ್ತು. ಬಾಲಕಿಯಲ್ಲಿ ಚಿಕನ್‌ಪಾಕ್ಸ್ ವೈರಸ್ ಕಾಡುತ್ತಿದ್ದರೂ ಮಂಕಿಪಾಕ್ಸ್ ಗುಣಲಕ್ಷಣ ಕಂಡು ಬಂದಿದ್ದರಿಂದ ಇದು ಅಪರೂಪದ ಪ್ರಕರಣ ಎಂದು ಪರಿಗಣಿಸಲಾಗಿದೆ ಎಂದರು.

ಚಿಕನ್‌ಪಾಕ್ಸ್ ವೈರಸ್ ಅಪಾಯಕಾರಿಯಲ್ಲ. ಬಾಲಕಿಯ ಆರೋಗ್ಯದಲ್ಲಿ ಚೇತರಿಕೆ ಕಂಡಿದೆ. ಆತಂಕಪಡುವ ಅಗತ್ಯವಿಲ್ಲ. ಕೆಮ್ಮು, ಜ್ವರದಂತೆ ಚಿಕನ್‌ಪಾಕ್ಸ್ ಕೂಡ ಎಲ್ಲೆಡೆ ಕಂಡು ಬರುತ್ತದೆ. ಇದೊಂದು ವೈರಸ್ ಆಗಿದ್ದು, ಈ ಹಿಂದೆಯೂ ಹಲವರಲ್ಲಿ ಕಂಡು ಬಂದಿತ್ತು. ಈ ವೈರಸ್‌ನಿಂದ ಪ್ರಾಣಾಪಾಯವಿಲ್ಲ. ಸೂಕ್ತ ಚಿಕಿತ್ಸೆಯೂ ಲಭ್ಯವಿದೆ ಎಂದು ತಿಳಿಸಿದರು.

ಚಿಕನ್‌ಗೂ ಚಿಕನ್‌ಪಾಕ್ಸ್‌ಗೂ ಸಂಬಂಧವಿಲ್ಲ: ಬಾಲಕಿಯಲ್ಲಿ ಪತ್ತೆಯಾಗಿರುವ ಚಿಕನ್‌ಪಾಕ್ಸ್ ವೈರಸ್‌ಗೂ ಕೋಳಿ ಮಾಂಸಕ್ಕೂ ಯಾವುದೇ ಸಂಬಂಧವಿಲ್ಲ. ಮಾಂಸಾಹಾರ ಸೇವನೆಯಿಂದ ಈ ವೈರಸ್ ಹರಡುವುದಿಲ್ಲ. ಇದು ಸಾಮಾನ್ಯ ಜ್ವರ, ಕೆಮ್ಮಿನಂತೆ ಕಂಡು ಬರುವ ವೈರಸ್ ಆಗಿದೆ ಎಂದು ಸ್ಪಷ್ಟಪಡಿಸಿದರು.

ಚಾ.ನಗರದಲ್ಲಿ ಭಾರೀ, ಮೈಸೂರು, ಕೊಡಗು, ಮಂಡ್ಯದಲ್ಲಿ ಸಾಧಾರಣ ಮಳೆ ಸಾಧ್ಯತೆ

ಮೈಸೂರು, ಅ.15(ಆರ್‌ಕೆಬಿ)– ಹವಾಮಾನ ಇಲಾಖೆ ಮುನ್ಸೂಚನೆ ಪ್ರಕಾರ ನಾಲ್ಕು ದಿನ ಚಾಮರಾಜನಗರ ಜಿಲ್ಲೆಯಲ್ಲಿ ಭಾರೀ, ಕೊಡಗು, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಲಿದೆ.

ಚಾಮರಾಜನಗರ ಜಿಲ್ಲೆಯಲ್ಲಿ ಅ.16ರಂದು 58 ಮಿ.ಮೀ., 17ರಂದು 50 ಮಿ.ಮೀ., 18ರಂದು 23 ಮತ್ತು 19ರಂದು 21 ಮಿ.ಮೀ. ಮಳೆಯಾಗಲಿದೆ. ಕೊಡಗು ಜಿಲ್ಲೆಯಲ್ಲಿ ಇದೇ ಅವಧಿಯಲ್ಲಿ ಕ್ರಮವಾಗಿ 41, 30, 27 ಮತ್ತು 25 ಮಿ.ಮೀ. ಮಳೆಯಾಗಲಿದೆ. ಮೈಸೂರು ಜಿಲ್ಲೆಯಲ್ಲಿ ಕ್ರಮವಾಗಿ 14, 14, 9 ಮತ್ತು 8 ಮಿ.ಮೀ., ಮಂಡ್ಯ ಜಿಲ್ಲೆಯಲ್ಲಿ ಕ್ರಮವಾಗಿ 31, 23, 16 ಮತ್ತು 15 ಎಂ.ಎಂ. ಮಳೆಯಾಗಲಿದೆ ಎಂದು ನಾಗನಹಳ್ಳಿ ಹವಾಮಾನ ಕೃಷಿ ಕ್ಷೇತ್ರ ವಿಭಾಗದ ಅಧಿಕಾರಿಗಳು ತಿಳಿಸಿದ್ದಾರೆ.

ದೀರ್ಘಾವಧಿ ಹವಾಮಾನ ಮುನ್ಸೂಚನೆಯ ಪ್ರಕಾರ ಅ.21ರಿಂದ 27ರವರೆಗೆ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಂಭವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.



ಜೆಡಿಎಸ್ ಪಕ್ಷದ ಮೈಸೂರು ನಗರ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದ ಜಿ.ಮಂಜುಗೌಡ ಅವರಿಗೆ ಪಕ್ಷದ ರಾಜ್ಯ ಕಾರ್ಯದರ್ಶಿ ಅಬ್ದುಲ್ಲಾ, ವಿಧಾನಪರಿಷತ್ ಸದಸ್ಯ ಮಂಜೇಗೌಡ ಹಾಗೂ ನಗರ ಅಧ್ಯಕ್ಷ ಚೆಲುವೇಗೌಡ ಆದೇಶ ಪತ್ರವನ್ನು ನೀಡಿ, ಅಭಿನಂದಿಸಿದರು. ಈ ಸಂದರ್ಭದಲ್ಲಿ ಜೆಡಿಎಸ್ ನಗರ ಪಾಲಿಕೆ ಸದಸ್ಯರು ಹಾಗೂ ನಗರ ಘಟಕದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರು ಹಾಜರಿದ್ದರು

ವಾಟ್ಸಾಪ್ ಡಿಪಿಗೆ ಬೇರೆಯವರ ಫೋಟೋ ಹಾಕಿ ಅವರ ಸ್ನೇಹಿತರಿಂದ ಲಕ್ಷಾಂತರ ರೂ.ಸುಲಿಗೆ

- ಕಲಾವಿದರಿಗೆ ಚೆಸ್ಕಾಂ ಹೆಸರಲ್ಲಿ ವಂಚನೆ
- ಟ್ರೇಡಿಂಗ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಲಾಭದ ಆಸೆ ತೋರಿಸಿ ಮೋಸ
- ಹೆಚ್ಚುತ್ತಿವೆ ಆನ್‌ಲೈನ್ ವಂಚನೆಗಳು

ಮೈಸೂರು, ಅ. 15– ಸೈಬರ್ ಕ್ರೈಂ ವಂಚಕರ ಹಾವಳಿ ದಿನೇ ದಿನೆ ಹೆಚ್ಚಾಗುತ್ತಿದ್ದು, ಈ ದುಷ್ಕರ್ಮಿಗಳು ವಂಚನೆಗೆ ಹೊಸ ಹೊಸ ವಿಧಾನಗಳನ್ನು ಹುಡುಕಿಕೊಂಡಿದ್ದಾರೆ. ತಮ್ಮ ವಾಟ್ಸಾಪ್ ಡಿಪಿಗೆ ಬೇರೆಯವರ ಫೋಟೋ ಹಾಕಿಕೊಂಡು ಅವರ ಸ್ನೇಹಿತರಿಗೆ ಸಂದೇಶ ಕಳುಹಿಸಿ ವಂಚಿಸಿರುವ ಬಗ್ಗೆ ವರದಿಯಾಗಿದೆ.

ಕ್ರೈಂ ಬಾಕ್ಸ್

ಮೈಸೂರಿನ ವಿವಿ ಮೊಹಲ್ಲಾ ನಿವಾಸಿ ಕೃಷ್ಣೇಗೌಡ(65) ಎಂಬುವರ ಸ್ನೇಹಿತರ ಫೋಟೋವನ್ನು ವಾಟ್ಸಾಪ್ ಡಿಪಿಯಲ್ಲಿ ಹಾಕಿಕೊಂಡು ಮೆಡಿಕಲ್ ಎಮರ್ಜೆನ್ಸಿ ಇದೆ ಎಂದು ತಿಳಿಸಿ 4.98 ಲಕ್ಷ ರೂ. ವರ್ಗಾಯಿಸುವಂತೆ ಅವರಿಗೆ ಸಂದೇಶ ರವಾನಿಸಲಾಗಿದೆ. ಅದನ್ನು ನಂಬಿದ ಕೃಷ್ಣೇಗೌಡರು, ವಂಚಕರು ರವಾನಿಸಿದ್ದ ಬ್ಯಾಂಕ್ ಖಾತೆಗೆ 4.98 ಲಕ್ಷ ವರ್ಗಾವಣೆ ಮಾಡಿ, ಮೋಸ ಹೋಗಿದ್ದಾರೆ.

ಮತ್ತೊಂದು ಪ್ರಕರಣದಲ್ಲಿ ಕಲಾವಿದ ಮೇಟಗಳ್ಳಿ ನಿವಾಸಿ ಅಜಿತ್ ನಿನಾನ್ ಮ್ಯಾಥ್ಯೂ ಅವರಿಗೆ ಚೆಸ್ಕಾಂನಿಂದ ಕರೆ ಮಾಡುತ್ತಿರುವುದಾಗಿ ತಿಳಿಸಿದ ವಂಚಕ ಕ್ವಿಕ್ ಸಪೋರ್ಟ್ ಆ್ಯಪ್ ಇನ್‌ಸ್ಟಾಲ್ ಮಾಡುವಂತೆ ಹೇಳಿದ್ದಾನೆ. ಆಪ್ ಇನ್‌ಸ್ಟಾಲ್ ಮಾಡುತ್ತಿದ್ದಂತೆಯೇ ಅವರ ಬ್ಯಾಂಕ್ ಖಾತೆಯಿಂದ 14,09,421 ರೂ. ಕಡಿತವಾಗಿದೆ.

ಇನ್ನೊಂದು ಪ್ರಕರಣದಲ್ಲಿ ಮೈಸೂರಿನ ಗಿರಿದರ್ಶಿನಿ ಲೇಔಟ್ ನಿವಾಸಿ ಪಿ.ವಿ. ವಾದಿರಾಜ್ ಅವರಿಗೆ ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾದ ವಂಚಕ ಟ್ರೇಡಿಂಗ್‌ನಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ದೊರೆಯುತ್ತದೆ ಎಂದು ನಂಬಿಸಿ 1.45 ಲಕ್ಷ ರೂ.ಗಳನ್ನು ಆನ್‌ಲೈನ್ ಮೂಲಕ ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾನೆ. ಈ ಮೂರು ಪ್ರಕರಣ ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿದೆ.

ಪ್ರತಿಷ್ಠಿತ ರೆಸಾರ್ಟ್ ವೆಬ್‌ಸೈಟ್‌ನಲ್ಲಿ ಮೊಬೈಲ್ ನಂಬರ್ ಉಲ್ಲೇಖಿಸಿ ಗ್ರಾಹಕರಿಗೆ ವಂಚನೆ


ಮೈಸೂರು, ಅ. 15– ಪ್ರತಿಷ್ಠಿತ ರೆಸಾರ್ಟ್‌ನ ವೆಬ್‌ಸೈಟ್‌ನಲ್ಲಿ ತನ್ನ ಮೊಬೈಲ್ ಸಂಖ್ಯೆಯನ್ನು ನಮೂದಿಸಿರುವ ವಂಚಕ ರೆಸಾರ್ಟ್ ಗ್ರಾಹಕರಿಂದ ಅಕ್ರಮವಾಗಿ ಆನ್‌ಲೈನ್ ಮೂಲಕ ಹಣ ವರ್ಗಾವಣೆ ಮಾಡಿಕೊಳ್ಳುತ್ತಿರುವ ಪ್ರಕರಣ ಬೆಳಕಿಗೆ ಬಂದಿದೆ.

ಹೋಟೆಲ್ ರಾಯಲ್ ಆರ್ಕಿಡ್ ಹೋಟೆಲ್ಸ್ ಲಿಮಿಟೆಡ್ ಗ್ರೂಪ್‌ಗೆ ಸೇರಿದ ಬಾವಲಿ ಚೆಕ್‌ಪೋಸ್ಟ್ ಬಳಿ ಇರುವ ರಿಜೆಂಟಾ ಕಬಿನಿ ಸ್ಪ್ರಿಂಗ್ಸ್ ರೆಸಾರ್ಟ್ ವೆಬ್‌ಸೈಟ್‌ನ ಗೂಗಲ್ ಬಿಸಿನೆಸ್ ಕಾಲಂನಲ್ಲಿ ವಂಚಕ 8538099326 ಮೊಬೈಲ್ ಸಂಖ್ಯೆಯನ್ನು ನಮೂದಿಸಿದ್ದಾನೆ. ರೆಸಾರ್ಟ್‌ನ ಗ್ರಾಹಕರಾದ ಶಿರಾಲಿ ಡಿ. ಮೇಹರ್ ಎಂಬುವರು ಅಕ್ಟೋಬರ್ 7ರಂದು ವೆಬ್‌ಸೈಟ್‌ನಲ್ಲಿ ಮೊಬೈಲ್ ಸಂಖ್ಯೆ ನೋಡಿ ಆತನಿಗೆ ಕರೆ ಮಾಡಿದ್ದಾರೆ. ಆಗ ವಂಚಕ ಅವರೊಂದಿಗೆ ವಾಟ್ಸಾಪ್‌ನಲ್ಲಿ ಚಾಟ್ ಮಾಡಿ ರೂಂ ಬುಕ್ ಮಾಡಲು 10 ಸಾವಿರ ರೂ.ಗಳನ್ನು ಬ್ಯಾಂಕ್ ಅಕೌಂಟ್‌ವೊಂದಕ್ಕೆ ವರ್ಗಾವಣೆ ಮಾಡಿಸಿಕೊಂಡಿದ್ದಾನೆ.

ಶಿರಾಲಿ ಡಿ. ಮೇಹರ್ ಅವರಿಗೆ ರೂಂ ಬುಕ್ಕಿಂಗ್ ಕನ್‌ಫರ್ಮ್ ಆಗದ ಕಾರಣ ಅವರು ಲ್ಯಾಂಡ್‌ಲೈನ್‌ಗೆ ಕರೆ ಮಾಡಿದಾಗ ಈ ವಂಚನೆ ಪ್ರಕರಣ ಬೆಳಕಿಗೆ ಬಂದಿದೆ. ವೆಬ್‌ಸೈಟ್‌ನಲ್ಲಿ ಅಪರಿಚಿತ ಮೊಬೈಲ್ ಸಂಖ್ಯೆ ನಮೂದಾಗಿರುವುದನ್ನು ಗಮನಿಸಿದ ರೆಸಾರ್ಟ್‌ನವರು, ಸದರಿ ನಂಬರ್ ಅನ್ನು ಡಿಲೀಟ್ ಮಾಡಲು ಪ್ರಯತ್ನಿಸಿದಾಗ ಅದು ಸಾಧ್ಯವಾಗಲಿಲ್ಲ. ಅಲ್ಲದೇ, ಸತತವಾಗಿ ರೆಸಾರ್ಟ್‌ನ ಗ್ರಾಹಕರು ಸದರಿ ಮೊಬೈಲ್ ನಂಬರ್‌ಗೆ ಕರೆ ಮಾಡಿ ವಂಚನೆಗೊಳಗಾಗುತ್ತಿರುವುದು ತಿಳಿದು ಬಂದ ಹಿನ್ನೆಲೆಯಲ್ಲಿ ರಾಯಲ್ ಆರ್ಕಿಡ್ ಮೆಟ್ರೋಪೋಲ್ ಹೋಟೆಲ್‌ನ ವಸತಿ ಮ್ಯಾನೇಜರ್ ಹರೀಶ್‌ಕುಮಾರ್ ಅವರು ಈ ಸಂಬಂಧ ಮೈಸೂರು ಜಿಲ್ಲಾ ಸೆನ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವೈದ್ಯಕೀಯ ವಿದ್ಯಾರ್ಥಿಯ ಕ್ರೀಡಾ ಸಾಧನೆ

ಈಜು ಸ್ಪರ್ಧೆಯಲ್ಲಿ 100ಕ್ಕೂ ಹೆಚ್ಚು ಪದಕ, ಪ್ರಶಸ್ತಿಗಳ ಗರಿ



ಮೈಸೂರು, ಅ.15(ಜಿಎ)– ಮೈಸೂರು ವೈದ್ಯಕೀಯ ವಿದ್ಯಾರ್ಥಿಯೊಬ್ಬರು ರಾಜ್ಯ, ರಾಷ್ಟ್ರ, ಅಂತರರಾಷ್ಟ್ರೀಯ ಮಟ್ಟದ ಈಜು ಸ್ಪರ್ಧೆಯಲ್ಲಿ 100ಕ್ಕೂ ಹೆಚ್ಚು ಪದಕ, ಪ್ರಶಸ್ತಿಗಳನ್ನು ಗಳಿಸುವ ಮೂಲಕ ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ್ದಾರೆ.



ಮೈಸೂರಿನ ಜೆಸಿ ನಗರದ ಹೇಮಕುಮಾರ್ ಮತ್ತು ಸುಚಿತ್ರ ದಂಪತಿ ಪುತ್ರ ಓಂಕುಮಾರ್ (22) ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ 4ನೇ ವರ್ಷದ ವೈದ್ಯಕೀಯ ವಿದ್ಯಾರ್ಥಿ. ಇವರು ಈಜು ಸ್ಪರ್ಧೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ರಾಜ್ಯ ಹಾಗೂ ದೇಶವನ್ನು ಪ್ರತಿನಿಧಿಸಿ, ಸಾಕಷ್ಟು ಪ್ರಶಸ್ತಿ ಗೆದ್ದಿದ್ದಾರೆ.

ಓಂಕುಮಾರ್, ಐದು ವರ್ಷದ ಬಾಲಕ ನಾಗಿದ್ದಾಗಿನಿಂದಲೇ ಈಜು ತರಬೇತಿ ಪಡೆದಿದ್ದು, ಈವರೆಗೂ ವರ್ಲ್ಡ್ ಚಾಂಪಿಯನ್ ಶಿಪ್, ಏಷಿಯನ್ ಗೇಮ್ಸ್, ಆಲ್ ಇಂಡಿಯಾ ಓಪನ್ ವಿಭಾಗ, ಅಕ್ವಾಥಾನ್ ಮತ್ತು ಟ್ರೈಕಾಥ್ಲಾನ್ ಸೇರಿದಂತೆ ವಿವಿಧ ಕ್ರೀಡಾಕೂಟ ಗಳಲ್ಲಿ ಭಾಗವಹಿಸಿ ಸಾಧನೆ ಮೆರೆದಿದ್ದಾರೆ.

ವರ್ಲ್ಡ್ ಚಾಂಪಿಯನ್‌ಶಿಪ್‌ನಲ್ಲಿ 64ನೇ ರ್‍ಯಾಂಕ್, ಏಷಿಯನ್ ಗೇಮ್ಸ್‌ನಲ್ಲಿ 11ನೇ ರ್‍ಯಾಂಕ್ ಪಡೆದಿದ್ದಾರೆ. 2018ರಲ್ಲಿ ನಡೆದ ಆಲ್ ಇಂಡಿಯಾ ಓಪನ್ ಈಜು ವಿಭಾಗದಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಚೆನ್ನೈನಲ್ಲಿ ನಡೆದ ಅಕ್ವಾಥಾನ್ ಓಪನ್ ವಾಟರ್ ಸ್ವಿಮ್ಮಿಂಗ್‌ನಲ್ಲಿ 1.5 ಕಿಮೀ ಮೀಟರ್ ಸ್ವಿಮ್ಮಿಂಗ್ ಜೊತೆಗೆ 5 ಕಿಮೀ ಓಟದಲ್ಲೂ 3ನೇ ಸ್ಥಾನ ಪಡೆದು ಕೊಂಡಿದ್ದಾರೆ. ಕೇರಳದಲ್ಲಿ ನಡೆದ ಟ್ರಯಥ್ಲಾನ್ ಸ್ಪರ್ಧೆಯಲ್ಲಿ 1.5ಕಿಮೀ ಸ್ವಿಮ್ಮಿಂಗ್, 40 ಕಿಮೀ ಸೈಕ್ಲಿಂಗ್ ಹಾಗೂ 20 ಕಿಮೀ ಓಡಿ 14ನೇ ರ್‍ಯಾಂಕ್ ತಮ್ಮದಾಗಿಸಿಕೊಂಡಿದ್ದು, ಕಳೆದ ನಾಲ್ಕು ವರ್ಷದಿಂದ ನಡೆದ ಅಂತರ ವಿವಿಗಳ ಈಜು ಸ್ಪರ್ಧೆಯಲ್ಲಿ, 16 ವಿಭಾಗ ಗಳಲ್ಲಿ ಮೊದಲ ಸ್ಥಾನ ಗಿಟ್ಟಿಸಿಕೊಳ್ಳುವ ಮೂಲಕ ಸಾಧನೆ ಹಾದಿ ಮುಂದುವರೆಸಿದ್ದಾರೆ. ಪ್ರತಿನಿತ್ಯ ಬೆಳಗ್ಗೆ–ಸಂಜೆ ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ಈಜು ಕೊಳದಲ್ಲಿ ತಪ್ಪದೆ ತರಬೇತಿ ಪಡೆಯುತ್ತಾ ಬಂದಿದ್ದಾರೆ ಓದಿಗಾಗಿ ಸಮಯವನ್ನು ಮೀಸಲಿಟ್ಟು ಒಂದು ಗಂಟೆ ಜಿಮ್ ಮಾಡಿ ತಮ್ಮ ಮುಂದಿನ ಸ್ಪರ್ಧೆಗೆ ನಿತ್ಯವೂ ಕಸರತ್ತು ನಡೆಸುತ್ತಿದ್ದಾರೆ.

ಐರನ್ ಮ್ಯಾನ್ ಚಾಲೆಂಜ್: ಗೋವಾದಲ್ಲಿ ಐರನ್ ಮ್ಯಾನ್ ಚಾಲೆಂಜ್ ಸ್ಪರ್ಧೆಯೂ ಮುಂದಿನ ವರ್ಷ ನವೆಂಬರ್‌ನಲ್ಲಿ ನಡೆಯಲಿದ್ದು, ಇದರಲ್ಲಿ 1.5ಕಿಮೀ ಸ್ವಿಮ್ಮಿಂಗ್, 90 ಕಿಮೀ ಸೈಕ್ಲಿಂಗ್ ಹಾಗೂ 21 ಕಿಮೀ ಓಡಬೇಕಿದೆ. ಇದರಲ್ಲಿ ವಿಜೇತರಾದವರಿಗೆ ಅಮೆರಿಕದಲ್ಲಿ ನಡೆಯುವ ವಿಶ್ವ ಮಟ್ಟದ ಕ್ಲಿಷ್ಟಕರ ಐರನ್ ಮ್ಯಾನ್ ಚಾಲೆಂಜ್‌ನಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸ ಲಾಗುತ್ತದೆ ಈ ಸ್ಪರ್ಧೆಯಲ್ಲಿ 3ಕಿಮೀ ಸ್ವಿಮ್ಮಿಂಗ್, 180 ಕಿಮೀ ಸೈಕ್ಲಿಂಗ್ ಮತ್ತು 42 ಕಿಮೀ ಓಡಬೇಕಿದೆ. ಸದ್ಯ ಓಂಕುಮಾರ್ ಮುಂದಿನ ತಿಂಗಳು ಗೋವಾದಲ್ಲಿ ನಡೆಯುವ ಆಫ್ ಐರನ್ ಮ್ಯಾನ್ ಸ್ಪರ್ಧೆಯಲ್ಲಿ ಸಾಧನೆ ಮೆರೆದು, ಅಮೆರಿಕಾದಲ್ಲಿ ಆಯೋಜಿಸುವ ಸ್ಪರ್ಧೆ ಯಲ್ಲಿ ಸ್ಪರ್ಧಿಸುವ ಕನಸು ಹೊಂದಿದ್ದಾರೆ.



ನನ್ನ ತಂದೆ–ತಾಯಿ, ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಗೂ ಪ್ರೋತ್ಸಾಹ ನೀಡುತ್ತಿದ್ದಾರೆ. ನನ್ನ ಪುಟ್ಟ ಸಾಧನೆಗೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ. ದ್ರಾಕ್ಷಾಯಿಣಿ ಮತ್ತು ಬೋಧಕರಾದ ಸಾರಿಕಾ, ಸ್ಟೂಡೆಂಟ್ ವೆಲ್ಫೇರ್‌ನ ಚಂದ್ರಶೇಖರ್ ಅವರಿಗೆ ಧನ್ಯವಾದ ತಿಳಿಸುತ್ತೇನೆ. ಈ ಕ್ಷೇತ್ರದಲ್ಲಿ ಏನಾದರೂ ಸಾಧನೆ ಮಾಡಬೇಕು ಎಂಬ ಬಯಕೆ ಇದೆ. ಎಲ್ಲಾ ಕ್ಷೇತ್ರಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಆದರೆ, ಕ್ರೀಡಾ ಕ್ಷೇತ್ರದಲ್ಲಿ ಇಂತಹ ಪ್ರಗತಿ ಇಲ್ಲ. ಅದನ್ನು ಅಳವಡಿಸಬೇಕಿದೆ.
- ಓಂಕುಮಾರ್, ಈಜುಪಟು

ಓಂಕುಮಾರ್ ನಮ್ಮ ಸಂಸ್ಥೆ ಹಿರಿಮೆ ಹೆಚ್ಚಿಸಿದ್ದು, ಕ್ರೀಡೆ ಮತ್ತು ಶಿಕ್ಷಣವನ್ನು ಸಮತೋಲನದಲ್ಲಿ ಕಾಯ್ದುಕೊಂಡಿದ್ದಾನೆ. ಇಂತಹ ವಿದ್ಯಾರ್ಥಿಗಳು ಸಾಧನೆ ಮಾಡುವ ವಿಶ್ವಾಸವಿದೆ. ಕ್ರೀಡೆಯಲ್ಲಿ ಸೋಲು, ಗೆಲುವು ಎರಡನ್ನು ನೋಡುವುದರಿಂದ ಮಾನಸಿಕ ವ್ಯಕ್ತಿತ್ವವನ್ನು ವೃದ್ಧಿಸಿಕೊಂಡಿರುತ್ತಾರೆ. ಕ್ರೀಡೆಯೂ ಒಂದು ರೀತಿಯಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಮಾನವೀಯತೆಯನ್ನು ಬೆಳೆಸಿಕೊಳ್ಳಲು ಸಹಕಾರಿಯಾಗುತ್ತದೆ.
- ಡಾ.ಕೆ.ಆರ್. ದ್ರಾಕ್ಷಾಯಿಣಿ, ಡೀನ್ ಅಂಡ್ ಡೈರೆಕ್ಟರ್, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

ವೆಂಕಟಗಿರಿ ಕಾಲೋನಿಯಲ್ಲಿ ಜಿಲ್ಲಾಧಿಕಾರಿಗಳ ಗ್ರಾಮ ವಾಸ್ತವ್ಯ ಕಾರ್ಯಕ್ರಮ

ಅರಣ್ಯಭೂಮಿ ಸಾಗುವಳಿದಾರರ ಸಮಸ್ಯೆ ಬಗೆಹರಿಸಲು ಕ್ರಮ

ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಭರವಸೆ

ನಂಜನಗೂಡು, ಅ.15– ಅರಣ್ಯ ಭೂಮಿ ಸಾಗುವಳಿದಾರರಿಗೆ ಆರ್‌ಟಿಸಿಯಲ್ಲಿ ಹೆಸರಿಲ್ಲದ ಹಿನ್ನೆಲೆ ಹಾಗೂ ಸಾಗುವಳಿ ದುರಸ್ತಿ ನೆಪವೊಡ್ಡಿ ಕಾಡುಪ್ರಾಣಿಗಳಿಂದಾದ ಬೆಳೆ ಹಾನಿಗೆ ಪರಿಹಾರ ನೀಡದಿರುವ ಬಗ್ಗೆ ಸಾಕಷ್ಟು ದೂರುಗಳು ಕೇಳಿ ಬಂದಿದ್ದು, ಅರಣ್ಯಾಧಿಕಾರಿಗಳ ಜೊತೆ ಜಂಟಿ ಸರ್ವೆ ಕಾರ್ಯ ನಡೆಸಿ ಸಮಸ್ಯೆ ಬಗೆಹರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಭರವಸೆ ನೀಡಿದರು.

ತಾಲೂಕಿನ ಬಂಕಹಳ್ಳಿ ಸಮೀಪದ ವೆಂಕಟಗಿರಿ ಕಾಲೋನಿಯ ಗಿರಿಜನ ಆಶ್ರಮ ಶಾಲಾವರಣದಲ್ಲಿ ನಡೆದ ಜಿಲ್ಲಾಧಿಕಾರಿಗಳ ಗ್ರಾಮ ವಾಸ್ತವ್ಯ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಅಹವಾಲು ಆಲಿಸಿದ ಜಿಲ್ಲಾಧಿಕಾರಿ, ಸತತವಾಗಿ ಸಾಗುವಳಿ ಮಾಡುತ್ತಿರುವ ರೈತರ ಆರ್‌ಟಿಸಿಯಲ್ಲಿ ಹೆಸರು ನಮೂದಾಗಿದ್ದರೆ ಮಾತ್ರ ಅವರು ಬೆಳೆ ಪರಿಹಾರ ಪಡೆಯಲು ಅರ್ಹರಾಗುತ್ತಾರೆ. ಹೆಸರಿಲ್ಲದಿದ್ದರೆ ತೊಂದರೆ ಅನುಭವಿಸಬೇಕಾಗುತ್ತದೆ. ಈ ಸಮಸ್ಯೆ ಪರಿಹರಿಸುವ ಸಲುವಾಗಿ ಅರಣ್ಯಾಧಿಕಾರಿಗಳ ಜೊತೆ ಜಂಟಿ ಸರ್ವೆ ಕಾರ್ಯ ನಡೆಸಿ ರೈತರಿಗೆ ಆರ್‌ಟಿಸಿಯಲ್ಲಿ ಹೆಸರು ನಮೂದಿಸಲು ಕ್ರಮ ವಹಿಸಲಾಗುವುದು. ಜೊತೆಗೆ ಸಾಗುವಳಿ ಪತ್ರ ನೀಡಲು ಸರ್ಕಾರ ಫಾರಂ ನಂ.53, 56, 57ರ ಅಡಿ ಅರ್ಜಿ ಸಲ್ಲಿಸಲು 1 ವರ್ಷ ಕಾಲಾವಕಾಶ ವಿದೆ. ಅರ್ಜಿ ಸಲ್ಲಿಸಿರುವ ರೈತರಿಗೆ ಶಾಸಕರ ನೇತೃತ್ವದಲ್ಲಿ ಸಭೆ ನಡೆಸಿ ಸಾಗುವಳಿ ಪತ್ರ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಇತ್ತೀಚೆಗೆ ಹುಲಿ ದಾಳಿಯಿಂದ ಮೃತಪಟ್ಟ ಪುಟ್ಟಸ್ವಾಮಿ ಎಂಬ ರೈತನ ಕುಟುಂಬಕ್ಕೆ ಸರ್ಕಾರ 7.5 ಲಕ್ಷ ರೂ. ಪರಿಹಾರ ನೀಡುವ ಭರವಸೆ ನೀಡಿತ್ತು. ಈವರೆಗೆ 2.5 ಲಕ್ಷ ಮಾತ್ರ ನೀಡಲಾಗಿದೆ. ಬಾಕಿ ಪರಿಹಾರಧನ ನೀಡಿಲ್ಲ ಎಂಬುದಾಗಿ ಗ್ರಾಮಸ್ಥರು ದೂರಿದರು. ಈ ವೇಳೆ ಅರಣ್ಯಾಧಿಕಾರಿಗಳು ರೈತನ ಮರಣೋತ್ತರ ಪರೀಕ್ಷೆ ವರದಿ ಸೇರಿದಂತೆ ಅಗತ್ಯ ದಾಖಲೆ ಬಂದಿಲ್ಲ. ಆದ್ದರಿಂದ ಪರಿಹಾರ ನೀಡಿಲ್ಲ ಎಂಬ ಹಾರಿಕೆ ಉತ್ತರ ನೀಡಿದರು. ಇದರಿಂದ ಸಿಡಿಮಿಡಿಗೊಂಡ ಜಿಲ್ಲಾಧಿಕಾರಿಗಳು ನೀವೇ ಕ್ರಮವಹಿಸಿ ಅಗತ್ಯ ದಾಖಲೆ ಪಡೆದು ಪರಿಹಾರ ಒದಗಿಸಲು ಮುಂದಾಗಿ ಎಂದು ಸೂಚಿಸಿದರು.

ಪೋಡಿಮುಕ್ತ ಗ್ರಾಮ: ಕಾರ್ಯಕ್ರಮದಲ್ಲಿ ಪೋಡಿ ದುರಸ್ತಿಗೆ ಸಂಬಂಧಿಸಿದ ಅರ್ಜಿಗಳು ಹೆಚ್ಚಾಗಿವೆ. ಸಮಸ್ಯೆ ಪರಿಹರಿಸುವಂತೆ ಮುಖಂಡರು ಮನವಿ ಮಾಡಿದ್ದಾರೆ. ಆದ್ದರಿಂದ ಪೋಡಿ ಮುಕ್ತ ಅಭಿಯಾನ ನಡೆಸಿ ಒಂದೇ ಬಾರಿಗೆ ಸಮರ್ಪಕ ಪರಿಹಾರ ಒದಗಿಸುವಂತೆ ತಹಸೀಲ್ದಾರ್‌ಗೆ ಸೂಚನೆ ನೀಡಲಾಗಿದೆ ಎಂದರು.

ಗಿರಿಜನರಿಗೆ ಸೌಲಭ್ಯಗಳ ಅರಿವು ಮೂಡಿಸಿ: ಗಿರಿಜನರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳ ಬಗ್ಗೆ ಅರಿವಿಲ್ಲ. ಅವರಿಗೆ ಮಾಹಿತಿ ಕೊರತೆ ಇದೆ. ಆದ್ದರಿಂದ ಅರ್ಹರಿದ್ದರೂ, ಯಾವುದೇ ಸೌಲಭ್ಯ ಪಡೆಯಲು ಸಾಧ್ಯವಾಗಿಲ್ಲ. ಮುಂದಿನ ಶನಿವಾರದೊಳಗೆ ತಹಸೀಲ್ದಾರ್ ನೇತೃತ್ವದಲ್ಲಿ ನಿಗಮ ಮಂಡಳಿ ಅಧಿಕಾರಿಗಳನ್ನೊಳಗೊಂಡಂತೆ ಎಲ್ಲಾ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಿ ಅವರಿಗೆ ಸಿಗುವ ಸೌಲಭ್ಯಗಳ ಅರ್ಜಿಯನ್ನು ಸ್ಥಳದಲ್ಲೇ ಸ್ವೀಕರಿಸಿ ಸೌಲಭ್ಯ ಒದಗಿಸುವಂತೆ ಸೂಚನೆ ನೀಡಲಾಗಿದೆ ಎಂದರು.

ಜನರಿಂದ ಅಹವಾಲು ಸ್ವೀಕರಿಸಿದ ಅವರು 130 ಮಂದಿಗೆ ವಿವಿಧ ಯೋಜನೆಗಳ ಪಿಂಚಣಿ ಮಂಜೂರಾತಿ ಪತ್ರವನ್ನು ಸ್ಥಳದಲ್ಲೇ ವಿತರಿಸಿದರು. ಅಲ್ಲದೆ ಮುಂದಿನ 2 ದಿನದಲ್ಲಿ ಪಿಂಚಣಿಗೆ ಸಂಬಂಧಿಸಿದ ಸಮಸ್ಯೆ ಪರಿಹರಿಸಲಾಗುವುದು. ತಾಲೂಕು ಮಟ್ಟದ ಅರ್ಜಿಗಳನ್ನು ತಿಂಗಳೊಳಗೆ ಬಗೆಹರಿಸಲಾಗುವುದು. ಜಿಲ್ಲಾ ಮಟ್ಟದ ಸಮಸ್ಯೆಗಳನ್ನು 2 ತಿಂಗಳೊಳಗಾಗಿ ವಿಲೇವಾರಿ ಮಾಡಲಾಗುವುದು ಎಂದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಹೆಡಿಯಾಲ–ಬೇಗೂರಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ರಾಜನಗರ ಬಳಿ ಸೇತುವೆ ಪೂರ್ಣಗೊಳಿಸಲು ಮುಂದಾಗಿಲ್ಲ. ಜೊತೆಗೆ ತಾಲೂಕಿನಲ್ಲಿ ರಸ್ತೆಗಳು ಹದಗೆಟ್ಟಿದ್ದರೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ. ಈ ಭಾಗದಲ್ಲಿ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿ ಬೆಳೆ ನಾಶವಾಗುತ್ತಿದೆ. ಕೆಲವೆಡೆ ರೈಲ್ವೆ ಕಂಬಿ ಅಳವಡಿಸುವ ಕಾರ್ಯ ಅರ್ಧಕ್ಕೆ ಪೂರ್ಣಗೊಳಿಸಿ ಕಾಡುಪ್ರಾಣಿಗಳ ಹಾವಳಿ ತಪ್ಪಿಸುವಂತೆ ಒತ್ತಾಯಿಸಿದರು.

ಈ ವೇಳೆ ಎಸಿ ಕಮಲಾಬಾಯಿ, ಜಿಪಂ ಸಿಇಓ ಪೂರ್ಣಿಮಾ, ತಹಸೀಲ್ದಾರ್ ಎಂ.ಶಿವಮೂರ್ತಿ, ತಾಪಂ ಇಓ ಹೆಚ್.ಜಿ.ಶ್ರೀನಿವಾಸ್, ಕಂದಾಯ ಅಧಿಕಾರಿಗಳಾದ ಪ್ರಕಾಶ್, ರಾಜು, ಹೆಡಿಯಾಲ ಗ್ರಾಪಂ ಅಧ್ಯಕ್ಷೆ ಮಂಜುಳಾ, ಉಪಾಧ್ಯಕ್ಷೆ ಅನುಪಮ, ಭೂ ನ್ಯಾಯಮಂಡಳಿ ಸದಸ್ಯ ಶಿವರುದ್ರ ಮುಖಂಡರಾದ ಪುಟ್ಟಸ್ವಾಮಿ, ಅಬ್ದುಲ್ ರಜಾಕ್, ಚಂದ್ರು ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳಿದ್ದರು.



ಸ್ವಚ್ಛಂದ ಪರಿಸರಕ್ಕೆ ಮನಸೋತ ಜಿಲ್ಲಾಧಿಕಾರಿ...

ಗಿರಿಜನ ವಾಸಿಸುವ ವೆಂಕಟಗಿರಿ ಕಾಲೋನಿ ಶಾಲೆಯಲ್ಲಿ ಶುಕ್ರವಾರ ರಾತ್ರಿ ವಾಸ್ತವ್ಯ ಹೂಡಿದ್ದ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಶನಿವಾರ ಬೆಳಗ್ಗೆ ಡೋರನಕಟ್ಟೆ ಗಿರಿಜನರ ಕಾಲೋನಿವರೆಗೆ ವಾಯುವಿಹಾರ ನಡೆಸಿ ಸ್ವಚ್ಛಂದ ಪರಿಸರಕ್ಕೆ ಮನಸೋತರು. ಈ ವೇಳೆ ಗಿರಿಜನರ ಬಳಿ ತೆರಳಿ ಸಮಸ್ಯೆ ಆಲಿಸಿದರು. ಗಿರಿಜನರು ಕಾಡುಪ್ರಾಣಿಗಳಿಂದ ಆಗುತ್ತಿರುವ ಬೆಳೆ ಹಾಗೂ ಪ್ರಾಣಹಾನಿ ಬಗ್ಗೆ ಜಿಲ್ಲಾಧಿಕಾರಿಗಳ ಬಳಿ ತಮ್ಮ ಅಳಲು ತೋಡಿಕೊಂಡರು. ಅಲ್ಲದೆ ಗಿರಿಜನ ಅಭಿವೃದ್ಧಿ ಇಲಾಖೆಯಿಂದ ಸೌಲಭ್ಯ ದೊರಕುತ್ತಿಲ್ಲ. ಸಾಲ ಸೌಲಭ್ಯವನ್ನೂ ನೀಡುತ್ತಿಲ್ಲ. ಮನೆ ಮಂಜೂರಾತಿ ಆಗಿಲ್ಲ ಎಂದು ತಮ್ಮ ಸಮಸ್ಯೆಗಳನ್ನು ತೆರೆದಿಟ್ಟರು. ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿಗಳು ಕೂಡಲೇ ಸಮಸ್ಯೆ ಪರಿಹರಿಸುವ ಭರವಸೆ ನೀಡಿದರು. ಬೆಳಗಿನ ಉಪಹಾರ ಸೇವನೆ ಬಳಿಕ ಆರೋಗ್ಯ ಶಿಬಿರಕ್ಕೆ ಚಾಲನೆ ನೀಡಿದ ಅವರು, ಬಳಿಕ ಶಿಶು ಅಭಿವೃದ್ಧಿ ಇಲಾಖೆ ಏರ್ಪಡಿಸಿದ್ದ ಪೌಷ್ಟಿಕ ಆಹಾರದ ಮಳಿಗೆ, ಸಿರಿಧಾನ್ಯಗಳ ಮಳಿಗೆಗಳಿಗೆ ಚಾಲನೆ ನೀಡಿದರು. ಶಾಲೆ ಆವರಣದಲ್ಲಿ ಗಿಡನೆಟ್ಟು ನೀರೆರೆದರು. ರೈತರಿಗೆ ಅರಣ್ಯ ಇಲಾಖೆಯಿಂದ ಉಚಿತವಾಗಿ ಗಿಡಗಳನ್ನು ವಿತರಿಸಿದರು.

ಜೇನು ದಾಳಿ: 17 ಮಂದಿಗೆ ಗಾಯ

ಸರಗೂರು, ಅ.15– ಚಲನಚಿತ್ರ ಚಿತ್ರೀಕರಣದ ವೇಳೆ ಜೇನು ಹುಳ ದಾಳಿ ನಡೆಸಿದ ಪರಿಣಾಮ 17 ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ನುಗು ಜಲಾಶಯದಲ್ಲಿ ಶನಿವಾರ ಬೆಳಗ್ಗೆ ನಡೆದಿದೆ.

ಘಟನೆಯಲ್ಲಿ ಅರುಣ್ ಜೀವನ್(40), ಶ್ರೀಕಾಂತ್(48), ಮಣಿಕಂಠನ್(31), ರಾಹುಲ್(25), ರಾಸ ಕುಮಾರ್(29), ಅಭಿಲಾಷ್ (30), ಆನಂದ್(40), ವಿಘ್ನೇಶ್ (25), ಪಾಂಡು(42), ಕೃಷ್ಣ (26), ಭವ್ಯ (25), ಪರಮೇಶ್ (38), ರವಿಶಂಕರ್(28), ಅಶ್ವಥ್(38), ಜಮುನಾ(22), ಗೌತಮ್ (22) ಹಾಗೂ ಮಹೇಶ್ (28) ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಪಟ್ಟಣದ ವಿವೇಕಾನಂದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಳೆದ 2 ದಿನಗಳಿಂದ ಇಲ್ಲಿನ ನುಗು ಜಲಾಶಯದಲ್ಲಿ ನಟ ನಾಗಚೈತನ್ಯ ಅಭಿನಯದ ತೆಲುಗು ಚಲನಚಿತ್ರದ ಚಿತ್ರೀಕರಣ ನಡೆಯುತ್ತಿತ್ತು. ಶನಿವಾರ ಬೆಳಗ್ಗೆ ಚಿತ್ರೀಕರಣಕ್ಕೆ ತಯಾರು ಮಾಡಿಕೊಳ್ಳುವ ವೇಳೆ ಡ್ಯಾಂ ಮೇಲೆ ಚಿತ್ರೀಕರಣ ತಂಡದವರು ನಡೆದು ಹೋಗುವಾಗ ಜೇನು ಹುಳುಗಳು ದಾಳಿ ನಡೆಸಿವೆ. ಪರಿಣಾಮ 17 ಮಂದಿ ಗಾಯಗೊಂಡಿದ್ದು, ಈ ಪೈಕಿ ಡ್ಯಾಂ ಗೇಟ್ ಬಳಿ ಬಿದ್ದ ಮೇಕಪ್ ಮ್ಯಾನ್ ಮಹೇಶ್ ತೀವ್ರ ಗಾಯಗೊಂಡಿದ್ದು, ಅವರನ್ನು 24 ಗಂಟೆಗಳ ಕಾಲ ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿದೆ ಎಂದು ಆಸ್ಪತ್ರೆಯ ವೈದ್ಯರು ತಿಳಿಸಿದ್ದಾರೆ. ಘಟನೆ ಬಳಿಕ ಶನಿವಾರ ಚಿತ್ರೀಕರಣ ಸ್ಥಗಿತಗೊಂಡಿತ್ತು. ಚಲನಚಿತ್ರ ಚಿತ್ರೀಕರಣ ಮುಖ್ಯಸ್ಥ ಶಾಸ್ತ್ರಿ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ನಾವು ಚಿತ್ರೀಕರಣ ಆರಂಭಕ್ಕೂ ಮುನ್ನಾ ಡ್ಯಾಂನಲ್ಲಿ ಇದ್ದ ಜೇನು ತೆಗೆಸಿದ್ದವು. ಆದರೂ ಈ ರೀತಿ ಘಟನೆ ಸಂಭವಿಸಿದೆ ಎಂದರು.

ಜಲಾಶಯದ ಇಂಜಿನಿಯರ್ ದೀಪಕ್ ಮಾತನಾಡಿ, ಚಿತ್ರೀಕರಣಕ್ಕೂ ಮುನ್ನಾ ನಮ್ಮ ಎಲ್ಲಾ ನಿಬಂಧನೆಗಳನ್ನು ತಿಳಿಸಿ, ಮುನ್ನೆಚ್ಚರಿಕಾ ಕ್ರಮ ಕೈಗೊಂಡು ಡ್ಯಾಂನಲ್ಲಿ ಚಿತ್ರೀಕರಣಕ್ಕೆ ಅನುಮತಿ ನೀಡಲಾಗಿತ್ತು. ಆದರೂ ಈ ಘಟನೆ ನಡೆದಿದೆ ಎಂದರು.

1.50 ಕೋಟಿ ವೆಚ್ಚದ ರಸ್ತೆ ಕಾಮಗಾರಿಗೆ ಚಾಲನೆ



ಕೆ.ಆರ್.ನಗರ, ಅ.15– ಯಾರೇ ಅಭಿವೃದ್ಧಿ ಕಾರ್ಯ ಕೈಗೊಂಡರೂ ಅದು ನಿಮ್ಮ ತೆರಿಗೆ ಹಣದಿಂದ. ಆದ್ದರಿಂದ ಗುಣಮಟ್ಟದ ಕಾಮಗಾರಿ ಮಾಡಿಸಿಕೊಳ್ಳುವಂತೆ ಸ್ಥಳೀಯರಿಗೆ ಶಾಸಕ ಸಾ.ರಾ.ಮಹೇಶ್ ಸಲಹೆ ನೀಡಿದರು.

ಪಟ್ಟಣದ ಬಸವೇಶ್ವರ ಬ್ಲಾಕ್‌ನಲ್ಲಿರುವ ಮಲೆ ಮಹದೇಶ್ವರ ದೇವಸ್ಥಾನದ ಮುಂಭಾಗ 1.50 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ನಾನು ಸಚಿವನಾಗಿದ್ದ ವೇಳೆ ಪಟ್ಟಣದ ಅಭಿವೃದ್ಧಿಗಾಗಿ 10 ಕೋಟಿ ಅನುದಾನ ನೀಡಲಾಗಿತ್ತು. ಆದರೆ ಬದಲಾದ ರಾಜಕೀಯ ಕಾರಣಗಳಿಂದಾಗಿ ಬಂದ ಹೊಸ ಸರ್ಕಾರ ಈ ಅನುದಾನವನ್ನು ತಡೆ ಹಿಡಿದಿತ್ತು ಇದೀಗ ಆ ಅನುದಾನವನ್ನು ತರಲಾಗಿದೆ ಎಂದರು.

ಪಟ್ಟಣದಲ್ಲಿ ವೀರಶೈವ ಸಮುದಾಯ ಭವನ ನಿರ್ಮಾಣಕ್ಕೆ ಸರ್ಕಾರದಿಂದ 1 ಕೋಟಿ ರೂ. ಬಿಡುಗಡೆಯಾಗಿದ್ದು, ವೀರಶೈವ ಮುಖಂಡರು 50 ಲಕ್ಷ ನೀಡಿದ್ದಾರೆ. ನಾನೂ ಕೂಡ ವೈಯುಕ್ತಿಕವಾಗಿಯೂ ಹಣ ನೀಡಿದ್ದೇನೆ. ಆದರೆ ಈ ಸಮುದಾಯ ಭವನ ನಿರ್ಮಾಣದಿಂದ ನನಗೆ ಹೆಸರು ಬರುತ್ತದೆ ಎಂಬ ದುರುದ್ದೇಶದಿಂದ ನಿಮ್ಮ ಸಮುದಾಯದ ಒಬ್ಬರು ಲೋಕಾಯುಕ್ತಕ್ಕೆ ದೂರು ನೀಡಿದ್ದು, ಸರ್ಕಾರ ಹಿಂದುಳಿದ ವರ್ಗದ ಇಲಾಖೆ ಹೆಸರಿನಲ್ಲಿ ಅನುದಾನ ನೀಡಬೇಕು. ವೀರಶೈವ ಸಮುದಾಯ ಭವನಕ್ಕೆ ನೀಡಲು ಬರುವುದಿಲ್ಲ ಎಂದು ತಡೆ ಹಿಡಿದಿದ್ದರು ಎಂದು ತಿಳಿಸಿದರು.

ಈ ವೇಳೆ ಪುರಸಭೆ ಮುಖ್ಯಾಧಿಕಾರಿ ಡಾ.ಜಯಣ್ಣ, ಪುರಸಭೆ ಸದಸ್ಯರಾದ ಮಂಜುಳ, ವೀಣಾ, ಪ್ರಭುಶಂಕರ್, ಕೆ.ಎಲ್.ಜಗದೀಶ್, ಪುರಸಭೆ ಮಾಜಿ ಅಧ್ಯಕ್ಷ ರಾಜಶ್ರೀಕಾಂತ್, ಮುಖಂಡರಾದ ಡೈರಿ ಪ್ರಕಾಶ್, ಪ್ರತಾಪ್‌ರೆಡ್ಡಿ, ಕೃಷ್ಣಶೆಟ್ಟಿ, ಮಂಜುನಾಥ್, ಶಿವಣ್ಣ, ಗಿರೀಶ್ ಸೇರಿದಂತೆ ಇನ್ನಿತರರಿದ್ದರು.

1.35 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿಗೆ ಭೂಮಿ ಪೂಜೆ



ಪಿರಿಯಾಪಟ್ಟಣ, ಅ.15– ಒಂದೆಡೆ ವಿರೋಧ ಪಕ್ಷದವರ ಟೀಕೆ ಮತ್ತೊಂದೆಡೆ ಪ್ರವಾಹ, ಕೊರೊನಾದಂತಹ ಸಂಕಷ್ಟ ಸಮಯದಲ್ಲಿಯೂ ತಾಲೂಕಿನ ಅಭಿವೃದ್ಧಿಗೆ ಶಕ್ತಿಮೀರಿ ಶ್ರಮಿಸಿದ್ದೇನೆ ಎಂದು ಶಾಸಕ ಕೆ.ಮಹದೇವ್ ತಿಳಿಸಿದರು.

ತಾಲೂಕಿನ ಚನ್ನಕಲ್ಲುಕಾವಲು ಗ್ರಾಮದಲ್ಲಿ 1.35 ಕೋಟಿ ರೂ. ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, ದಲಿತ ಜನಾಂಗದವರು ವಾಸಿಸುವ ಪ್ರದೇಶಗಳಿಗೆ 2.20 ಕೋಟಿಗೂ ಹೆಚ್ಚು ಅನುದಾನ ನೀಡಿ ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಕಾಂಗ್ರೆಸ್ ಮುಖಂಡರು ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಜನತೆ ಅದಕ್ಕೆ ಕಿವಿಗೊಡದೆ ನನ್ನ ಅಭಿವೃದ್ಧಿ ಕಾರ್ಯ ಗಮನಿಸಿ ಮುಂಬರುವ ಚುನಾವಣೆಯಲ್ಲಿ ಮತ್ತೊಮ್ಮೆ ಆಶೀರ್ವಾದ ಮಾಡಿದರೆ ತಾಲೂಕಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುವುದಾಗಿ ಭರವಸೆ ನೀಡಿದರು. ಈ ವೇಳೆ ಕೊಪ್ಪ ಗ್ರಾಪಂ ಅಧ್ಯಕ್ಷ ರೇಣುಕಸ್ವಾಮಿ, ತಾಲೂಕು ಜೆಡಿಎಸ್ ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಮುಖಂಡರಾದ ತಮ್ಮಣ್ಣಯ್ಯ, ಗಣೇಶ್, ಸೋಮಶೇಖರ್, ಅಪ್ಪಾಜಿಗೌಡ, ಚಂದ್ರಕಲಾ, ಲೀಲಾವತಿ, ರಂಗನಾಥ್, ಮಂಜು, ಹೇಮಂತ್, ಚಂದ್ರು, ಶಿವಕುಮಾರ್, ದಯಾನಂದ, ಪ್ರಭಾಕರ್, ಧನರಾಜ್, ರವಿ ಇದ್ದರು.

ಭಾರೀ ಮಳೆಗೆ ಮನೆ ಕುಸಿತ



ಹಿರೀಕ್ಯಾತನಹಳ್ಳಿ, ಅ.15– ಭಾರೀ ಮಳೆಗೆ ಮನೆ ಕುಸಿದಿರುವ ಘಟನೆ ಹಿರೀಕ್ಯಾತನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಕಾಳೇಗೌಡ ಎಂಬುವರ ಮನೆ ಕುಸಿದಿದ್ದು, ದಿನಬಳಕೆಯ ವಸ್ತುಗಳು ನಾಶವಾಗಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಗ್ರಾಮ ಲೆಕ್ಕಿಗರಾದ ಚೈತ್ರ ಪರಿಶೀಲನೆ ನಡೆಸಿದರು. ಬಳಿಕ ಮಾತನಾಡಿದ ಅವರು, ಹಾನಿಗೊಳಗಾದ ಕುಟುಂಬದವರಿಗೆ ಸೂಕ್ತ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.



ಮಹರ್ಷಿ ವಾಲ್ಮೀಕಿ ಜಯಂತಿ ಅಂಗವಾಗಿ ತಿ.ನರಸೀಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆ ವೈದ್ಯ ಡಾ.ರೇವಣ್ಣ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ಜಿಲ್ಲಾಧ್ಯಕ್ಷ ತಾಯೂರು ಪ್ರಕಾಶ್, ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಹೇಶ್ ನಾಯಕ್, ತಾಲೂಕು ವಾಲ್ಮೀಕಿ ನಾಯಕ ಒಕ್ಕೂಟದ ಅಧ್ಯಕ್ಷ ಸೋಮಣ್ಣ, ಮೆಡಿಕಲ್ ಕುಮಾರ್, ಚೌಹಳ್ಳಿ ಸಿದ್ದರಾಜು, ನಿಲಸೋಗೆ ಬಸವರಾಜು, ಸೋಸಲೆ ರಾಜಶೇಖರ್, ಕೆಇಬಿ ಮಲ್ಲಣ್ಣ, ಲೋಹಿತ್, ತೊಟ್ಟವಾಡಿ ರಾಜಪ್ಪ, ಸುನಿ ಸೇರಿದಂತೆ ಮತ್ತಿತರರಿದ್ದರು.

ಉಚಿತ ಕೋಚಿಂಗ್ ತರಗತಿ

ಮೈಸೂರು, ಅ. 15– ಮೈಸೂರಿನ ವಿದ್ಯಾವರ್ಧಕ ಸ್ನಾತಕೋತ್ತರ ಕೇಂದ್ರದ ವತಿಯಿಂದ ಅ. 17 ರಿಂದ 20 ರವರೆಗೆ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಪ್ರವೇಶ ಪರೀಕ್ಷೆಗೆ ಹಾಜರಾಗುವ ಎಂ.ಕಾಂ ಕೋರ್ಸಿನ ಅಭ್ಯರ್ಥಿಗಳ ಉಪಯೋಗಕ್ಕಾಗಿ ಉಚಿತ ಕೋಚಿಂಗ್ ತರಗತಿಗಳನ್ನು ಕಾಲೇಜಿನಲ್ಲಿ ಏರ್ಪಡಿಸಲಾಗಿದೆ. ಮಾಹಿತಿಗಾಗಿ 0821–2420284/ 9901293396/ 9900645644/8884742879ನ್ನು ಸಂಪರ್ಕಿಸಬಹುದೆಂದು ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇಮಕ



ಮೈಸೂರು, ಅ. 15– ಕರ್ನಾಟಕ ಪ್ರದೇಶ ಕಾಂಗ್ರೆಸ್ ಪರಿಶಿಷ್ಟ ಜಾತಿ ವಿಭಾಗದ ಮೈಸೂರು ಗ್ರಾಮಾಂತರ ಜಿಲ್ಲಾ ಅಧ್ಯಕ್ಷರನ್ನಾಗಿ ಜಯಪುರ ಹೋಬಳಿ, ಎಸ್. ಕಲ್ಲಹಳ್ಳಿ ಗ್ರಾಮದ ಕೆ.ಎಸ್. ಸಿದ್ದರಾಜುರನ್ನು ನೇಮಕ ಮಾಡಲಾಗಿದೆ.

ನೋಟ್‌ಬುಕ್, ಬ್ಯಾಗ್ ವಿತರಣೆ

ಹೆಚ್.ಡಿ.ಕೋಟೆ, ಅ.15– ಪತ್ರಿಕಾ ವಿತರಕರ ದಿನಾಚರಣೆ ಅಂಗವಾಗಿ ದಿನಪತ್ರಿಕೆ ಹಂಚುವ ಮಕ್ಕಳಿಗೆ ಅ.16ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ಜೈನ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನೋಟ್‌ಬುಕ್, ಬ್ಯಾಗ್ ವಿತರಿಸಲಾಗುವುದು ಎಂದು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಆರ್.ನಾಗರಾಮ ತಿಳಿಸಿದ್ದಾರೆ. ಸಂಘದ ಅಧ್ಯಕ್ಷ ಸತೀಶ್ ಆರಾಧ್ಯರ ಅಧ್ಯಕ್ಷತೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಪತ್ರಿಕೆ ಹಂಚುವ ಮಕ್ಕಳಿಗೆ ಕಬಿನಿಯ ಸುಭಾಷ್ ವಿದ್ಯುತ್ ಘಟಕದ ಹಿರಿಯ ವ್ಯವಸ್ಥಾಪಕ ಸಂದೀಪ್ ಕುಮಾರ್ ನೋಟ್‌ಬುಕ್, ಬ್ಯಾಗ್ ವಿತರಿಸುವರು ಎಂದು ಸಂಘದ ಪ್ರಧಾನ ಕಾರ್ಯದರ್ಶಿ ತಿಳಿಸಿದ್ದಾರೆ.



ಧಾರಾಕಾರ ಮಳೆ: ನಾಲೆ ಒಡೆದು ನೂರಾರು ಎಕರೆ ಬೆಳೆ ನಾಶ

ಸ್ಥಳಕ್ಕೆ ಡಿಸಿ ಬಗಾದಿ ಗೌತಮ್, ಶಾಸಕ ಅಶ್ವಿನ್ ಭೇಟಿ, ಪರಿಶೀಲನೆ



ತಿ.ನರಸೀಪುರ, ಅ.15– ಧಾರಾಕಾರ ಮಳೆಗೆ ತಾಲೂಕಿನ ಯಾಚೇನಹಳ್ಳಿ ಗ್ರಾಮದ ಸಮೀಪ ಸಿಡಿಎಸ್ ನಾಲೆ ಒಡೆದು ನೂರಾರು ಎಕರೆಯಲ್ಲಿ ಬೆಳೆದಿದ್ದ ಕಬ್ಬು, ಭತ್ತದ ಬೆಳೆ ನಾಶವಾಗಿದೆ.

ಶುಕ್ರವಾರ ರಾತ್ರಿ ಸುರಿದ ಭಾರೀ ಮಳೆಗೆ ಸಿಡಿಎಸ್ ನಾಲೆಯಲ್ಲಿ ನೀರಿನ ಹರಿವು ಹೆಚ್ಚಾಗಿ ನಾಲೆ ಕೋಡಿ ಬಿದ್ದಿದೆ. ಪರಿಣಾಮ ರೈತರ ಬೆಳೆ ನೀರು ಪಾಲಾಗಿ ಕೋಟ್ಯಾಂತರ ರೂ. ನಷ್ಟ ಸಂಭವಿಸಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಹಾಗೂ ಶಾಸಕ ಎಂ.ಅಶ್ವಿನ್ ಕುಮಾರ್ ಪರಿಶೀಲನೆ ನಡೆಸಿದರು.

ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಮಾತನಾಡಿ, ನಿನ್ನೆ ರಾತ್ರಿ ಸುರಿದ ಭಾರೀ ಮಳೆಗೆ ನಾಲೆ ಒಡೆದಿದ್ದು, ಯಾಚೇನಹಳ್ಳಿ ಮತ್ತು ಹನುಮನಾಳು ಗ್ರಾಮಗಳಲ್ಲಿ ಸುಮಾರು 250 ಎಕರೆ ಬೆಳೆ ನಾಶ ಆಗಿರಬಹುದು ಎಂದು ಕೃಷಿ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದಾರೆ. ವರದಿ ಬಂದ ನಂತರ ಪರಿಹಾರ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಸಂಬಂಧಪಟ್ಟ ಎಲ್ಲಾ ಇಲಾಖೆ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿದ್ದು, ದುರಸ್ತಿ ಕೆಲಸ ಪ್ರಗತಿಯಲ್ಲಿದೆ ಎಂದರು.

ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, ಭಾರೀ ಮಳೆಯಿಂದಾಗಿ ಯಾಚೇನಹಳ್ಳಿ ಸಮೀಪ ವಿಶ್ವೇಶ್ವರಯ್ಯ ನಾಲೆ ಒಡೆದಿದ್ದು, ಬೆಳೆ ನಾಶವಾಗಿ ಅಪಾರ ನಷ್ಟ ಸಂಭವಿಸಿದೆ. ವಿಷಯ ತಿಳಿದ ಕೂಡಲೇ ಜಿಲ್ಲಾಧಿಕಾರಿ ಅವರೊಂದಿಗೆ ಸ್ಥಳಕ್ಕಾಗಮಿಸಿ ಪರಿಶೀಲನೆ ನಡೆಸಿ ದುರಸ್ತಿ ಕಾರ್ಯ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ ಎಂದರು.

ಕಳೆದ ಬಾರಿಗಿಂತ ಈ ಬಾರಿ ವಾಡಿಕೆಗಿಂತ ಹೆಚ್ಚು ಮಳೆಯಾಗುತ್ತಿರುವುದರಿಂದ ನಾಲೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿಯುತ್ತಿದೆ. ಹೀಗಾಗಿ ಅಲ್ಲಲ್ಲಿ ನಾಲೆಗಳು ಕೋಡಿ ಬೀಳುತ್ತಿವೆ. ಈ ಬಗ್ಗೆ ಈಗಾಗಲೇ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಭೆ ನಡೆಸಲಾಗಿದೆ. ನಷ್ಟಕ್ಕೊಳಗಾದ ರೈತರಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ವೇಳೆ ಜಿಪಂ ಸಿಇಓ ಪೂರ್ಣಿಮಾ, ತಹಸೀಲ್ದಾರ್ ಸಿ.ಜಿ.ಗೀತಾ, ನೀರಾವರಿ ಇಲಾಖೆ ಎಇಇ ಶಿವಮಾಧವನ್, ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕ ಶಶಿಕಲಾ, ಪಿಡಿಓ ಕುಮಾರಸ್ವಾಮಿ, ಜೆಇ ಪ್ರದೀಪ್, ಜೆಡಿಎಸ್ ಮುಖಂಡ ಕುಮಾರ್, ಗ್ರಾಪಂ ಸದಸ್ಯ ರಾಮಸ್ವಾಮಿ, ಸತೀಶ್ ಇತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಂತಾರ (ಕ): ಬೆ.10.20ಕ್ಕೆ, ಮ.1.15ಕ್ಕೆ, ಸಂ.4.15ಕ್ಕೆ, ರಾ.7.15ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 2	ರೋರ್ಷ್ಚಾಚ್ (ಮ): ಬೆ.10.30ಕ್ಕೆ, ರಾ.10.05ಕ್ಕೆ, ಕಾಂತಾರ (ಕ): ಮ.1.20ಕ್ಕೆ, ಗುಡ್‌ಬೈ (ಹಿಂ): ಸಂ.4.10ಕ್ಕೆ, ಪೊನ್ನಿಯನ್ ಸೆಲ್ವನ್–1(ತ): ಸಂ.6.55ಕ್ಕೆ.
ಸ್ಕ್ರೀನ್ 3	ಡಾಕ್ಟರ್ ಜಿ (ಹಿಂ): ಬೆ.11ಕ್ಕೆ, ರಾ.7.30ಕ್ಕೆ, ರಾ.10ಕ್ಕೆ, ತೋತಾಪುರಿ–1 (ಕ): ಮ.1.30ಕ್ಕೆ, ಪೊನ್ನಿಯನ್ ಸೆಲ್ವನ್ –1(ತ): ಸಂ.4.15ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.10.10ಕ್ಕೆ, ಮ.1.10ಕ್ಕೆ, ಸಂ.4.10ಕ್ಕೆ, ರಾ.7.10ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಕಾಂತಾರ (ಕ): ಬೆ.9.15ಕ್ಕೆ, ಮ.12.30ಕ್ಕೆ, ಮ.3.35ಕ್ಕೆ, ಸಂ.6.40ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 2	ಕಾಂತಾರ (ಕ): ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ಡಾಕ್ಟರ್ ಜಿ (ಹಿಂ): ಬೆ.9ಕ್ಕೆ, ಕಾಂತಾರ (ಕ): ಬೆ.11.35ಕ್ಕೆ, ಮ.2.40ಕ್ಕೆ, ಸಂ.5.45ಕ್ಕೆ, ರಾ.8.50ಕ್ಕೆ.
ಸ್ಕ್ರೀನ್ 4	ಕಾಂತಾರ (ಕ): ಬೆ.9.45ಕ್ಕೆ, ರಾ.7ಕ್ಕೆ, ಗುರು ಶಿಷ್ಯರು (ಕ): ಮ.1ಕ್ಕೆ, ಡಾಕ್ಟರ್ ಜಿ (ಹಿಂ): ಸಂ.4.20ಕ್ಕೆ, ಪೊನ್ನಿಯನ್ ಸೆಲ್ವನ್ –1(ತ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಡಾಕ್ಟರ್ ಜಿ (ಹಿಂ): ಬೆ.10.30ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಗುರುಶಿಷ್ಯರು (ಕ): ಮ.1ಕ್ಕೆ, ಎಂಆರ್‌ಪಿ (ಕ): ಸಂ.4.10ಕ್ಕೆ.
ಸ್ಕ್ರೀನ್ 2	ನಾನ್ ಖಿದರ್ ನನ್ ಹುಡ್ಗಿ ಸೂಪರ್ (ಕ): ಬೆ.10ಕ್ಕೆ, ಕಾಂತಾರ (ಕ): ಮ.12.35ಕ್ಕೆ, ಮ.3.35ಕ್ಕೆ, ಸಂ.6.45ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.1.45ಕ್ಕೆ, ಸಂ.6ಕ್ಕೆ, ರಾ.9.05ಕ್ಕೆ.
ಸ್ಕ್ರೀನ್ 4	ಚಾಂಪಿಯನ್ (ಕ): ಬೆ.10.30ಕ್ಕೆ, ಶುಭಮಂಗಳ (ಕ): ಮ.1.40ಕ್ಕೆ, ಮೋದಿ ಜಿ ಕೀ ಬೇಟಿ (ಹಿಂ): ಸಂ.4.05ಕ್ಕೆ, ಗಾಡ್‌ಫಾದರ್ (ತೆ): ಸಂ.6.20ಕ್ಕೆ, ವರಾಲ್ (ಮ): ರಾ.9.25ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕಾಂತಾರ (ಕ): ಬೆ.8.30ಕ್ಕೆ, ಬೆ.9.05ಕ್ಕೆ, ಬೆ.9.50ಕ್ಕೆ, ಮ.12.15ಕ್ಕೆ, ಮ.1ಕ್ಕೆ, ಮ.3.25ಕ್ಕೆ, ಸಂ.4.10ಕ್ಕೆ, ಸಂ.6.35ಕ್ಕೆ, ರಾ.7.20ಕ್ಕೆ, ರಾ.9.45ಕ್ಕೆ, ರಾ.10.30ಕ್ಕೆ, ದಿ ಚೆಕ್‌ಮೇಟ್ (ಕ): ಬೆ.10.05ಕ್ಕೆ, ಗುರು ಶಿಷ್ಯರು (ಕ): ಮ.3.10ಕ್ಕೆ, ಪಿಎಸ್–1 (ಹಿಂ): ಮ.3.30ಕ್ಕೆ, ರಾ.10.30ಕ್ಕೆ, ಗುಡ್‌ಬೈ (ಹಿಂ): ಬೆ.10.10ಕ್ಕೆ, ಸಂ.4.35ಕ್ಕೆ, ಪೊನ್ನಿಯನ್ ಸೆಲ್ವನ್–1 (ತ): ಬೆ.8.35ಕ್ಕೆ, ಮ.12ಕ್ಕೆ, ರಾ.7ಕ್ಕೆ, ದಿ ಗೋಸ್ಟ್ (ತೆ): ರಾ.7.10ಕ್ಕೆ, ಗಾಡ್‌ಫಾದರ್ (ತೆ): ಬೆ.9.30ಕ್ಕೆ, ಮ.1.15ಕ್ಕೆ, ಮ.3.50ಕ್ಕೆ, ರಾ.10.10ಕ್ಕೆ, ವಿಕ್ರಮ್ ವೇದ (ಹಿಂ): ಬೆ.11.40ಕ್ಕೆ, ಸಂ.6.35ಕ್ಕೆ, ಒನ್ ಪೀಸ್ ಫಿಲಂ ರೆಡ್ (ಜ): ರಾ.7.40ಕ್ಕೆ, ಟಿಕೆಟ್ ಟು ಪ್ಯಾರಡೈಸ್ (ಇಂ): ಮ.12.50ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕೋಬ್ರಾ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ವಿಕ್ರಂ ವೇದ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಾಂತಾರ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಗುರು ಶಿಷ್ಯರು (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಪುನ್ನಿಯಿನ್ ಸೆಲ್ವನ್ ಭಾಗ–1(ತ)	4 ಪ್ರದರ್ಶನಗಳು
ಸಂಗಂ	
ತೋತಾಪುರಿ (ಕ)	4 ಪ್ರದರ್ಶನಗಳು
ಲಿಡೋ	
ಎಂಆರ್‌ಪಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪುನ್ನಿಯಿನ್ ಸೆಲ್ವನ್ ಭಾಗ–1(ತ)	4 ಪ್ರದರ್ಶನಗಳು
ಪ್ರಭಾ	
ಚಾಂಪಿಯನ್ (ಕ)	4 ಪ್ರದರ್ಶನಗಳು

ಮನೆ ಬಾಗಿಲು ಮೀಟಿ ಚಿನ್ನಾಭರಣ ಕಳವು

ನಂಜನಗೂಡು, ಅ.15– ಮನೆ ಬಾಗಿಲು ಮೀಟಿ ಚಿನ್ನಾಭರಣ ದೋಚಿರುವ ಘಟನೆ ನಗರದ ರಾಮಸ್ವಾಮಿ ಬಡಾವಣೆಯಲ್ಲಿ ಶುಕ್ರವಾರ ರಾತ್ರಿ ನಡೆದಿದೆ.

ಇಲ್ಲಿನ ನಿವಾಸಿ, ಶಿಕ್ಷಕ ಮಾದೇಶ್ ಎಂಬುವರ ಮನೆಯಲ್ಲಿ ಕಳ್ಳತನ ನಡೆದಿದ್ದು, 65 ಗ್ರಾಂ ಚಿನ್ನ ಹಾಗೂ 1500 ರೂ. ದೋಚಿದ್ದಾರೆ. ಮಾದೇಶ್ ಶುಕ್ರವಾರ ರಾತ್ರಿ ಜುಬಿಲೆಂಟ್ ಲೇಔಟ್‌ನಲ್ಲಿರುವ ಪತ್ನಿ ಮನೆಗೆ ತೆರಳಿದ್ದರು. ಮನೆ ಹೊರಗಡೆಯಿಂದ ಬೀಗ ಹಾಕಿರುವುದನ್ನು ಗಮನಿಸಿದ ದುಷ್ಕರ್ಮಿಗಳು ಮನೆ ಬಾಗಿಲು ಮೀಟಿ ಒಳನುಗ್ಗಿ ದರೋಡೆ ಮಾಡಿದ್ದಾರೆ.

ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆ ಪೂರ್ವಭಾವಿ ಸಭೆ

ಬೆಟ್ಟದಪುರ, ಅ.15– ದೀಪಾವಳಿ ಹಬ್ಬದ ಪ್ರಯುಕ್ತ ಗ್ರಾಮದ ಶ್ರೀಶಿಡ್ಲು ಮಲ್ಲಿಕಾರ್ಜುನಸ್ವಾಮಿ ಬೆಟ್ಟ ಹತ್ತುವ ಹಾಗೂ ದೀಪಾವಳಿ ಉತ್ಸವಕ್ಕೆ ಸಂಬಂಧಿಸಿದಂತೆ ಅ.17ರಂದು ಬೆಳಗ್ಗೆ 11 ಗಂಟೆಗೆ ಶ್ರೀಶಿಡ್ಲು ಮಲ್ಲಿಕಾರ್ಜುನಸ್ವಾಮಿ ದೇವಾಲಯದ ಆವರಣದಲ್ಲಿ ಪೂರ್ವಭಾವಿ ಸಭೆ ತಹಸೀಲ್ದಾರ್ ಚಂದ್ರಮೌಳಿ ಅವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಉಪ ತಹಸೀಲ್ದಾರ್ ಶಶಿಧರ್ ತಿಳಿಸಿದ್ದಾರೆ.



ಹೆಚ್.ಡಿ.ಕೋಟೆಯಲ್ಲಿ ನಡೆದ ಮಹರ್ಷಿ ವಾಲ್ಮೀಕಿ ಜಯಂತಿಯಲ್ಲಿ ವಾಲ್ಮೀಕಿ ಭಾವಚಿತ್ರಕ್ಕೆ ಬಿಜೆಪಿ ಮುಖಂಡ ಡಾ.ಕೃಷ್ಣಸ್ವಾಮಿ ಪುಷ್ಪಾರ್ಚನೆ ಮಾಡಿದರು. ಈ ವೇಳೆ ಅವರು ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿರುವ ರಾಜ್ಯ ಸರ್ಕಾರಕ್ಕೆ ಅಭಿನಂದನೆ ಸಲ್ಲಿಸಿದರು. ಮುಖಂಡರಾದ ಸಣ್ಣತಿಮ್ಮನಾಯ್ಕ, ಚೆಲುವನಾಯಕ, ಗ್ರಾಪಂ ಸದಸ್ಯ ರಮೇಶ್, ಬಿಜೆಪಿ ಶಕ್ತಿ ಕೇಂದ್ರದ ಮಾಜಿ ಅಧ್ಯಕ್ಷ ನಂದೀಶ, ಮುಖಂಡರಾದ ಚಿನ್ನಸ್ವಾಮಿ ನಾಯ್ಕ, ವೆಂಕಟರಮಣನಾಯಕ, ಗೋವಿಂದನಾಯ್ಕ, ಕೃಷ್ಣನಾಯಕ್, ಬಿಳಿಯನಾಯಕ ಸ್ವಾಮಿ, ಮಣಿಕಂಠ, ಶಿವರಾಜು, ವೆಂಕಟೇಶ್, ಕೃಷ್ಣಸ್ವಾಮಿ ಅವರ ಆಪ್ತ ಕಾರ್ಯದರ್ಶಿಗಳಾದ ಶಿವಕುಮಾರ್, ಶಿವು, ತಾಲೂಕು ವೀರಶೈವ ಯುವ ಘಟಕದ ಉಪಾಧ್ಯಕ್ಷ ಸೋಮಶೇಖರ್, ರಾಜೇಶ್, ವಿರಾಜ್ ನಾಯಕ ಇನ್ನಿತರರಿದ್ದರು.

ಸುಶೀಲಮ್ಮ ನಿಧನ



ಬೆಟ್ಟದಪುರ, ಅ.15– ಇಲ್ಲಿಗೆ ಸಮೀಪದ ಕೊಣಸೂರು ಗ್ರಾಮದ ನಿವಾಸಿ ಸುಶೀಲಮ್ಮ(70) ಶನಿವಾರ ನಿಧನರಾದರು.

ಮೃತರು ತಾಲೂಕು ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಮಹದೇವಪ್ಪ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದಲ್ಲಿರುವ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೇಕ್ಷಕರಿಗೆ ಮುದ ನೀಡಿದ ಹಳೆಯ ಚಿತ್ರಗೀತೆಗಳು



ಮೈಸೂರು, ಅ.15(ಎಸ್‌ಪಿಎನ್)– ಡಾ.ರಾಜ್ ಕುಮಾರ್, ಹಂಸಲೇಖ, ಡಾ.ಎಸ್.ಪಿ. ಬಾಲಸುಬ್ರಹ್ಮಣ್ಯಂ ಲತಾ ಮಂಗೇಶ್ವರ್ ಹಾಗೂ ಪಿ.ಬಿ. ಶ್ರೀನಿವಾಸ್ ಸೇರಿದಂತೆ ಇತರೆ ಗಾಯಕರು ಹಾಡಿರುವ ಹಳೆಯ ಚಿತ್ರಗೀತೆಗಳು ಪ್ರೇಕ್ಷಕರಿಗೆ ಮುದ ನೀಡಿದವು.

ಮೈಸೂರಿನ ನಾದಬ್ರಹ್ಮ ಸಂಗೀತ ಸಭಾದಲ್ಲಿ ಸ್ವರಧಾರ ಕಲಾಸಂಗಮ ಸಂಸ್ಥೆ ವತಿಯಿಂದ ಹಿರಿಯ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಹಳೆಯ ಸುಮಧುರ ಕನ್ನಡ ಮತ್ತು ಹಿಂದಿ ಚಲನ ಚಿತ್ರಗೀತೆಗಳನ್ನು ಗಾಯಕಿ ಕವಿತಾ ಕಾಮತ್ ನೇತೃತ್ವದಲ್ಲಿ ಗಾಯಕರಾದ ನಿತ್ಯಾನಂದ ಕಾಮತ್, ಶ್ರೀಕಂಠ ರಾವ್, ಸದಾಶಿವ ಶೆಣೈ, ಹೆಡೆತಲೆ ನಾರಾಯಣ್, ಪ್ರೇಮಕುಮಾರಿ, ಎ.ಸಿ.ರವಿ, ನಾಗೇಂದ್ರ, ಲಕ್ಷ್ಮಿ ಮತ್ತು ಜಗದೀಶ್ ಬಾಬು ಸೇರಿದಂತೆ ಇತರೆ ಗಾಯಕರ ಸಿರಿಕಂಠದಲ್ಲಿ ಹಳೆಯ ಚಿತ್ರಗೀತೆಗಳು ಅದ್ಭುತವಾಗಿ ಮೂಡಿಬಂದವು.

ಹಾಲುಜೇನು ಚಿತ್ರದ 'ಹಾಲುಜೇನು ಒಂದಾದ ಹಾಗೆ', ಸೀತಾ ಚಿತ್ರದ 'ಬರೆದೆ ನೀನು ನಿನ್ನ ಹೆಸರು', ಕುಲವಧು ಚಿತ್ರದ 'ಒಲವಿನ ಪ್ರಿಯಲತೆ', 'ಕುಳ್ಳ ಏಜೆಂಟ್ 000' ಚಿತ್ರದ 'ಆಡು ಆಟ ಆಡು', ಕಬೀ ಕಬೀ ಚಿತ್ರದ 'ಮೈ ಪಲ್ ದೋ ಪಲ್', 'ಆಟೋರಾಜ ಚಿತ್ರದ 'ಹೊಸ ಬಾಳು ನಿನ್ನಿಂದೆ', ರಾಮಚಾರಿ ಚಿತ್ರದ 'ನಮ್ಮೂರ ಯುವರಾಣಿ', ಗಿರಿಕನ್ಯೆ ಚಿತ್ರದ 'ಥೈ ಥೈ ಥೈ ಬಂಗಾರಿ', ಇಬ್ಬನಿ ಕರಗಿತು ಚಿತ್ರದ 'ತನು ನಿನ್ನದು ಮನ ನಿನ್ನದು', ಮಾಂಗಲ್ಯ ಭಾಗ್ಯ ಚಿತ್ರದ 'ಆಸೆಯ ಭಾವ', ಚಲಿಸುವ ಮೋಡಗಳು ಚಿತ್ರದ 'ಚಂದಿರ ತಂದ ಹುಣಿಮೆ ರಾತ್ರಿ' ಹಾಡುಗಳನ್ನು ಆಡಿ ಪ್ರೇಕ್ಷಕರನ್ನು ರಂಜಿಸಿದರು.

ನೀ ಬರೆದ ಕಾದಂಬರಿ ಚಿತ್ರದ 'ನೀ ಮಿಟಿದ ನೆನಪೆಲ್ಲವು', ಬೆಳ್ಳಿಮೋಡ ಚಿತ್ರದ 'ಬೆಳ್ಳಿಮೋಡ', ಮಯೂರ ಚಿತ್ರದ 'ಈ ಮೌನವ ತಾಳೆನು', ಅಪೂರ್ವ ಸಂಗಮ ಚಿತ್ರದ 'ತಾರಾ ಓ ತಾರಾ', ನಾನೊಬ್ಬ ಕಳ್ಳ ಚಿತ್ರದ 'ಆಸೆಯು ಕೈಗೂಡಿತು', ಆನಂದ ಚಿತ್ರದ 'ನೀಲ ಮೇಘ', ವಸಂತ ಗೀತಾ ಚಿತ್ರದ 'ಕಣ್ಣಲಿ ಏನೋ ಮಿಂಚೊಂದು', ಧ್ರುವತಾರೆ ಚಿತ್ರದ 'ಆ ರತಿಯೇ ಧರೆಗಿಳಿದಂತೆ', ಹುಲಿಯ ಹಾಲಿನ ಮೇವು ಚಿತ್ರದ 'ಬೆಳದಿಂಗಳಾಗಿ ಬಾ' ಹಾಡು ಹಾಗೂ ನಾನಿರುವುದು ನಿನಗಾಗಿ ಚಿತ್ರದ 'ಒಲವಿನ ಗೆಳೆಯನೆ', ಪಾಪಾ ಗಂಗಾ ಚಿತ್ರದ 'ಆಕಾಶ ದೀಪವು ನೀನು' ಹಾಡು ಸೇರಿದಂತೆ ಇತರೆ ಹಾಡುಗಳನ್ನು ಹಾಡಿ ಸಭಿಕರನ್ನು ರಂಜಿಸಿದರು. ಎಂ.ಆರ್.ಅನಿತಾ, ಜಗದೀಶ್ ಕಾರ್ಯಕ್ರಮ ನಿರೂಪಿಸಿದರು.

ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಸಾಧಕರಿಗೆ ಸನ್ಮಾನ



ಮೈಸೂರು, ಅ.15(ಎಸ್‌ಪಿಎನ್)– ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಐಡಿಯಲ್ ಜಾವಾ ಸಭಾಂಗಣದಲ್ಲಿ ಜಿಲ್ಲಾ ನಾಯಕ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶನಿವಾರ ನಡೆದ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರನ್ನು ಮೇಯರ್ ಶಿವಕುಮಾರ್ ಸನ್ಮಾನಿಸಿದರು.

ನಂತರ ಮಾತನಾಡಿದ ಅವರು, ಮಹರ್ಷಿ ವಾಲ್ಮೀಕಿ ಅವರು, ರಾಮಾಯಣ ರಚಿಸಿದ ಹಿನ್ನೆಲೆಯಲ್ಲಿ ಇಂದು ಭಾರತೀಯ ಪರಂಪರೆಗಳನ್ನು ನೆನೆದುಕೊಳ್ಳುತ್ತಿದ್ದೇವೆ. ಹಾಗಾಗಿ ರಾಮಾಯಣ ಘಟನೆಗಳು ಪ್ರತಿಯೊಬ್ಬ ಭಾರತೀಯರಿಗೂ ತಿಳಿದುಕೊಳ್ಳಲು ಪ್ರಯತ್ನಿಸಬೇಕು ಎಂದು ತಿಳಿಸಿದರು.

ವಾಲ್ಮೀಕಿ ಜಯಂತಿ ಆಚರಣೆಗೆ ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಗಳಾಗಿದ್ದಾಗ ಆದೇಶ ನೀಡಿ, ರಜೆ ಘೋಷಣೆ ಮಾಡಿದರು. ಮೈಸೂರು ನಗರ ಪಾಲಿಕೆ ಮೇಯರ್ ಸ್ಥಾನ ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದರೂ ಎಸ್ಟಿ ಸಮುದಾಯದ ವ್ಯಕ್ತಿಗೆ ಮೇಯರ್ ಸ್ಥಾನ ನೀಡಿದ್ದು ಬಿಜೆಪಿ. ಅಂದರೆ ಬಿಜೆಪಿ ಎಂದಿಗೂ ಹಿಂದುಳಿದ,ಶೋಷಿತರ ಪರ ಎಂದರು.

ಈ ವೇಳೆ ಹಿರಿಯ ಶಿಕ್ಷಕರಾದ ಹೆಚ್.ಅಂಬುಜಾ, ಕೆ.ಎಸ್.ಮಂಜಯ್ಯ, ಕೀರ್ತಿ ಪ್ರಸಾದ್, ಜಯಮಲ್ಲರಾಜೇ ಅರಸ್, ಶಂಕರ್, ವೇದರತ್ನ, ಹೆಚ್.ಆರ್. ಸುಧಾರಾಣಿ, ಪ್ರಕಾಶ್, ಶಾಂತರಾಜು, ನಾಗನಾಯಕ್, ಪುಷ್ಪಾ, ಗೋಪಾಲಯ್ಯ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಈ ವೇಳೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಮೈಸೂರು ಜಿಲ್ಲಾ ನಾಯಕ ಶಿಕ್ಷಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪಿ.ನಾಗಲಿಂಗಪ್ಪ, ಕುಂಬ್ರಹಳ್ಳಿ ಸುಬ್ಬಣ್ಣ, ಪಿಯು ಕಾಲೇಜು ಉಪನ್ಯಾಸಕ ಸಿದ್ದರಾಜು, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಜೆ.ಗೋವಿಂದರಾಜು, ಮಂಜುನಾಥ್, ಸಂಘದ ಉಪಾಧ್ಯಕ್ಷೆ ವಿಶಾಲಾಕ್ಷಿ, ಹೆಚ್.ಜಿ. ಲೋಕೇಶ್, ಲಿಂಗರಾಜು ಉಪಸ್ಥಿತರಿದ್ದರು.

ಉಕ್ರೇನ್ ಮೇಲೆ ಕ್ಷಿಪಣಿ ದಾಳಿ ಅಂತ್ಯ: ಪುಟಿನ್ ಸ್ಪಷ್ಟನೆ

ಮಾಸ್ಕೋ: ಉಕ್ರೇನ್ ವಿರುದ್ಧ ಇನ್ನುಮುಂದೆ ಸಾಮೂಹಿಕ ಕ್ಷಿಪಣಿ ದಾಳಿ ನಡೆಸುವುದಿಲ್ಲ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಹೇಳಿದ್ದಾರೆ. ತನ್ನ ಕನಸಿನ ಕ್ರಿಮಿಯಾ ಸೇತುವೆಯನ್ನು ಉಕ್ರೇನ್ ಉಡೀಸ್ ಮಾಡಿದ ಬಳಿಕ ಡೆಡ್ಲಿ ರಾಕೆಟ್‌ಗಳ ಮೂಲಕ ಸತತ ದಾಳಿ ನಡೆಸಿದ ರಷ್ಯಾ ಇದೀಗ ಕ್ಷಿಪಣಿ ದಾಳಿ ನಡೆಸುವುದಿಲ್ಲ. ಪಾಶ್ಚಿಮಾತ್ಯ ದೇಶವನ್ನು ನಾಶಗೊಳಿಸುವುದು ಕ್ರೆಮ್ಲಿನ್ ಉದ್ದೇಶವಲ್ಲ ಎಂಬುದಾಗಿ ಸ್ಪಷ್ಟನೆ ನೀಡಿದೆ.

ರಷ್ಯಾದ ಮಾರಣಾಂತಿಕ ಕ್ಷಿಪಣಿ ದಾಳಿಯು ಉಕ್ರೇನ್‌ನ ಹಲವು ಮೂಲ ಸೌಕರ್ಯಗಳಿಗೆ ಹೊಡೆತ ನೀಡಿದೆ. ಅಲ್ಲದೇ ಅಮಾಯಕರ ಪ್ರಾಣ ಬಲಿ ತೆಗೆದುಕೊಂಡಿದೆ. ಕುಡಿಯುವ ನೀರು ಹಾಗೂ ವಿದ್ಯುತ್ ಸಮಸ್ಯೆಯಿಂದಾಗಿ ಉಕ್ರೇನ್ ನಗರವು ಕತ್ತಲೆಯಲ್ಲಿ ಕಳೆಯುವಂತಾಗಿದೆ. ರಷ್ಯಾದ ಮಿಲಿಟರಿ ದಾಳಿಯನ್ನು ವಿಶ್ವದ ಅನೇಕ ನಾಯಕರು ಖಂಡಿಸಿದರು. ಇದರಿಂದ ರಷ್ಯಾ ತನ್ನ ಕ್ಷಿಪಣಿ ದಾಳಿಯಿಂದ ಹಿಂದೆ ಸರಿದಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಪ್ರತಿಕ್ರಿಯಿಸಿ, ಉಕ್ರೇನ್ ವಿರುದ್ಧ ವ್ಯಾಪಕ ದಾಳಿಯ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

ಗೃಹ ಸಚಿವಾಲಯದ ಸಲಹೆಗಾರ ಹುದ್ದೆಗೆ ನಿವೃತ್ತ ಪೊಲೀಸ್ ಅಧಿಕಾರಿ ವಿಜಯ್‌ಕುಮಾರ್ ರಾಜೀನಾಮೆ



ನವದೆಹಲಿ: ವೀರಪ್ಪನ್ ಎನ್‌ಕೌಂಟರ್ ತಂಡದಲ್ಲಿದ್ದ ಖ್ಯಾತ ಪೊಲೀಸ್ ಅಧಿಕಾರಿ ವಿಜಯ್ ಕುಮಾರ್ ಗೃಹ ಸಚಿವಾಲಯದ ಸಲಹೆಗಾರನ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ವೈಯಕ್ತಿಕ ಕಾರಣಗಳನ್ನು ನೀಡಿ, ಗೃಹ ಸಚಿವಾಲಯದ ಸಲಹೆಗಾರನ ಹುದ್ದೆಗೆ ವಿಜಯ್ ಕುಮಾರ್ ರಾಜೀನಾಮೆ ನೀಡಿದ್ದು, ದೆಹಲಿಯಿಂದ ಚೆನ್ನೈ ಗೆ ಮರಳಿದ್ದಾರೆ. ನಾನು ಎಂಹೆಚ್‌ಎ ಸಲಹೆಗಾರನ ಹುದ್ದೆಯನ್ನು ತೊರೆಯಲು ನಿರ್ಧರಿಸಿದ್ದು ವೈಯಕ್ತಿಕ ಕಾರಣಕ್ಕಾಗಿ ಚೆನ್ನೈನಲ್ಲಿದ್ದೇನೆ ಎಂದು ವಿಜಯ್ ಕುಮಾರ್ ಹೇಳಿದ್ದಾರೆ.

ಹೆಸರು ಬದಲಾವಣೆ

ನನ್ನ ಹೆಸರು Shilpashree Kunnegowda ಆಗಿದ್ದು ನನ್ನ ಮದುವೆ ನಂತರದಲ್ಲಿ Shilpa Raghu ಎಂದು ಎಸ್.ಎಂ. ಉಮಾವತಿ, ನೋಟರಿ, ಮೈಸೂರು. ಇವರ ಮುಂದೆ ದಿನಾಂಕ 07.10.2022 ರಂದು ಪ್ರಮಾಣೀಕರಿಸಿ ಬದಲಾವಣೆ ಮಾಡಿಕೊಂಡಿರುತ್ತೇನೆ ಇನ್ನು ಮುಂದೆ ನನ್ನ ಎಲ್ಲಾ ತರಹದ ದಾಖಲಾತಿಗಳಲ್ಲಿ Shilpa Raghu ಎಂದು ನಮೂದಾಗಿರುತ್ತದೆ.

Sd/- Shilpa Raghu

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಮೈಸೂರು ಸಿಟಿ, ಜಯನಗರ, 2ನೇ ಮೇನ್, ಮನೆ ನಂ.106 ರಲ್ಲಿ ವಾಸವಾಗಿರುವ ಎ.ಎನ್.ಪ್ರಭು ರವರ ಧರ್ಮಪತ್ನಿಯಾದ ರುಕ್ಮಿಣಿಯಮ್ಮ ಬಿ.ಎಸ್. ಮತ್ತು ಇವರ ಮಗನಾದ ಪ್ರಜ್ವಲ್.ಪಿ. ಇವರ ಇರಾದೆ ಮೇರೆಗೆ ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ.

ನನ್ನ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ಮಾರ್ಬಳ್ಳಿ ಗ್ರಾಮದ ಲೇಟ್॥ ಶಿವನಂಜಯ್ಯ ರವರ ಮಕ್ಕಳಾದ ಮಹದೇವಸ್ವಾಮಿ ಹಾಗೂ ಗಾಯತ್ರಿ ಮತ್ತು ಇವರ ಕುಟುಂಬದವರಿಂದ ಖರೀದಿಸಲು ಮುಂದಾಗಿದ್ದು, ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ವಿಧವಾದ ಹಕ್ಕು, ಭಾದ್ಯತೆ, ಹಿತಾಸಕ್ತಿಗಳು ಇದ್ದಲ್ಲಿ ಸೂಕ್ತ ದಾಖಲಾತಿಗಳೊಂದಿಗೆ ಪ್ರಕಟಣೆಯಾದ 7 ದಿನಗಳ ಒಳಗಾಗಿ ಖುದ್ದಾಗಿ ತಾವಾಗಲಿ ಅಥವಾ ವಕೀಲರ ಮೂಲಕ ನಮ್ಮ ಕಛೇರಿಗೆ ತಲುಪಿಸುವುದು ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಖರೀದಿಸುವವರಿದ್ದು, 7 ದಿನದ ನಂತರ ಬರುವ ಯಾವುದೇ ತಕರಾರುಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಮಾರ್ಬಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್, 143/6 ರಲ್ಲಿರುವ ಶ್ರೀಮತಿ ಗಾಯತ್ರಿ ರವರ ಹೆಸರಿನಲ್ಲಿ ಖಾತೆ ಇರುವ ವಿಸ್ತೀರ್ಣ 0–26 ಗುಂಟೆ ಮತ್ತು ಸರ್ವೆ ನಂಬರ್, 143/5 ರಲ್ಲಿರುವ ಶ್ರೀ ಮಹದೇವಸ್ವಾಮಿ ರವರ ಹೆಸರಿನಲ್ಲಿ ಖಾತೆ ಇರುವ ವಿಸ್ತೀರ್ಣ 0–19 ಗುಂಟೆ ಒಟ್ಟು ವಿಸ್ತೀರ್ಣ 1 ಎಕರೆ 05 ಗುಂಟೆ ಖುಷ್ಕಿ ಜಮೀನು.

ಸಹಿ/– ರಾಜೇಂದ್ರಕುಮಾರ್.ಕೆ.ಎಂ
ವಕೀಲರು ಮತ್ತು ನೋಟರಿ (ಭಾರತ ಸರ್ಕಾರ)
ನಂ.2843/1, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, R.B.ಕಾಂಪ್ಲೆಕ್ಸ್, ಜಯನಗರ, ಮೈಸೂರು–570014. ಮೊ.: 9008938598
ದಿನಾಂಕ: 14–10–2022

ಆನೇ ವರ್ಷದ ಸವಿನೆನಪು



ಹೂವಾಗಿ ಅರಳುವ ಮುನ್ನ ಮೊಗ್ಗಲ್ಲಿ ಮುದುಡಿ ವಿಧಿಯಾಟದಲ್ಲಿ ಸಿಲುಕಿದೆ. ನೀನಿರುವಾಗ ನಿನ್ನಾಸೆ, ನೀನಿಲ್ಲದೆ ಬರೀ ನೆನಪು. ಪರಮಾತ್ಮನ ಸನ್ನಿಧಿಯಲ್ಲಿ ನಿನ್ನ ಆತ್ಮಕ್ಕೆ ಚಿರಶಾಂತಿ ಸಿಗಲೆಂದು ಕೋರುವೆವು.

ನಂದೀಶ್ ಕುಮಾರ್
ಜನನ: 13.11.1997
ಮರಣ: 16.10.2016


ದುಃಖತಪ್ತರು
ತಂದೆ: ಮಂಜು, ತಾಯಿ: ಮಂಜುಳ, ಅಣ್ಣ ತಮ್ಮಂದಿರು, ಅಕ್ಕ ತಾತಂದಿರು, ಸ್ನೇಹಿತರು ಬಂಧುಬಳಗದವರು
K.G. ಕೊಪ್ಪಲು, ಮೈಸೂರು

SAD DEMISE



(1963 - 2022)
Anuradha.N
D/o. Late K.N. Narasimha Murthy, a resident of Kuvempunagar expired on 12.10.2022
Mourned by: Mother, Brother, Sister, Relatives & Friends.

6ನೇ ವರ್ಷದ ಸವಿನೆನಪು



ಎಸ್.ಮಧುಕರ್
ಜನನ : 28.3.1980 –
ಮರಣ : 16.10.2016
ನೀವು ನಮ್ಮನಗಲಿ 6 ವರ್ಷ ಕಳೆದರೂ ಸದಾನಿಮ್ಮ ನೆನಪಿನಲ್ಲಿ ಇರುವೆವು
ಇಂತಿ ದುಃಖತಪ್ತರು : ಕುಟುಂಬ ವರ್ಗದವರು

FIRST YEAR DEATH REMEMBRANCE
16-10-2021



M.MADAIAH CFTRI
WE MISS YOU
Smt. kamalamma, M.Lokesh Advocate, M.Manju, Sridevi, Harshitha & Thejas

ಎರಡನೇ ವರ್ಷದ ಪುಣ್ಯಸ್ಮರಣೆ



ಶ್ರೀಮತಿ ತಾಯಮ್ಮ
ನಿಧನ : 16.10.2020
ನೀವು ನಮ್ಮನ್ನಗಲಿ ಇಂದಿಗೆ 2 ವರ್ಷವಾದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ.
ದುಃಖತಪ್ತರು: ಪತಿ ವೆಂಕಟೇಶ್, ಮಕ್ಕಳು, ಮೊಮ್ಮಕ್ಕಳು ಹಾಗೂ ಮರಟಿಕ್ಯಾತನಹಳ್ಳಿ ಗ್ರಾಮಸ್ಥರು.